ನಾವೇನೂ ಜಗ್ಗುವುದಿಲ್ಲ ಎಂದು ಹೇಳಿಬಿಟ್ಟರು. ಆದರೆ ಅವರು ಹಾಗೆ ಬೆದರಿಕೆ ಹಾಕಿದರೂ ಯಾರೂ ಧೃತಿಗೆಡಲಿಲ್ಲ. ಚಳವಳಿಮಾತ್ರ ಎಲ್ಲೆಲ್ಲೂ ಹಾಗೆಯೇ ಮುಂದುವರಿಯಿತು. ನಾನು ಮತ್ತು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರೂ, ಶ್ರೀ ಬಿ. ವಿ. ನಾರಾಯಣರೆಡ್ಡಿಯವರೂ ಮತ್ತು ಶ್ರೀ ಕಣ್ಣಾರವರೂ ಈ ಚಳವಳಿಯಲ್ಲಿ ಭಾಗ ವಹಿಸಲು ಅರ್ಹರಲ್ಲ ಎಂದು ಒಂದು ಸರ್ಕ್ಯುಲರ್‌ನ್ನು ಹೊರಡಿಸಿದರು. "It is obvious that they are unsuited to carry out any negotiations." ಇಂಥ ಒಂದು ಸರ್ಕ್ಯುಲರ್ ಅನ್ನೂ ಹೊರಡಿಸಿದರು. ಇದು ಏನು ಚೆನ್ನಾಗಿದೆ! ಸಾಧಾರಣ ನಾಗರಿಕ ವರ್ತನೆಯಲ್ಲಿರತಕ್ಕಂಥವರು ಯಾರಾದರೂ ಸರಿಯೇ ಇಂಥ ಒಂದು ವಿಷಯದಲ್ಲಿ ಯಾರು ಬೇಕಾದರೂ ಸರ್ಕಾರದವರ ಮುಂದೆ ಬಂದು, ಇಂಥ ಒಂದು ಮುಷ್ಕರ ಆಗುತ್ತಿದೆ, ಇದರಿಂದ ದೇಶಕ್ಕೆ ನಷ್ಟವಾಗುತ್ತದೆ, ಆ ಮುಷ್ಕರಗಾರರೆಲ್ಲಾ ಬಹಳ ಕಷ್ಟಪಡುತ್ತಿದ್ದಾರೆ ಎಂಬುದಾಗಿ ಸರ್ಕಾರದವರನ್ನು ಕಂಡು ಅವರೊಡನೆ ಮಾತುಕಥೆಗಳನ್ನಾಡುವುದಕ್ಕೆ ಎಂಥವರಾದರೂ ಕೂಡ ಅರ್ಹರಾಗಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದುವೇಳೆ ನನ್ನನ್ನೂ ಮತ್ತು ನನ್ನ ಇತರೆ ಸ್ನೇಹಿತರನ್ನೂ ಸರ್ಕಾರದವರು ಇವರ ಚಳುವಳಿಯಲ್ಲಿ ಭಾಗವಹಿಸುವುದಕ್ಕೆ ಅಥವಾ ಇಂಥಾ ಸಂಧಾನ ಕಾರ್ಯಗಳಲ್ಲಿ ಪ್ರವೇಶ ಮಾಡುವುದಕ್ಕೆ ಅರ್ಹರಲ್ಲ ಎಂದು ಬರಿ ಒಂದು ಬಾಯಿಮಾತಿನಲ್ಲಾದರೂ ಹೇಳಿದ್ದರೆ ಅದನ್ನು ನಾನು ಒಂದು ಔದಾಸೀನ್ಯತೆಯಿಂದ ನೋಡುತ್ತಿದ್ದೆನು. ಆದರೆ ಇವರು ಹಾಗೆ ಮಾಡಲಿಲ್ಲ. ಒಂದು ಸರ್ಕ್ಯುಲರನ್ನೇ ಹೊರಡಿಸಿದರು. ಆದರೆ ಸರ್ಕಾರದವರಿಗೆ ಇಂಥ ಒಂದು ಮನೋಭಾವ ಇರಬಾರದು. ಇಂಥ ಮನೋಭಾವವಿರುವುದು ಪ್ರಜಾಪ್ರಭುತ್ವಕ್ಕೇ ಒಂದು ಕೊಡಲಿಪೆಟ್ಟನ್ನ ಹಾಕಿದ ಹಾಗೆ. ಇಂಥ ಮನೋಭಾವದ ಪರಿಣಾಮವಾಗಿ ಪ್ರಜಾಪ್ರಭುತ್ವವೇ ಕೊನೆಗೆ ಹೋದರೂ ಹೋಗಬಹುದು ಎಂದು ನಾನೀಗ ತಿಳಿಸಬೇಕಾಗಿದೆ. ಅನಂತರ ಕೊನೆಗೆ ಈ ಮುಷ್ಕರವನ್ನು ಮುಕ್ತಾಯ ಗೊಳಿಸುವುದಕ್ಕಾಗಿ ಶ್ರೀ ಚೆನ್ನಯ್ಯನವರು ಮುಂದೆ ಬಂದರು. ಅವರು ತುಂಬ ಆಸಕ್ತಿಯನ್ನು ವಹಿಸಿದರು. ಸರ್ಕಾರದವರ ಮುಂದೆ ಬಂದು ನಿಂತರು. ಏತಕ್ಕೆಂದರೆ ಸರ್ಕಾರದವರ ದೃಷ್ಟಿಯಲ್ಲಿ ನಾನು ಮತ್ತು ಶ್ರೀ ಕಣ್ಣಾರವರು ಸರ್ಕಾರದವರ ಮುಂದೆ ಹೋಗುವುದಕ್ಕೆ ಅರ್ಹತೆ ಇಲ್ಲದವರಾಗಿದ್ದೆವು. ಆಗ ಕೆಲವು ಮಂತ್ರಿಗಳು ಕುಂಬಳಗೋಡಿನಲ್ಲಿ ಹೋಗಿ ಕ್ಯಾಬಿನೆಟ್ ಮೀಟಿಂಗನ್ನು ಮಾಡುತ್ತಾ ಕುಳಿತಿದ್ದರು. ಮತ್ತೆ ಕೆಲವರು ಕೋಲಾರ ಜಿಲ್ಲೆಯಲ್ಲಿ ವಿಶ್ರಾಂತಿ ಪಡೆಯಲು ಹೋಗಿದ್ದರು. ಆಗೇನೋ ತುಂಬಾ ಆಸಕ್ತಿ ವಹಿಸಿ ಶ್ರೀ ಚನ್ನಯ್ಯನವರು ಇದರಲ್ಲಿ ಪ್ರವೇಶಮಾಡಿ ಶ್ರೀ ಕಣ್ಣಾರವರ ಹತ್ತಿರ ಮಾತುಕತೆನಡೆಸಿ ಮುಂದಿನ ರಾಜೀ ಸಂಧಾನಗಳಿಗೆ ಪ್ರಯತ್ನನಡಿಸಿದರು. ಕಣ್ಣಾ ರವರು ಚಿಕ್ಕವರು, ದೊಡ್ಡವರು ಅನ್ನತಕ್ಕಂಥ ಯಾವ ತಾರತಮ್ಯವನ್ನು ಅವರು ಇಡಲಿಲ್ಲ. ಈ ಪ್ರಶ್ನೆ ಶ್ರೀ ಕಣ್ಣಾರವರ ಅಥವಾ ಗೋಪಾಲ ಗೌಡರ ಪ್ರಶ್ನೆಯಾಗಿದ್ದರೆ ಅದು ಉದ್ಭವಿಸುತ್ತಿತ್ತೋ ಏನೋ. ಆದರೆ ಇದು 12 ಸಾವಿರ ಕಾರ್ಮಿಕರಿಗೆ ಸಂಬಂಧಪಟ್ಟಿದ್ದಂಥ ಪ್ರಶ್ನೆಯಾದುದರಿಂದ ಮತ್ತು ಇದೊಂದು ರೆಜಿಸ್ಟರ್ಡ್ ಸಂಘವಾದುದರಿಂದ ಅವರು ಬಹಳ ಉದಾತ್ತವಾದ ರೀತಿಯಲ್ಲಿ ನಡೆಸಿದ್ದಾರೆ. ಆದರೆ ಇಂಥಾ ಒಂದು ಸುಸಂಘಟಿತವಾದಂಥ ಯೂನಿಯನ್ನಿನ ಕಾರ್ಮಿಕರ ಬೇಡಿಕೆಗಳ ಬಗ್ಗೆ ಕಾರ್ಕೂನಗಿರಿ ಮಾಡತಕ್ಕ ಮತ್ತು ಸ್ಕೇನ್‌ಹಾಕಿ 1,000 ರೂಪಾಯಿಗಳ ಸಂಬಳ ಪಡೆಯತಕ್ಕಂಥ ಅಧಿಕಾರಿಗಳು ಬ್ಯುರೋಕ್ರೆಟಿಕ್ ಮನೋಭಾವದಿಂದ ಹೇಳಿದ್ದಕ್ಕೇ ಸರ್ಕಾರ ಪ್ರಾಧಾನ್ಯತೆ ಕೊಟ್ಟುಕೊಂಡು ಹೋಗುತ್ತಿದೆ. ಈ ರುಜುವುಹಾಕಿ 1,000 ರೂಪಾಯಿಗಳು ತೆಗೆದುಕೊಳ್ಳುವವರಿಗೆ 100 ರೂಪಾಯಿಗಳ ಸಂಬಳ ಕೊಟ್ಟು ಕಷ್ಟಪಟ್ಟು ಕೆಲಸ ಮಾಡತಕ್ಕವರಿಗೆ 1,000 ರೂಪಾಯಿ ಸಂಬಳಕೊಡಿ, ಆಗ ನೋಡೋಣ. ಹೀಗೆ ಇವರು ಬರೆಯತಕ್ಕ ಬರವಣಿಗೆಯಲ್ಲಿ ಇತಿಮಿತಿಗಳಿರಬೇಕು. ಆದರೆ ಆ ಕಾರ್ಮಿಕರ ಕಾಗದ ಪತ್ರಗಳ ಬರವಣಿಗೆಯಲ್ಲಿ ಅವರೇನೂ ಇತಿಮಿತಿಗಳನ್ನು ಇವರಹಾಗೆ ತಪ್ಪಿ ಹೋಗಿ ಕೇಳಿಲ್ಲ. ಅವರು ಕೇಳಿರತಕ್ಕವೆಲ್ಲ ಬಹಳ ನ್ಯಾಯವಾದ ಬೇಡಿಕೆಗಳು. ಆದುದರಿಂದ ಸರ್ಕಾರದವರು ತಮ್ಮ ಈ ಮನೋಭಾವವನ್ನು ಬದಲಾಯಿಸಬೇಕು. ಹೀಗೆ ಸರ್ಕಾರದವರು ತಮ್ಮ ಮನೋಭಾವವನ್ನು ಬದಲಾಯಿಸದೆ ಹೋದರೆ ಆ ಕಾರ್ಮಿಕವರ್ಗ ಉತ್ತಮ ಸ್ಥಿತಿಗೆ ಏರುವುದಾದರೂ ಹೇಗೆ ಸಾಧ್ಯ? ಈ ಅಠಾರಾ ಕಛೇರಿಯಲ್ಲಿರತಕ್ಕ ಸೆಕ್ರೆಟರಿಗಳೂ ಮತ್ತು ಶ್ರೀ ಚಾಂಡಿಯವರೂ ಸೇರಿಕೊಂಡು ಈ ಕೆಲಸ ಕಾರ್ಯಗಳನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಿದೆಯೇನು? ಇಲ್ಲ. ಈ ಅಂಶ ಸರ್ಕಾರದವರಿಗೂ ಗೊತ್ತಾಯಿತು. ಆಗ ಶ್ರೀ ಚನ್ನಯ್ಯನವರೂ ಬಂದರು. ಒಂದು ರೀತಿಯಲ್ಲಿ ಸಂಧಾನಗಳು ನಡೆಯಲು ಪ್ರಾರಂಭವಾಯಿತು. ಆಗ ಬರವಣಿಗೆಯಲ್ಲಿ ಕೆಲವು ಷರತ್ತುಗಳು ಬಂದವು. ಮತ್ತೆ ಕೆಲವು ಷರತ್ತುಗಳು ಜುಬಾನಿಯಾಗಿ ಬಂದವು. ಇಂಥಿಂಥ ತೀರ್ಮಾನ ಹೀಗೆಹೀಗೇ ನಡೆಯಬೇಕು ಎಂದು ತೀರ್ಮಾನವಾಯಿತು. ಯಾವಯಾವ ಕಾರ್ಮಿಕರು ಈ ಮುಷ್ಕರ ಹೂಡುವುದಕ್ಕೆ ಮುಂಚೆ ಯಾವಯಾವ ಕೆಲಸದಲ್ಲಿದ್ದರೋ ಅವರಿಗೆ ಆಯಾ ಕೆಲಸಗಳನ್ನೇ ಪುನಃ ಕೊಡಬೇಕೆಂದೂ, ಆಯಾ ಬಾಬಿನಲ್ಲೇ ಅವರಿಗೆ ಕೆಲಸಗಳನ್ನು ಕೊಡಬೇಕೆಂದೂ, ಅವರು ಮುಷ್ಕರಕಾಲದಲ್ಲಿದ್ದಾಗಲೂ ಅವರಿಗೆ ಸಂಬಳವನ್ನು ಪೂರ್ತಿಯಾಗಿ ಕೊಡಬೇಕೆಂದೂ ತೀರ್ಮಾನ ಮಾಡಲಾಗಿತ್ತು. ಹೀಗೆ ಕಾರ್ಮಿಕರು ಮುಷ್ಕರ ಹೂಡಿದ್ದಂಥ ಕಾಲದಲ್ಲಿ ಕೂಡ ಅವರಿಗೆ ಪೂರ್ತಿ ಸಂಬಳ ಕೊಡಬೇಕೆಂಬುದಾಗಿ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಆಕ್ಟಿನಲ್ಲೂ ಮತ್ತು ರೈಲ್ವೆ ಎಂಪ್ಲಾಯೀಸ್ ಆಕ್ಟಿನಲ್ಲೂ ಹೇಳಿದೆ. ಆದ್ದರಿಂದ ಹೀಗೆ ಅವರಿಗೆ ಪೂರ್ತಿ ವೇಜಸ್ ಕೇಳುವ ಹಕ್ಕಿದೆ.

2 P.M.

ಅದನ್ನು ತಾವು ಮಾಡಬೇಕು ಎಂದು ಹೇಳಿ ಶ್ರೀಮಾನ್ ಚನ್ನಯ್ಯನವರ ಹತ್ತಿರ ಸಂಧಾನ ನಡೆದು ಎಲ್ಲರ ಹಿತದೃಷ್ಟಿಯಿಂದ ಇದನ್ನು ಮುಗಿಸಬೇಕು ಎಂದು ಒಂದು ತೀರ್ಮಾನಕ್ಕೆ ಬಂದೆವು. ಸರ್ಕಾರ ತಾನು ಸರ್ಕಾರ ಎನ್ನತಕ್ಕಂಥ ಯಾವ ಒಂದು ಗೌರವ ಇಟ್ಟುಕೊಂಡಿದೆಯೋ, ಅದನ್ನು false dignity ಎಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡತಕ್ಕ ಮಂತ್ರಿಗೇ ಆಗಲಿ, ಅಧ್ಯಕ್ಷನಿಗೆ ಆಗಲಿ ಇತರರಿಗೇ ಆಗಲಿ dignity ಅನ್ನುವುದು ಏನಿದೆ ಅದು ಸಾಮಾನ್ಯ ಮನುಷ್ಯನಿಗೆ, ಸದಸ್ಯನಿಗೆ ಇರುವ dignity ಇರುತ್ತದೆ. ಕೆಲವರಿಗೆ ಸ್ವಲ್ಪ ಜವಾಬ್ದಾರಿ ಜಾಸ್ತಿ ಇರಬಹುದು. ಕುಳಿತುಕೊಂಡು ಕೆಲಸ ಮಾಡಿದರೆ ಮುಗಿಯುತ್ತದೆ. ಇಲ್ಲದೆ ಇದ್ದ ಸೋಗು ಹಾಕಿಕೊಂಡು ದೇಶದ ಸಮಸ್ಯೆಯನ್ನು ಬಡಿಸುವುದಕ್ಕೆ ಆ ಸೋಗು ಗಾಂಭೀರ್ಯ ಅಡ್ಡಿ ಬಂದರೆ ಅದರಿಂದ ಕೋಟಿ ರೂಪಾ

(ಶ್ರೀ ಎಸ್. ಗೋಪಾಲಗೌಡ.)

ಯಿಗಳಷ್ಟು ಹಣ ನಷ್ಟವಾಗಿದೆ. ಅಲ್ಲಿ ಕೆಲಸ ನಿಂತು ಹೋಗಿ, transmission lines ಹಾಕುವುದು ನಿಂತು ಹೋಗಿ ಅನೇಕ ತೊಂದರೆಗಳು ಉಂಟಾದುವು. ಇದಕ್ಕೆ ಯಾರು ಜವಾಬ್ದಾರರು? ಶ್ರೀಮಾನ್ 'ಹನುಮಂತಯ್ಯನವರ ಮಂತ್ರಿಮಂಡಲ ಜವಾಬ್ದಾರಿಯೇ ಅಥವಾ ನ್ಯಾಯವಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಅದಕ್ಕಾಗಿ ಹೋರಾಟ ಮಾಡಿರತಕ್ಕ ಕಾರ್ಮಿಕ ಜವಾಬ್ದಾರನೇ ಎನ್ನುವುದನ್ನು ತಾವೇ ಊಹಿಸಬೇಕು. ಯಾಕೆಂದರೆ ಎಲ್ಲ ಪ್ರಯತ್ನಗಳನ್ನೂ ಸಂಘದ ಪರವಾಗಿ ಮಾಡಿದ್ದಾರೆ. ಅವರಿಗೆ strike ಮಾಡಲೇಬೇಕೆಂಬ ಉದ್ದೇಶವಿರಲಿಲ್ಲ. ಅನಿವಾರ್ಯವಾಗಿ ಅವರ ಮೇಲೆ ಹೊರಿಸಿರತಕ್ಕ clause ತೆಗೆದರೆ ಅದರಿಂದ ಏನೂ ಅಪರಾದವಾಗುವುದಿಲ್ಲ ಎಂದು ಕೇಳಿಕೊಂಡರೂ, ಯಾರೋ ಹೇಳಿದ್ದಾರೆ, ಆ ರೀತಿ ನಡೆಯಬೇಕು ಎಂದು ಹೇಳಿ ಅದನ್ನು ಮುಂದುವರಿಸಿಕೊಂಡು ಹೋದರು. ಶ್ರೀಮಾನ್ ಸಾಹುಕಾರ್ ಚನ್ನಯ್ಯನವರ ಹತ್ತಿರ ಒಂದು ಅಗ್ರಿಮೆಂಟ್ ಆಗಿ, ಇವೊತ್ತಿಗೂ ಕೂಡ ಅವರ ಮಾತಿಗೆ ಸರ್ಕಾರ ಬೆಲೆ ; ಕೊಟ್ಟಿಲ್ಲ. ಅವರೂ ಸಹ ಎಷ್ಟೋಸಲ ಶ್ರೀಮಾನ್ ಹನುಮಂತಯ್ಯನವರ ಮನೆಗೆ ಹೋಗಿದ್ದಾರೆ, ಅವರ ಸಂಗಡ ಮಾತನಾಡಿದ್ದಾರೆಂದು ನಾನು ಕೇಳಿದ್ದೇನೆ. ಅವರ ಗೌರವ, ಸರ್ಕಾರದ ಗೌರವ, ಯೂನಿಯನ್ ಅಧ್ಯಕ್ಷರ ಗೌರವ ಎಲ್ಲರಗೌರವ ಕೂಡ ಇದರಲ್ಲಿದೆ. ಒಬ್ಬರಿಗೆ ಗೌರವವಿದೆ, ಇನ್ನೊಬ್ಬರಿಗೆ ಇಲ್ಲವೆಂದಲ್ಲ. ಒಂದು ಸಲ ಆಡಿದ ಮಾತನ್ನು ಇಲ್ಲವೆನ್ನತಕ್ಕದ್ದು ಯಾವ ನ್ಯಾಯ? ಸುಮಾರು 500 ಜನರನ್ನು ಕೆಲಸದ ಮೇಲೆ ತೆಗೆದುಕೊಳ್ಳುವುದಿಲ್ಲವೆಂದು ಮಾಡಿದ್ದೀರಿ. ಇದರಲ್ಲಿ 25 ವರ್ಷದಿಂದ temporaryಯಾಗಿ ಕೆಲಸ ಮಾಡಿಕೊಂಡು ಬಂದವನೂ ಇದ್ದಾನೆ; 14 ರೂಪಾಯಿ ಸಂಬಳದವನೂ ಇದ್ದಾನೆ. ಇವರೆಲ್ಲಾ ದುಡಿದು ದುಡಿದು ಹೆಣಗಿದ್ದಾರೆ. ಇವೊತ್ತು ಈ ಕೈಗಾರಿಕೆಯಿಂದ ಲಾಭ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ಇದರಲ್ಲಿ ಕೆಲಸ ಮಾಡುವವರನೇಕರು ಪ್ರಾಣವನ್ನು ಬಿಟ್ಟು ಕೊಂಡು, ಪ್ರಾಣಾಪಾಯಕ್ಕೆ ಸಿಕ್ಕಿ ಪ್ರಾಣ ಬಿಟ್ಟಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಆದುದರಿಂದ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕಾದರೆ, ಈ ರೀತಿಯಾದ ಮನೋಭಾವನೆಯನ್ನಿಟ್ಟುಕೊಂಡು ಸರ್ಕಾರ ಮುಂದುವರಿದರೆ, ಶ್ರೀಮಾನ್ ಚಾಂಡಿಯವರು ಮತ್ತಿತರ ಅಧಿಕಾರಿಗಳು ಸಹ ಈ ರೀತಿಯ ಮನೋಭಾವನೆಯಿಂದ ವರ್ತಿಸಿಕೊಂಡು ಹೋದರೆ, ಅದರಿಂದ ಕಾರ್ಮಿಕರಿಗೆ ಬಹಳ ತೊಂದರೆ ಯುಂಟಾಗುತ್ತದೆ. ಅಲ್ಲಿದೆ ಅಧಿಕಾರಿಗಳು ಕಾರ್ಮಿಕರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ. ಶಿಂಷಾದಲ್ಲಿರುವವನನ್ನು ಬಳ್ಳಾರಿಗೂ, ಬಳ್ಳಾರಿಯಲ್ಲಿರುವವನನ್ನು ಚಿಕ್ಕಬಳ್ಳಾಪುರಕ್ಕೂ, ಚಿಕ್ಕಬಳ್ಳಾಪುರದಲ್ಲಿರುವವನನ್ನು ಜೋಗಿಗೂ ವರ್ಗ ಮಾಡುವುದರಲ್ಲಿ ಯಾವ ನ್ಯಾಯವಿದೆ ? ಸಾಮಾನ್ಯವಾಗಿ ಏಪ್ರಿಲ್ ತಿಂಗಳಾದ ಮೇಲೆ ವರ್ಗಾವಣೆ ಮಾಡಬೇಕೆಂದಿದೆ. ಅದು ಬಿಟ್ಟು ಯಾವಾಗ ಮನಸ್ಸು ಬಂದರೆ ಆವಾಗ ಮಾಡುವುದರಿಂದ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. ಮುಷ್ಕರ ನಡೆದ ಕೂಡಲೇ ಯಾವುದೋ ದೃಷ್ಟಿಯನ್ನಿಟ್ಟುಕೊಂಡು ಈ ರೀತಿ ವರ್ಗ ಮಾಡಿದ್ದಾರೆ. ಅಲ್ಲದೆ ನೌಕರರನ್ನು ಕೆಲಸದ ಮೇಲೆ ತೆಗೆದುಕೊಳ್ಳದೆ ಇರತಕ್ಕದ್ದು, ರಜಾ ಕೇಳಿದರೆ ಈಗ ಕೊಡುವುದಕ್ಕಾಗುವುದಿಲ್ಲವೆಂದು ಹೇಳತಕ್ಕಂಥದ್ದು ಹೀಗೆ ಕಿರುಕಳ ಕೊಡತಕ್ಕ ಭಾವನೆಯಿಂದ ಈ ಸಂಸ್ಥೆಗೆ ಅಪಾರವಾದ ದಕ್ಕೆ ಬರುತ್ತದೆ. ಆ ರೀತಿಯಾದರೆ ಮಂತ್ರಿ ಮಂಡಲ ಮತ್ತು ಅವರ ಕೈ ಕೆಳಗೆ ಕೆಲಸ ಮಾಡತಕ್ಕ ಸಾವಿರ ಸಾವಿರ ರೂಪಾಯಿ ಸಂಬಳ ಪಡೆಯತಕ್ಕ ಅಧಿಕಾರಿಗಳೂ ಸಹ ಇದಕ್ಕೆ ಹೊಣೆಯಾಗುತ್ತಾರೆ ಮತ್ತು ಇದು ಒಂದು ಅಪರಾಧವೆಂದು ಸಹ ಪರಿಗಣಿಸಲ್ಪಡಬೇಕಾಗುತ್ತದೆ. ಯಾಕೆಂದರೆ ಪ್ರತಿ ದಿನದ ಕೆಲಸ ನಡೆಯಬೇಕಾದರೆ ಇವರ ಸಹಕಾರ, ಶಾಂತಿ ಮತ್ತು ಶಿಸ್ತು ಈ ಸಂಸ್ಥೆಯಲ್ಲಿ ಎಷ್ಟರ ಮಟ್ಟಿಗೆ ಅಗತ್ಯವೆಂಬುದನ್ನು ಮನಗಾಣಬೇಕು.

ಇವೊತ್ತು ಈ ವಿದ್ಯುಚ್ಛಕ್ತಿ ಇಲಾಖಾ ನೌಕರರ ಬೇಡಿಕೆಗಳನ್ನು concede ಮಾಡಿಲ್ಲ. ಮೂರು ಜನರ ಒಂದು ಕಮಿಟಿಯನ್ನು ಮಾತ್ರ ನೇಮಿಸಿದ್ದಾರೆ. ಶ್ರೀಮಾನ್ ಸಾಹುಕಾರ್ ಚನ್ನಯ್ಯನವರು ಏನು ಹೇಳಿದರೆಂದರೆ ''ಈ ಮೂವರಲ್ಲಿ ಒಬ್ಬರು judicial ಅಧಿಕಾರಿಗಳು ಇರುತ್ತಾರೆ, ಇನ್ನಿಬ್ಬರಲ್ಲಿ ಒಬ್ಬರು ಸಂಘದ ಪರವಾಗಿಯೂ, ಇನ್ನೊಬ್ಬರು ಇಲಾಖೆಯ ಪರವಾಗಿಯೂ ಇರುತ್ತಾರೆ. ಅವರು findings ಕೊಡುತ್ತಾರೆ'' ಎಂದು. ಆದರೆ ಇದು industrial tribunal; ಅಲ್ಲಿ ಅವರ findings ಏನೇ ಇರಲಿ, ಅದನ್ನು ನಮ್ಮ ಸರ್ಕಾರದವರು ಈಡೇರಿಸಲೇಬೇಕು ಎಂಬ ಕಡ್ಡಾಯವೇನೂ ಇಲ್ಲ. ಇದು ಒಂದು ತೋರುಗಾಣಿಕೆ ಕಮಿಟಿಯ ಎಂದು ನಾನು ಕರೆಯಬೇಕಾಗಿದೆ. ಈ ಕಮಿಟಿಯ ಬಗ್ಗೆ ಯಾವುದೇ ರೀತಿಯ ಕೆಟ್ಟ ಭಾವನೆಯನ್ನು ವ್ಯಕ್ತಪಡಿಸುತ್ತೇನೆ ಎಂದಲ್ಲ. ಯಾಕೆಂದರೆ ಅವರ findings ಯಾರ ಮೇಲೂ, ಯೂನಿಯನ್ ಮೇಲಾಗಲಿ, ಅಥವಾ ಇನ್ನು ಯಾರ ಮೇಲಾಗಲಿ ಬದ್ಧವಾಗಿರುವುದಿಲ್ಲ. ಇಂತಹ ಒಂದು ಕಮಿಟಿಯನ್ನು ಮಾಡಿದ್ದಾರೆ. ಇವರು ಇಲಾಖೆಯಲ್ಲಿ ಶಾಂತಿಯನ್ನು ಸ್ಥಾಪನೆಮಾಡುವುದಕ್ಕೆ ಮತ್ತು ಅವರಿಗೆ ತೃಪ್ತಿಪಡಿಸುವುದಕ್ಕೆ ಕೆಲಸ ಮಾಡಬೇಕು. ತೃಪ್ತಿ ಎಂದರೆ ಅವರು ಡಿಮಾಂಡನ್ನು ಕೊಡಲೇ ಬೇಕು ಎಂದು ಕೇಳುವುದಿಲ್ಲ. ಕಮಿಟಿಯ ನೇಮಕವನ್ನು ಒಪ್ಪಿಕೊಂಡಿದ್ದಾರೆ. ಕಾರ್ಮಿಕರ ಪರವಾಗಿ ಅವರ ಅಧ್ಯಕ್ಷರು ಒಬ್ಬ ಸದಸ್ಯರಾಗಿದ್ದಾರೆ, ಕಮಿಟಿಯವರು ಐದು ತಿಂಗಳಲ್ಲಿ ವರದಿಯನ್ನು ಒಪ್ಪಿಸಬೇಕು. ಆ ವರದಿಯನ್ನು ಪರಿಶೀಲನೆ ಮಾಡುವುದು ಅದನ್ನೆಲ್ಲ ಕಾದು ನೋಡಬೇಕು. ಸರ್ಕಾರದವರು ತಮ್ಮ ಮಾತನ್ನೇನೋ ನಡೆಸಿಕೊಡಲಿಲ್ಲ. ಅಂದ ಮಾತ್ರಕ್ಕೆ ಕಾರ್ಮಿಕರು ಅವರ ಮಾತನ್ನು ನಡೆಸಿಕೊಡುವುದಕ್ಕೆ ಹಿಂಜರಿಯುವುದಿಲ್ಲ. ಸರ್ಕಾರದವರು ಮೊದಲು ಎಲ್ಲರ ಹಿತದೃಷ್ಟಿಯಿಂದ ಎಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಬೇಕು. ಐದು ಸಾವಿರ ಜನ temporary workersನ್ನು ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ? ಆವಾಗ ತೆಗೆದುಕೊಳ್ಳುತ್ತಿದ್ದಿರಿ, ಆದರೆ ಈವಾಗ ಕೆಲಸವಿಲ್ಲವೆಂದು ಹೇಳುತ್ತಿದೀರಿ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸವಿಲ್ಲವೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದು ನಾನು ಪ್ರಶ್ನಿಸುತ್ತೇನೆ. ಇಂತಹ blatant lies ಅಥವಾ ಜನಕ್ಕೆ ಮೋಸಮಾಡತಕ್ಕಂಥ ಮಾತನ್ನು ತಾವು ಯಾವಾಗಲೂ ಆಡಬಾರದು. ಎಂದು ನಾನು ಈ ಸಭೆಯಲ್ಲಿ ಎಚ್ಚರಿಕೆ ಕೊಡುತ್ತೇನೆ. ಯಾಕೆಂದರೆ ಇವೊತ್ತು development works ಗೆ ಎಷ್ಟು ಹಣವನ್ನೊದಗಿಸಿದ್ದೀರಿ. ಎಲ್ಲೆಲ್ಲಿ transmission lines ಹಾಕಬೇಕು?

ಆದುದರಿಂದ ನಾನು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮೊದಲು ನಾವು normaleyಯನ್ನು restore ಮಾಡದೆ ಹೋದರೆ ಅದರಿಂದ ಅತ್ಯಂತ ಕೆಟ್ಟ ಪರಿಣಾಮ ಇಡೀ Service

Departmentನ ಮೇಲೆ ಉಂಟಾಗುತ್ತದೆ. ಬರೀ ನಾಲ್ಕು ಜನ ಸಾವಿರ ರೂಪಾಯಿ, ಐನೂರು ರೂಪಾಯಿ ಸಂಬಳ ತೆಗೆದುಕೊಳ್ಳುವವರ ಮಾತ್ರೇ ಪ್ರಾಧಾನ್ಯವಲ್ಲ. ಪ್ರತಿಯೊಬ್ಬ ಕಾರ್ಮಿಕನೂ ಕೂಡ, ಅವನು ಎಷ್ಟೇ ಸಣ್ಣ ಕೆಲಸ ಮಾಡಲಿ ಆತನೂ ಬಹಳ ಜವಾಬ್ದಾರನಾಗಿರುತ್ತಾನೆ. ಅವನು ಎಂಟು ಆಣೆ ಬಿಟ್ಟು ಕೊಡಬಹುದು, ಮೀಟರ್ ರೀಡಿಂಗ್ ಓದುವುದರಲ್ಲಿ ಬಿಟ್ಟು ಕೊಡಬಹುದು. ಈ ರೀತಿ ಮಾಡಿದರೆ ಅವನದು ತಪ್ಪಿತವಾಗುತ್ತದೆ. ಅದೇ ದೊಡ್ಡ ದೊಡ್ಡ ಮನುಷ್ಯರು ಮಾಡಿದರೆ ಯಾವ ರೀತಿ ಮಾಡಿದ್ದೀರಿ? Copper wire deal ಏನಿತ್ತು, ಅದನ್ನು ಏನು ಮಾಡಿದ್ದೀರಿ? ಅವರಿಗೆ ಯಾವ ಶಿಕ್ಷೆ ಕೊಟ್ಟಿದ್ದೀರಿ? ಮಂತ್ರಿಗಳು ರಾಜಿನಾಮೆ ಕೊಟ್ಟರು. ಇನ್ನೊಂದು ಶಿಕ್ಷೆ ಯಾರಿಗೆ ಕೊಡಬೇಕು? ಇದೇಯೋ ಶಿಕ್ಷೆ? ಯಾರೋ ಮಾಡಿದ ಕಾರ್ಯಕ್ಕೆ ಮಂತ್ರಿಗಳು ರಾಜಿನಾಮೆ ಕೊಟ್ಟಿದ್ದು ಶಿಕ್ಷೆ ಆಯಿತು. ಇಂಥದನ್ನು ಮಾಡಬೇಕು. ಎಷ್ಟೋ ಸಾಮಾನು ಬಿದ್ದಿದೆ. ಅದಕ್ಕೆ ಲೆಕ್ಕವಿಲ್ಲ, ಪತ್ರವಿಲ್ಲ, ಇದನ್ನೆಲ್ಲ ಯಾರು ನೋಡಿಕೊಳ್ಳುವುದು?

Mr. SPEAKER.—Hon'ble Member is exceeding the time limit.

Sri S. GOPALA GOWDA.—I think it is the only Demand that we are dealing with to-day.

Mr. SPEAKER.—There are many Hon'ble Members to speak on it.

Sri S. GOPALA GOWDA.—I don't wish to take much time. ಪದಾರ್ಥಗಳ ಸ್ಟಾಕ್, cycles convert ಮಾಡುವುದು ಇದರಲ್ಲಿ ಬೇಕಾದಷ್ಟು wastage ಕಂಡುಬರುತ್ತಿದೆ. ಅದನ್ನೆಲ್ಲ ಆಡಿಟ್ ರಿಪೋರ್ಟ್‌ನಲ್ಲಿ ನಾವು ನೋಡಿದ್ದೇವೆ. ಸಾಮಾನ್ಯವಾಗಿ ಕೆಲವು irregularities ಈ ಇಲಾಖೆಯಲ್ಲಿದೆ. ಆ ಇಲಾಖೆಯ ಅಧಿಕಾರಿಗಳು ಸರ್ಕಾರಿ ಸಂಬಳ ಕೊಟ್ಟು ಕಾರ್ಮಿಕರನ್ನು ಮನೆ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೀಗೆ ಸಾಮಾನ್ಯವಾಗಿ ಎಲ್ಲಾ ಕಡೆಯೂ ನಡೆಯುತ್ತಿದೆ. ಪೋಲಿಸ್ ಇಲಾಖೆಯಲ್ಲಿ ಮೇಲಿನಿಂದ ಹಿಡಿದು ದಫೇದಾರ್ ಮನೆಯ ತನಕ ಪೋಲೀಸಿನವರು ಪಾತ್ರೆ ತಿಕ್ಕುವುದು, ಮುಸುರೆ ತಿಕ್ಕುವುದು ಇವನ್ನೆಲ್ಲ ಮಾಡುತ್ತಾರೆ. ಇಷ್ಟೇ ಅಲ್ಲ, ಮಫ್ತಿ ಹಾಕಿಕೊಂಡು ಅಡಿಗೆ ಮಾಡುವುದು, ಕೋಳಿತಂಮ ಕೊಡುವುದು, ಇವನ್ನೆಲ್ಲ ನಾನೇ ನೋಡಿದ್ದೇನೆ. ಪ್ರತಿಯೊಂದನ್ನೂ ಪೋಲೀಸಿನವರು ಮಾಡಬೇಕು. ಇನ್ನೂ ಬೇರೆ ಕೆಲಸಗಳನ್ನು ಮಾಡುತ್ತಾರೆ. ಅವುಗಳನ್ನೆಲ್ಲ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹಾಗೆ ಈ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೂಡ mechanic ಎಂದು ತೆಗೆದುಕೊಂಡಿರುವವರಿಗೆ ಏನು ಕೆಲಸವೆಂದರೆ ಮನೆಯಲ್ಲಿ ಪಾತ್ರೆ ತಿಕ್ಕುವ mechanics. ಹೀಗೆಲ್ಲ ಕೆಲಸ ಒದಗಿಸುವ ಸಾಹೇಬರುಗಳಿದ್ದಾರೆ.

Mr. SPEAKER.—So, the opinion of Sri Mascarenhas, that there should be reduction in staff is correct.

Sri S. GOPALA GOWDA.—That is true in this aspect. ಅದನ್ನು ಹೀಗೆ justify ಮಾಡಿಕೊಳ್ಳುತ್ತೇನೆ ಮತ್ತು ಯಾವ ರೀತಿ ಹೆಚ್ಚು ಜನರನ್ನು ನೇಮಕ ಮಾಡಿಕೊಳ್ಳುತ್ತಿದ್ದರು ಎಂದು ಹೇಳುತ್ತೇನೆ. Post-war periodನಲ್ಲಿ ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲೂ ಕೆಲಸ ಹೆಚ್ಚಿದೆ ಎಂದು ಹೇಳಿ ಎಲ್ಲೆಲ್ಲಿ ಅವಕಾಶವಿತ್ತೋ ಅಲ್ಲೆಲ್ಲ ಈ ರೀತಿಯಾಗಿ appoint ಮಾಡಿದ್ದಾರೆ. ಅದನ್ನು rationalise ಮಾಡುವಾಗ ಈ ಪ್ರಶ್ನೆ ಬಂದು ಬೇರೆ ಕೆಲಸ ಕೊಡಬೇಕಾಯಿತು. ಆಹಾರ ಇಲಾಖೆ ತೆಗೆದುದರಿಂದ ಅವರಿಗೆಲ್ಲ ಕೆಲಸ ಒದಗಿಸಬೇಕು ಎಂದು ವಾದ ಮಾಡುತ್ತಿದ್ದಾರೆ. ಎಲ್ಲರ ಹಿತವನ್ನೂ ಕಾಪಾಡಬೇಕಾದ ಒಂದು ಜವಾಬ್ದಾರಿಯನ್ನು ಸರ್ಕಾರ ಹೊತ್ತಿರವಾಗ ಒಬ್ಬರನ್ನು retrenchment ಮಾಡುವಾಗ ಅವರ ಗತಿ ಏನು ಎಂದು ಆಲೋಚನೆ ಮಾಡಬೇಕು. ಇಲ್ಲದಿದ್ದರೆ socialistic pattern ಬರೀ ಮಾತಿನಲ್ಲಿ ಬಂದುಬಿಡುವುದಿಲ್ಲ. ಎಲ್ಲಿಯವರೆಗೆ ಒಬ್ಬನಿಗೆ ಕೆಲಸ ಮಾಡತಕ್ಕಂಥ ಹಕ್ಕನ್ನು ನಾವು ಕರುಣಿಸುವುದಿಲ್ಲವೋ ಅಲ್ಲಿಯವರೆಗೆ socialism ಹೇಗೆ ಬರುತ್ತದೆ? ನಿರುದ್ಯೋಗ ಪರಿಹಾರ ಹೇಗೆ ಆಗುತ್ತದೆ? ಆದುದರಿಂದ ಶ್ರೀ ಮ್ಯಾಸ್ಕರೆನ್ಹಾಸ್‌ರವರು ಹೇಳಿದ ರೀತಿ ಹೆಚ್ಚು ಜನರಿದ್ದರೆ ಅವರನ್ನೆಲ್ಲ ಶ್ರೀ ಮ್ಯಾಸ್ಕರೆನ್ಹಾಸ್‌ರವರ ಮನೆಗೆ ಕಳುಹಿಸೋಣವೇ? ಹಾಗೆ ಅವರು ಜವಾಬ್ದಾರಿ ತೆಗೆದುಕೊಂಡರೆ ಹಾಗೂ ಮಾಡಬಹುದು. ಆ ಇಲಾಖೆಯ ಕೆಲಸ ಸುಸೂತ್ರವಾಗಿ ನಡೆಯಬೇಕಾದರೆ, ಗುರುತರವಾದ ಒಂದು ದೊಡ್ಡ ಕೈಗಾರಿಕೆ, ಅತಿ ಉಪಯುಕ್ತವಾದ ಕೈಗಾರಿಕೆ, ಬೆಳೆಯತಕ್ಕ ಒಂದು ಕೈಗಾರಿಕೆ, ಹೊನ್ನೆಮರಡು ಯೋಜನೆಯನ್ನು ಮಾಡಬೇಕು, ದೊಡ್ಡ ಪ್ರಾಜೆಕ್ಟನ್ನು ಮಾಡಬೇಕು; ಮೈಸೂರು ದೇಶ ವಿದ್ಯುಚ್ಛಕ್ತಿಯಲ್ಲಿ ಬಹಳ ಮುಂದುವರಿದಿದೆ ಎಂದು ಹೇಳಿಕೊಳ್ಳುವಂತೆ ಕಾರ್ಯಗತ ಮಾಡಬೇಕಾದರೆ ಕಾರ್ಮಿಕರೇ ಅದಕ್ಕೆ ಅಡಿಗಲ್ಲು ಎಂದು ಹೇಳಬೇಕು. ಅವರಮೇಲೆ ಅವಲಂಬಿಸಿ ಈ ಉದ್ಯಮ ಬೆಳೆದುಬರತಕ್ಕದ್ದೇ ಹೊರತು ನಾನು ಅಥವಾ ಶ್ರೀ ಚಾಂಡಿಯವರು ಅಥವಾ ಇನ್ನೊಬ್ಬರ ಮೇಲೆ ಅವಲಂಬಿಸಿರುತ್ತದೆ ಎಂದು ಯಾರೂ ನಂಬುವುದಕೆ ಆಗುವುದಿಲ್ಲ. ಈ ಕಾರ್ಮಿಕರ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸುವುದಕ್ಕೆ ಎಲ್ಲ ಅವಕಾಶಗಳನ್ನೂ ಮಾಡಿಕೊಡಬೇಕು ಮತ್ತು ಅದಕ್ಕೆ provision ಕೂಡ ಮಾಡಿಕೊಳ್ಳಬೇಕು. ಇವೊತ್ತು depreciation ತೆಗೆಯುವುದರಿಂದ interestನ್ನು ಸಹ ಅದು ಕೊಡುತ್ತಿಲ್ಲ ಎಂದು ಹೇಳಿದರೆ ನಾನು ಅವರಿಗೆ ಜವಾಬು ಕೊಡುತ್ತೇನೆ. ಏನೆಂದರೆ, ವಿದ್ಯುಚ್ಛಕ್ತಿ ಉತ್ಪತ್ತಿಗೆ ಎಷ್ಟು cost ಬೀಳುತ್ತದೆ ಅಷ್ಟನ್ನಾದರೂ ನೀವು ಪಡೆದುಕೊಳ್ಳದೆಹೋದರೆ ಲಾಭ ಹೇಗೆ ಬರುತ್ತದೆ? ಆರು ಕಾಸಿಗೆ ಉತ್ಪತ್ತಿಯಾಗುವುದನ್ನು ಮೂರು ಕಾಸಿಗೆ ಮಾರಿದರೆ ಅದರಿಂದ ಲಾಭ ಹೇಗೆ ಬರುತ್ತದೆ? Consumer ಆದವನು ಇವೊತ್ತು ಕಟ್ಟಿಗೆ ತಂದು ಬೆಂಕಿ ಮಾಡುವುದಕ್ಕೆ ಸೀಮೆ ಎಣ್ಣೆ ತಂದು ಬೆಂಕಿ ಹಚ್ಚುವುದಕ್ಕೆ ಜಾಸ್ತಿ ಖರ್ಚಾಗುವುದಿಲ್ಲವೆ? If electricity becomes costly ಆಗ ನಾವೇನು ಮಾಡುವುದಕ್ಕೆ ಆಗುತ್ತದೆ? ಮೂರು ಕಾಸಿಗೆ ನಾವು ಉತ್ಪತ್ತಿ ಮಾಡಿದರೆ ನಾವು ಎಲ್ಲರಿಗೂ ಮೂರು ಕಾಸಿಗೇ ಕೊಡಬಹುದು. ಈ ಅಂಶವನ್ನೆಲ್ಲ ಪರಿಗಣಿಸಿದರೆ ಈಗ ಬಿದ್ದಿರತಕ್ಕ ಸ್ಟಾಕನ್ನು ಏನು ಮಾಡಬೇಕು? ಸಾವಿರ ಸಾವಿರ ರೂಪಾಯಿ ಸಂಬಳದ ಅಧಿಕಾರಿಗಳನ್ನು ಹೆಚ್ಚುಮಾಡುತ್ತ ಹೋದರೆ, ಕಾರ್ಮಿಕರನ್ನು ಕಡೆಗಾಣಿಸುತ್ತ ಹೋದರೆ ಹೇಗೆ socialism ಬರುತ್ತದೆ, ಹೇಗೆ ಆಡಳಿತ ನಡೆಯುತ್ತದೆ, ಹೇಗೆ ಶಾಂತಿಯುಂಟಾಗುತ್ತದೆ. ಶಾಂತಿ ನೆಲಸುವುದಕ್ಕೆ ಮೂಲಭೂತ ಅವಶ್ಯಕತೆಗಳು ಏನೇನಿವೆಯೋ ಅವುಗಳನ್ನು ಈಡೇರಿಸದೆ ಹೋದರೆ ಯಾವ ಕಾರ್ಮಿಕ ಕ್ಷೇತ್ರದಲ್ಲೂ ಶಾಂತಿಯುಂಟಾಗುವುದಿಲ್ಲ. ದೊಡ್ಡ

(SRI S. GOPALA GOWDA.)

ದೊಡ್ಡ ಅಧಿಕಾರಿಗಳಾದವರಿಗೆ ಕೂಡ ಅವರ grievances ಇದ್ದೇ ಇದೆ. ಅವರು ಯಾವುದನ್ನು ತಾನೇ ಬಿಟ್ಟಿದ್ದಾರೆ? ಮನೆ ಕಟ್ಟುವುದಕ್ಕೆ ಲಕ್ಷಗಟ್ಟಲೆ ರೂಪಾಯಿ ಕೊಡಿ ಎಂದು ಕೇಳುತ್ತಾರೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಎಲ್ಲರಿಗೂ ಮನೆ ಕೊಟ್ಟಿದ್ದೇವೆ ಎನ್ನುವುದು ನಿಜವಾದ ಮಾತೇ? ಎಲ್ಲರಿಗೂ ಮನೆ ಕೊಟ್ಟಿದ್ದೇವೆ, ಎಲ್ಲರಿಗೂ ಅನುಕೂಲ ಕಲ್ಪಿಸಿ ಕೊಟ್ಟಿದ್ದೇವೆಂದು ಸಾಹೇಬರಿಗೆ ಬಂಗಲೆ ಮಾಡಿಕೊಟ್ಟಿದ್ದೀರಿ. ಆದುದರಿಂದ ನಾನು ಇಲಾಖೆಯ ಕಾರ್ಮಿಕರ ಹಿತದೃಷ್ಟಿಯಿಂದ ಮಾತ್ರವಲ್ಲ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿರತಕ್ಕದ್ದು. ಈ ಸಭೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಹಾಗೆ, ಎಲ್ಲ ಜವಾಬ್ದಾರಿಯನ್ನೂ ಹೊತ್ತುಕೊಂಡಿದೆ. ಆದುದರಿಂದ ಈ ಸಂದರ್ಭದಲ್ಲಿ ಕಾರ್ಮಿಕರ ವಿಷಯವಾಗಿ ಮಾನ್ಯ ಸದಸ್ಯರೆಲ್ಲರೂ ಒತ್ತಾಯ ಮಾಡಬೇಕು. ಕಾರ್ಮಿಕರಿಗೆ ಈಗ ತಕ್ಷಣದಲ್ಲಿ ಆಗಬೇಕಾದಂಥ ಪರಿಹಾರವೆಂದರೆ ಎಲ್ಲರಿಗೂ ಕೆಲಸ ಕೊಡತಕ್ಕದ್ದು. ಇದನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಹೇಳಬೇಕಾಗಿದೆ. ಅದೇನೆಂದರೆ, ಅಮಾನುಷವಾಗಿ ಈ ಕಾರ್ಮಿಕ ಮುಷ್ಕರವನ್ನು ಹತ್ತಿಕ್ಕಿದರು. ಈ ರೀತಿಯಾಗಿ ಹತ್ತಿಕ್ಕಿದ ಮೇಲೆ black legs ಎಂದರೆ ಯಾರು ಮುಷ್ಕರ ಮಾಡುತ್ತೇವೆಂದು ವೋಟು ಕೊಟ್ಟು ಸರ್ಕಾರದಲ್ಲಿ ಏನಾದರೂ increment ಸಿಕ್ಕುತ್ತದೆ, ಇನ್ನೊಬ್ಬರ ಬಾಲ ಹಿಡಿದರೆ ಏನಾಗುತ್ತದೆ ಎಂದು ಸಣ್ಣ ದ್ರೋಹಮಾಡಿ ಮುಷ್ಕರದಲ್ಲಿ ಭಾಗವಹಿಸಲಿಲ್ಲವೋ ಅಂಥವರಿಗೆ ಕಾರ್ಯದರ್ಶಿಯವರು congratulations ಕೊಟ್ಟಿದ್ದಾರೆ. ಸರ್ಕಾರದವರು ಇಂಥದನ್ನೆಲ್ಲ ಮಾಡಿದ್ದಾರೆ. ಇದು ಹಿಂದೆ ನಡೆದುಹೋದ ವಿಷಯ. ಈಗ ಸರ್ಕಾರದವರು ಮುಖ್ಯವಾಗಿ ಈ industry ಯನ್ನು ಬೆಳೆಸುವುದಕ್ಕೆ normalcyಯನ್ನು restore ಮಾಡಬೇಕು. ಅವರು ಎಲ್ಲರಿಗೂ ಕೆಲಸವನ್ನು ಕೊಡಲೇಬೇಕು. ಮತ್ತು ಮುಷ್ಕರ ಕಾಲದಲ್ಲಿ ಅವರಿಗೆ ಕೊಡಬೇಕಾಗಿದ್ದ ಕೂಲಿಯನ್ನು ಕೊಡಲೇಬೇಕು. ಇಲ್ಲದೇ ಹೋದರೆ ಶಾಂತಿ ನೆಲಸುವುದಿಲ್ಲ ಮತ್ತು ಆ ಇಲಾಖೆಯ ಮುಖಾಂತರ ಮಾಡತಕ್ಕ ಖರ್ಚುಗಳಲ್ಲಿ ನಮಗೆ. ಎಂದರೆ ಸಂಸ್ಥಾನಕ್ಕೆ ಬಹುಭಾಗ ಲುಕ್ಸಾನು ಕೂಡ ಆಗುವ ಸಂಭವ ಇದೆ. ಈ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯದೇ ಇರತಕ್ಕ ಸಂಭವ ಇದೆ. ಆದ್ದರಿಂದ ಈ ಎಲ್ಲಾ ಬೇಡಿಕೆಗಳನ್ನೂ—ಅವು ಏನೆಂಬುದನ್ನು ನಾನು ಹೇಳಬೇಕಾದ್ದಿಲ್ಲ, ಇಂಥಿಂಥವನ್ನು ಮಾಡಿದ್ದೇವೆ ಎಂದು ಹೇಳಿ ಇಲ್ಲಿ ಕುಳಿತಿರುವವರಿಗೆ ಗೊತ್ತಿದೆ—ಪೂರೈಸಿಕೊಡಬೇಕು. ಸಂಘ ಮುರಿಯಬೇಕು, ಒಗ್ಗಟ್ಟನ್ನು ಕೆಡಿಸಬೇಕು ಎಂದು ಏನೇನು ಮಾಡಿದ್ದಾರೋ ಆ ಎಲ್ಲಾ ವಿಧಾನಗಳನ್ನೂ ವಾಪಸು ತೆಗೆದುಕೊಳ್ಳಬೇಕು. ದೇಶದ ಹಿತದೃಷ್ಟಿಯಿಂದ, ಎಲ್ಲರ ಹಿತದೃಷ್ಟಿಯಿಂದ, ಶ್ರೀ ಸಾವುಕಾರ್ ಚನ್ನಯ್ಯನವರ ಗೌರವ ದೃಷ್ಟಿಯಿಂದಲೂ ಕೂಡ ಇದನ್ನು ತಾವು ಮಾಡುತ್ತೀರಿ ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ವಿದ್ಯುಚ್ಛಕ್ತಿ ಇಲಾಖೆ ಇಂಡಿಯಾ ದೇಶದಲ್ಲಿ ಪ್ರಥಮವಾಗಿ ಮೈಸೂರಿನಲ್ಲಿ ಸ್ಥಾಪಿತವಾಗಿ, ಅದರಿಂದ ಈ ನಾಗರಿಕತೆಯ ಅನುಕೂಲ ಸೌಕರ್ಯಗಳು ಪಟ್ಟಣವಾಸಿಗಳಿಗೆ ಒದಗುತ್ತಾ ಇದೆ. ಈಚೆಗೆ ಎಂದರೆ ಕಳೆದ ಐದು-ಆರು ವರ್ಷಗಳಿಂದಲೂ ಈಚೆಗೆ ಎಂದು ಇಟ್ಟುಕೊಂಡರೂ ಕೂಡ ಹಳ್ಳಿಗಾಡಿನವರಿಗೇನೋ ಸ್ವಲ್ಪ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆ ಪ್ರಯತ್ನ ಹೇಗಿದೆ ಎಂದರೆ ಅಲಂಕಾರಿಕವಾಗಿದೆ ಇಂಡಿಯಾ ಸರ್ಕಾರದವರು ಕೆಲವು ಗ್ರಾಂಟುಗಳನ್ನು ಕೊಡುತ್ತಾರೆ; ಕೆಲವು ಸಾಲದ ರೂಪವಾಗಿ ಕೊಡುತ್ತಾರೆ. ಗ್ರಾಮಗಳಲ್ಲಿ ಅದರಲ್ಲೂ ಕೂಡ ವ್ಯವಸಾಯಕ್ಕೆ ಬಹಳ ಅವಶ್ಯಕವಾಗಿದ್ದಂಥ ನೀರಿನ ಪಂಪುಗಳನ್ನೊದಗಿಸುವುದಕ್ಕೆ ಅವರು ಕೊಟ್ಟಿರುವ ಲೆಕ್ಕದಂತೆ ಸುಮಾರು 5,600 ಕಿಲೋವಾಟ್ ಮಾತ್ರ ಕೊಟ್ಟಿದ್ದಾರೆ. ಕೈಗಾರಿಕೆಗಳಿಗೆ ಒಂದು ಲಕ್ಷ ಐದು ಸಾವಿರ ಕಿಲೋವಾಟ್ ಕೊಟ್ಟಿದ್ದಾರೆ. ಇಲ್ಲಿಯವರೆಗೂ ಕೂಡ ಕೇವಲ ಈ ಕೈಗಾರಿಕೆಗೆ ಮತ್ತು ಅಲಂಕಾರದ ದೀಪ ವಗೈರೆ ಉಪಯೋಗಕ್ಕೆ ಮಾತ್ರ ಒದಗಿಸುತ್ತಾ ಇದ್ದಂಥ ವಿದ್ಯುಚ್ಛಕ್ತಿಯನ್ನು ಜನಗಳಿಗೆ ಮುಖ್ಯ ಆಧಾರವಾದ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಮತ್ತು ವ್ಯವಸಾಯಗಾರರಿಗೆ ಮಳೆ ಹೋಗಿ ಕ್ಷಾಮ, ದುರ್ಭಿಕ್ಷ ಉಂಟಾದ ಕಾಲದಲ್ಲಿ, ಸ್ವಲ್ಪ ಮಟ್ಟಿಗೆ ಅವರ ಜೀವನ ಆಧಾರಕ್ಕೆ ಮತ್ತು ಅವರು ಲಾಭಕರವಾಗಿ ವ್ಯವಸಾಯ ಉದ್ಯಮವನ್ನು ನಡೆಸುವುದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ ಇಂಡಿಯಾ ಸರ್ಕಾರದವರೂ ಕೂಡ ಕಳೆದ ಐದುವರ್ಷದಿಂದ ಪ್ರತಿ ವರ್ಷ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಾಗ್ಯೂ ಕೂಡ ಅದರಲ್ಲಿ ಸಾಕಾದಷ್ಟು ಪ್ರಗತಿ ನಡೆದಿಲ್ಲ. ಕೇವಲ 6,000 ಕಿಲೋವಾಟ್ ಮಾತ್ರ ಉಪಯೋಗಕ್ಕೆ ಕೊಟ್ಟಂತೆ ಆಗಿದೆ. ಇದೂ ಅಲ್ಲದೆ ಈ ಇಲಾಖೆಯಲ್ಲಿ ಈಗತಾನೆ ಕೊಟ್ಟಿರುವ ಲೆಕ್ಕದ ಪ್ರಕಾರ, ಉತ್ಪನ್ನ ಖರ್ಚು ಮತ್ತು ಅದನ್ನು ಮಾರುವ ದರ ಕೂಡ ಕೈಗಾರಿಕೆಯವರಿಗೆ ವಿಪರೀತ ರಿಯಾಯಿತಿ ದರದಲ್ಲಿ ಕೊಟ್ಟಿದ್ದಾರೆ. ವ್ಯವಸಾಯಗಾರರಿಗೆ ಅಷ್ಟು ರಿಯಾಯಿತಿ ದೊರೆತಿಲ್ಲ. ವ್ಯವಸಾಯಗಾರರಿಗೆ ಆರು ಕಾಸಿನಂತೆ ಇದ್ದುದನ್ನು ಏಕ್‌ದಂ ಒಂಭತ್ತು ಕಾಸಿಗೂ ಕೂಡ ಹೆಚ್ಚಿಸುವುದಕ್ಕೆ ಪ್ರಯತ್ನ ಪಟ್ಟರು. ಆದರೆ ಈ ಸಭೆಯವರು ಅದನ್ನು ಒಗ್ಗಟ್ಟಾಗಿ ವಿರೋಧಿಸಿದ್ದರಿಂದ ಸದ್ಯಕ್ಕೆ ಅದು ಹಿಂದೆ ನಿಂತಿದೆ. ಯಾವರೀತಿಯಲ್ಲೂ ಕೂಡ ರೈತರ ವಿಚಾರದಲ್ಲಿ ಅಷ್ಟಾಗಿ ಆಸಕ್ತಿಯನ್ನು ತೋರಿಸದೇ ಇರುವುದಕ್ಕಾಗಿ ಬಹಳ ವಿಷಾದ ಪಡಬೇಕಾಗಿದೆ. ಈ ಇಲಾಖೆಯ ಉತ್ಪನ್ನವನ್ನು ನೋಡಿದರೆ ವರ್ಷೇವರ್ಷೇ ಕಮ್ಮಿ ಆಗುತ್ತಾ ಇದೆ. ಅದೂ ಅಲ್ಲದೆ ಗ್ರಾಮಾಂತರಗಳಿಗೆ ಕೊಟ್ಟಿರುವ ದುಡ್ಡು, ಒಂದು ಉದಾಹರಣೆ ಹೇಳುವುದಾದರೆ, ಒಟ್ಟು ಸರ್ಕಾರಕ್ಕೆ ಕಳೆದವರ್ಷ ಎಂಭತ್ತೇಳು ಲಕ್ಷ ಬಂದಿದ್ದು ಈ ವರ್ಷ ಎಂಬತ್ತು ಲಕ್ಷ ಅಂದಾಜು ತೋರಿಸಿದ್ದೀರಿ, ಅಂದರೆ ನಾವು ಅಷ್ಟು ವಿದ್ಯುಚ್ಛಕ್ತಿ ಉಪಯೋಗ ಹೆಚ್ಚು ಪಡೆಯುತ್ತಾ ಇದ್ದರೂ ಕೂಡ ಉತ್ಪನ್ನ ಮಾತ್ರ ಕಡಿಮೆಯಾಗಿ ಬರುತ್ತಾ ಇದೆ. ಕಡಿಮೆಯಾಗುತ್ತಾ ಬಂದರೂ ರೈತರಿಗೇನಾದರೂ ಪ್ರತಿಫಲ ಆಗಿದೆಯೋ ಎಂದರೆ ಏನೇನೂ ಕಾಣುವುದಿಲ್ಲ. ಎಷ್ಟೋವರ್ಷಗಳಿಂದ ವಿದ್ಯುಚ್ಛಕ್ತಿಯ ಪಂಪು ಬೇಕೆಂದು ಅದಕ್ಕೆ ಅಡ್ವಾನ್ಸ್ ಡಿಪಾಸಿಟ್ ಕೊಟ್ಟು ಕಾಯ್ದರೂ ಕೂಡ ಇದುವರೆಗೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಷ್ಟೋ ಕೆಲಸಗಳು ಮಂಜೂರಾಗಿದ್ದರೂ ಕೂಡ ಏನೋ ನೆಪದಿಂದ ಅದನ್ನು ನಿಲ್ಲಿಸಿದ್ದಾರೆ. ಮತ್ತು ಕೆಲವು ವೇಳೆ ಕಂಬಗಳನ್ನು ತಂದುಹಾಕಿ ನಿಲ್ಲಿಸಿದ್ದು ಕೂಡ ತಿರುಗಿ ವಾಪಸು ಕಿತ್ತುಕೊಂಡು ಹೋಗಿರುವ ಸಂಭವಗಳೂ ಉಂಟು. ಸಾಮಾನ್ಯವಾಗಿ ಯಾವುದಾದರೂ ಒಂದು ಫ್ಯಾಕ್ಟರಿ ಮತ್ತು ಇತರ ದೀಪ ವಗೈರೆ ಕೇಳುವ ಕಡೆ first priority ಕೊಡುತ್ತಾ ಇರುವುದರಿಂದ ಈ

ಪಂಪು ಸೆಟ್ಟುಗಳಿಗೆ ಕೇಳುತ್ತಾ ಇರುವುದೂ ಕೂಡ ನಮಗೆ ಗೊತ್ತಾಗುತ್ತಾ ಇದೆ. ಸರಕಾರದ ಖರ್ಚನ್ನು ಕೊಡುತ್ತಾ ಇರತಕ್ಕ ಸಾಮಾನ್ಯ ಬಡ ರೈತ, ತನ್ನ ಕಷ್ಟಾರ್ಜಿತವಾದ ಕಂದಾಯ ನ್ಯಾಯವಾಗಿ ಕೊಟ್ಟಿದ್ದರಿಂದ ಈ ವಿದ್ಯುಚ್ಛಕ್ತಿ ಇಲಾಖೆ ಸ್ಥಾಪನೆ ಆಗಿದೆ. ಏಕೆಂದರೆ ಈ ಇಲಾಖೆ ಸ್ಥಾಪನೆ ಆದಾಗ ನಮ್ಮ ಸಂಸ್ಥಾನದ ಉತ್ಪನ್ನ ಎರಡುಕೋಟಿ, ಮೂವತ್ತು ಲಕ್ಷ. ಆಗ ಜಮೀನು ಕಂದಾಯ ಒಂದು ಕೋಟಿ ಮೂವತ್ತು ಲಕ್ಷ ಇತ್ತು, ಅದು ಮುಖ್ಯಬಾಬು ಆಗಿತ್ತು. ಅದರಿಂದಲೇ ಕೈಗಾರಿಕೆ ಇವುಗಳನ್ನೆಲ್ಲಾ ಸ್ಥಾಪನೆ ಮಾಡಿದರು. ಹಾಗಿರುವಾಗ ಆ ರೈತರಿಗೇ ಈ ಇಲಾಖೆಯ ಉಪಯೋಗ ಇವೊತ್ತು ಇಲ್ಲ. ಇವೊತ್ತಿನ ದಿವಸ ಹಿಂದೆ ಉತ್ಪನ್ನ ಮಾಡಿದ್ದ, ಒಂದುಕೋಟಿ ರೂಪಾಯಿಗಳ ಖರ್ಚುನಲ್ಲಿ ಸುಮಾರು ಮೂವತ್ತು ಸಾವಿರ ಕಿಲೋವಾಟ್ ಉತ್ಪನ್ನವಾಗತಕ್ಕ ಶಿವನಸಮುದ್ರ ಸ್ಟೇಷನ್ ಸ್ಥಾಪನೆ ಆಯಿತು. ಈಗ ಎಂಭತ್ತೊಂದು ಸಾವಿರಕ್ಕೆ ಏಳೂವರೆ ಕೋಟಿ ರೂಪಾಯಿ ಖರ್ಚಾಗಿದೆ. ಇಷ್ಟು ಜಾಸ್ತಿ ಖರ್ಚಾಗುವಾಗ ರೈತರಿಗೆ ಒದಗಿಸಬೇಕೆಂದರೆ ಅವರು ಕೊಡಬೇಕಾಗಿರತಕ್ಕ ದುಡ್ಡು ಜಾಸ್ತಿ ಕೂಡ ಕೊಡಬೇಕಾಗಿದೆ ಈಗ ಕೋಲಾರದ ಚಿನ್ನದಗಣಿಯವರಿಗೆ ಕೊಡುವ ರೇಟನ್ನು ನೋಡೋಣ. ಈಗಾಗಲೇ ನನ್ನ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ಅದಕ್ಕೆ ತಪಶೀಲು ಹೇಳಿದ್ದಾರೆ. ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆಗೆ ಅಲ್ಲಿ ಉತ್ಪನ್ನ ಆದಂತೆ ಕೊಡುವಂತೆ ಮಾಡಿದ್ದಾರೆ. ಅದೇ ರೀತಿ ವ್ಯವಸಾಯಗಾರರಿಗೂ ಕೂಡ ಬೆಳೆ ಆದಂತೆ ಕೊಡುವ ಏರ್ಪಾಡು ಏಕೆ ಮಾಡಲಿಲ್ಲ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಬಹಳ ಹಿಂದೆ ಆ ರೀತಿ ಮಾಡಲಾಗಿತ್ತು, ಆ ಕಾಲಾವಧಿ ಮುಗಿದಮೇಲೆ ಅದನ್ನು ಬದಲಾವಣೆ ಮಾಡಬೇಕು, ಆ ರೀತಿ ಬದಲಾಯಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಅದೇರೀತಿ ಒಂದು chance ರೈತರಿಗೆ ಕೊಟ್ಟು ಆ ಮೇಲೆ ಬದಲಾಯಿಸಿ ಎಂದು ಕೇಳುತ್ತಾ ಇದ್ದೇನೆ. ನಮ್ಮ ರೈತರಿಗೂ ಒಂದು chance ಕೊಡಿ. ಅವರು ದಷ್ಟಪುಷ್ಟರಾಗಿ ಬೆಳೆಯಲಿ, ಆ ಮೇಲೆ ಅದನ್ನು ಕಿತ್ತುಕೊಳ್ಳುವುದಕ್ಕೆ ಅವಕಾಶವಿದೆ ಎಂದು ಹೇಳುತ್ತಾ ಇದ್ದೇನೆ. ·25 annas per unit ಎಂದು ಕೊಟ್ಟಿದ್ದೀರಲ್ಲಾ ಅದರಲ್ಲಿ ನಮ್ಮ production ಖರ್ಚು ಐದಾಣೆ ಇರಬೇಕಾಗಿದ್ದರೆ, $\frac{1}{2}$ anna ಇರುವುದನ್ನು $\frac{1}{4}$ anna ಅವನು ಕೊಡಬೇಕೆಂದರೆ, ಯಾವ ನ್ಯಾಯ ಎಂದು ಕೇಳುತ್ತಾ ಇದ್ದೇನೆ. ಸತ್ತ ಎಮ್ಮೆಯನ್ನು ಇದ್ದ ಎಮ್ಮೆ ಎಂದು ಕರೆಯಬೇಕೆಂದು ಈ ಸರ್ಕಾರದವರಿಗೆ ಅನ್ನಿಸುತ್ತಾ ಇದೆಯೋ ಏನೋ ಎಂದು ನನಗೆ ತೋರುತ್ತಿದೆ.

ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಕಳೆದ ವರ್ಷ ಮೂವತ್ತುಮೂರು ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಹತ್ತುಲಕ್ಷ ರೂಪಾಯಿ ಅದರಲ್ಲಿ savings ತೋರಿಸಿದ್ದೀರಿ. ನಾನು ಈಗ ಒತ್ತಾಯ ಮಾಡುವುದು ಏನೆಂದರೆ ಎಲೆಕ್ಟ್ರಿಫಿಕೇಷನ್ ಸಾಧ್ಯವಾದ ಮಟ್ಟಿಗೂ ಗ್ರಾಮಾಂತರಗಳಿಗೆ ಹೆಚ್ಚಾಗಿ ಕೊಡಬೇಕು. ಅವರ ಆರ್ಥಿಕ ಸ್ಥಿತಿ ಉತ್ತಮವಾಗಬೇಕು. ಅದರಿಂದ ಇತರ ತೆರಿಗೆಗಳನ್ನು ಅವನು ಕೊಡುವುದಕ್ಕೆ ಶಕ್ತಿ ಬರುತ್ತದೆ. ಸಮಗ್ರವಾಗಿ ಅವರ ಆರ್ಥಿಕ ಜೀವನ ಉತ್ತಮವಾಗಬೇಕಾಗಿದ್ದರೆ ವಿದ್ಯುಚ್ಛಕ್ತಿ ಬಹಳ ಅವಶ್ಯಕ. ಸಾಮಾನ್ಯವಾದ ಒಂದು ಮಗ್ಗ ಹಾಕಿಕೊಳ್ಳಲಿಕ್ಕೆ, ಸಾಮಾನ್ಯವಾದ ಒಂದು ಗೃಹ ಕೈಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಡೆಸಲಿಕ್ಕೆ ವಿದ್ಯುಚ್ಛಕ್ತಿ ಅವಶ್ಯಕವಾಗಿದೆ. ಇದು ಒಂದು ವಿಕೇಂದ್ರೀಕರಣ ನೀತಿಯಿಂದ ಸಮರ್ಪಕವಾಗಿ ನಡೆಯುವಂತೆ ಆಗುತ್ತದೆ. ಆದ್ದರಿಂದ ಇದನ್ನು ಗ್ರಾಮಾಂತರಗಳಿಗೆ ಹೆಚ್ಚು ಹೆಚ್ಚಾಗಿ ಸಾಗಿಸಬೇಕೆಂದು ಒತ್ತಾಯಮಾಡುತ್ತೇನೆ. ಮತ್ತು ಈಗಾಗಲೇ ವಿದ್ಯುಚ್ಛಕ್ತಿ ಇಲಾಖೆಯ ಖರ್ಚು ನೋಡಿಕೊಂಡರೆ ಯಾವವೇಗದಲ್ಲಿ ಹೆಚ್ಚಾಗುತ್ತಾ ಇದೆ ಎಂಬುದು ಗೊತ್ತಾಗುತ್ತದೆ. ಅದು ಬಹಳ ಅತೃಪ್ತಿಕರವಾಗಿದೆ. ಈ ಖರ್ಚು ನಿಜವಾಗಿ ಯಥೇಚ್ಛವಾಗುತ್ತಾ ಇದೆ. ಇದಕ್ಕೆ ಒಂದು ಕಾರಣ ಅಮಾನಿ ಕೆಲಸ ನಡೆಸದೆ ಸರ್ಕಾರದವರೇ ಶಿಬ್ಬಂದಿ ಇಟ್ಟು ಮಾಡುತ್ತಾ ಇರುವುದರಿಂದ ಆ ರೀತಿ ಆಗಿದೆ. ಅಮಾನಿಮೇಲೆ ಕೆಲಸ ನಡೆಸಿದರೆ ಅನುಕೂಲವಾಗುತ್ತದೆ, ಜಾಗ್ರತೆ ಕೆಲಸ ಆಗುತ್ತದೆ, ಮತ್ತು ಅನಾವಶ್ಯಕವಾದ ಮಧ್ಯಸ್ಥಗಾರರ ತಾಪತ್ರಯ ಇಲ್ಲ ಎನ್ನುವ ಒಂದು ವಾದ ಇತ್ತು. ಆದರೆ ಈ ಇಲಾಖೆಯ ಕಾರ್ಯಕ್ರಮ ನೋಡಿಕೊಂಡರೆ ಅದು ತಪ್ಪು ಭಾವನೆ ಎಂದು ಅನ್ನಿಸುತ್ತದೆ. ಏಕೆಂದರೆ ಈಗ ಒಂದು ಆಣೆ ಖರ್ಚಾಗುವುದಕ್ಕೆ ನಾಲ್ಕು ಆಣೆ ಖರ್ಚಾಗುತ್ತಾ ಇದೆ. ಸ್ವಾಮಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನೋಡಿದ್ದೇವೆ. ಸ್ಟಾಕ್‌ವೆರಿಫಿಕೇಷನ್ ಅನ್ನುವುದು ಎಷ್ಟೋ ವರ್ಷದಿಂದ ನಡೆದೇ ಇಲ್ಲ. ಯಾವುದಾದರೂ ಒಂದು ಪೈಪು ತೆಗೆದುಕೊಳ್ಳೋಣ. ಐದು ಇಂಚಿನದು ಅಂದರೆ ಹತ್ತು ಇಂಚಿನದು ಕೊಟ್ಟಿರುವುದು ಆಮೇಲೆ ಒಂದು ಲೆಕ್ಕಕ್ಕೆ ಇನ್ನೊಂದು ಲೆಕ್ಕ ಹಾಕಿರುವುದು, ಒಂದು ದರ್ಜೆ ವೈರ್‌ಗೆ ಇನ್ನೊಂದು ದರ್ಜೆ ವೈರ್ ಹಾಕಿರುವುದು ಈ ರೀತಿ ಲೆಕ್ಕ ಎಲ್ಲದರಲ್ಲೂ ತಪ್ಪುಗಳು ಇದ್ದವು. ಈ ಇಲಾಖೆಯಲ್ಲಿ ಯಾರೂ ಚೆಕ್ ಮಾಡುವವರೇ ಇಲ್ಲವೋ ಅನ್ನುವಷ್ಟು ಮಟ್ಟಿಗೆ ನಡೆಸಿದ್ದಾರೆ. ಇದನ್ನು ಮುಂದೆ ಸರಿಪಡಿಸಬೇಕಾಗಿದ್ದರೂ ಕೂಡ ಬಹಳ ಕಾಲ ಬೇಕಾಗುತ್ತದೆ. ಇದು ಆಗಲೂ ಸರಿಹೋಗುವುದಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ, ಇವೊತ್ತು ಯಾವ ಸ್ಥಿತಿಯಲ್ಲಿ ಇದೆಯೋ ಆ ಸ್ಥಿತಿಯಲ್ಲೇ ಲೆಕ್ಕ ತೆಗೆದುಕೊಂಡು ಹೋಗಿ. ಹಾಗೆ ಮಾಡದೇ ಇದ್ದರೆ ಮುಂದೆ ಕೂಡ ಅದು ಸರಿಹೋಗುವುದಿಲ್ಲ. ಇವೊತ್ತು ಯಾವರೀತಿ ಒಂದು ಸ್ಟಾಕ್ ಇದೆ, ಯಾವಯಾವ ದರ್ಜೆಯದು ಎಷ್ಟೆಷ್ಟು ಇದೆ, ಎಂಬ ಲೆಕ್ಕ ತೆಗೆದುಕೊಂಡು ಆ ಸ್ಟಾಕನ್ನು ಬ್ಯಾಲೆನ್ಸ್ ಆಗಿಟ್ಟುಕೊಂಡು ಮುಂದೆ ಕೆಲಸ ಮಾಡುವುದು ಉತ್ತಮವಾದದ್ದು ಎಂದು ಸೂಚನೆ ಮಾಡುತ್ತೇನೆ. ಇಲ್ಲದೇ ಹೋದರೆ ಸರಿಪಡಿಸಲಾರದಷ್ಟು ಗೊಂದಲ ಆಗುತ್ತದೆ. ಅದೂ ಅಲ್ಲದೆ ಈ ಕೆಲಸ ಕಾರ್ಯಗಳಲ್ಲಿ ನನಗೆ ಅನ್ನಿಸುತ್ತದೆ, ಸಾಮಾನ್ಯವಾಗಿ ಅಮಾನಿ ಕೆಲಸ ಸರಿ ಅನ್ನುವ ಅಭಿಪ್ರಾಯದವನು ನಾನು. ಈಗ ಕೊಡುತ್ತಿರುವ ಕೆಲಸವನ್ನೆಲ್ಲಾ ಅವರಿಗೆ ಕೊಟ್ಟು ಮಾಡಿಸಿದರೆ ಶೇಕಡ ಐವತ್ತರಷ್ಟು ಉಳಿಸಬಹುದು. ಕಾಂಟ್ರಾಕ್ಟು ಮುಖಾಂತರ piece work system ಮೇಲೆ ಮಾಡುವುದು ಒಳ್ಳೆಯದು. ಕೆಲಸ ಇರಲಿ ಇಲ್ಲದೇ ಇರಲಿ ಸುಮ್ಮನೆ ಲೆಕ್ಕ ಬರೆದುಕೊಂಡು ಹೋಗುತ್ತಾ ಇರುವುದು ಜಾಸ್ತಿ ಆಗಿದೆ. ಒಂದು ಕೆಲಸಕ್ಕೆ double establishment ಇದ್ದು ಖರ್ಚು ಜಾಸ್ತಿಯಾಗುತ್ತಾ ಇದೆ. ಕೋಟ್ಯಂತರ ರೂಪಾಯಿಗಳ ವ್ಯವಹಾರ ಮಾಡುತ್ತಿರುವಾಗ ಅದನ್ನೆಲ್ಲಾ ಅಷ್ಟಾಗಿ ಸ್ಕ್ರುಟಿನೈಸ್ ಮಾಡುವುದಕ್ಕೆ ಕಷ್ಟ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೂ piece work system ಮೇಲೆ ಚಿಕ್ಕಚಿಕ್ಕದಾಗಿ ಅಲ್ಲಲ್ಲೇ ಕೆಲಸಗಳನ್ನು ಮಾಡಿಸುವುದು ಉತ್ತಮ

(ಶ್ರೀ ಬಿ. ಹುಚ್ಚೇಗೌಡ.)

ವಾಗುತ್ತದೆ. ಒಂದು ಪೀಸ್‌ವರ್ಕ್, ಇನ್ನೊಂದು ಡಿಪಾರ್ಟ್‌ಮೆಂಟಲ್ ವರ್ಕ್ ಮಾಡಿ ನೋಡಿದರೆ ವ್ಯತ್ಯಾಸ ತಾರತಮ್ಯ ಎಷ್ಟು ಎಂಬುದು ತಮಗೆ ಗೊತ್ತಾಗುತ್ತದೆ.

ಆದ್ದರಿಂದ ಸಾಧ್ಯವಾದ ಮಟ್ಟಿಗೆ ಇದನ್ನನುಸರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಹಾಗಿಲ್ಲದೆ ಇಲಾಖೆಯ ಮೂಲಕ ಆದರೆ ಟಾಪ್ ಹೆವಿ ಅಡ್ಮಿನಿಸ್ಟ್ರೇಷನ್ ಆಗಿ ಖರ್ಚು ಒಂದಕ್ಕೆ ಎರಡರಷ್ಟಾಗುತ್ತದೆ. ನಾನು ಸಲಹೆ ಮಾಡಿದಂತೆ ಮಾಡುವುದಾದರೆ ಖಂಡಿತ ಈಗ ಆಗುತ್ತಿರುವ ಖರ್ಚಿನಲ್ಲಿ ಹತ್ತರಷ್ಟು ಉಳಿಸಬಹುದು.

2-30 P.M.

ವಿದ್ಯುಚ್ಛಕ್ತಿ ಆವಶ್ಯಕತೆ ಎಷ್ಟು ಜಾಸ್ತಿಯಾಗಿದೆಯೆಂಬುದನ್ನು ನಾನು ವಿವರಿಸಿ ಹೇಳುವುದಿಲ್ಲ. ಆದಷ್ಟು ಜಾಗ್ರತೆ ಶಿಂಷಾ ಪ್ರಾಜೆಕ್ಟು ಮತ್ತು ಹೊನ್ನೆಮರಡು ಪ್ರಾಜೆಕ್ಟು ಇವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕು. ಕೊನೆಯಪಕ್ಷ ಇಪ್ಪತ್ತುಸಾವಿರ ಕಿಲೋವಾಟ್ಸನ್ನಾದರೂ ರೈತರಿಗೆ ಮೀಸಲಾಗಿಡಬೇಕು. ಈಗ ಸಂಸ್ಥಾನಕ್ಕೆ ವಿದ್ಯುಚ್ಛಕ್ತಿ ಸರಬರಾಯಿ ಸಾಲದೆ ನಮ್ಮ ಜನರು ಕಷ್ಟಪಡುತ್ತಿರುವಾಗ ಬೊಂಬಾಯಿ ಪ್ರಾಂತ್ಯಕ್ಕೆ ಸರಬರಾಯಿ ಮಾಡುವುದರಲ್ಲಿ ಒಂದು ಸಾವಿರ ಹಾರ್ಸ್ ಪವರಿನಷ್ಟನ್ನಾದರೂ ಕಡಮೆ ಮಾಡಬೇಕು. ಪವರ್ ಕೊಟ್ಟತಕ್ಷಣ ಬಾವಿಗಳು ಸಿದ್ಧವಾಗಿರುವುದಿಲ್ಲ. ಕೆಲವರು ಪವರ್ ಕೊಟ್ಟಮೇಲೆ ಬಾವಿ ತೆಗೆಯಬೇಕಾಗುತ್ತದೆ. ಆಮೇಲೆ ಪಂಪು ಹಾಕಬೇಕಾಗುತ್ತದೆ. ಮೊದಲೇ ನೂರು ಜನರಿಗೆ ಕೊಡುತ್ತೇವೆಂದರೆ ಜನರು ಸಿದ್ಧವಾಗಿರುವುದಿಲ್ಲ. ಮೊದಲು ಕ್ಯಾನ್ವಾಸ್ ಮಾಡಬೇಕು, ಹಾಗೆ ಮಾಡಿದರೆ ಯಾರೂ ಬೇಡವೆಂದು ಹೇಳುವುದಿಲ್ಲ. ಒಂದು ಕ್ರಮವಾಗಿ ಕೊಡುವುದೂ ಅಲ್ಲದೆ ಕೈಗಾರಿಕೆಗಳವರಿಗೆ ಸುಲಭರೀತಿಯಲ್ಲಿ ಒದಗಿಸಿರುವಂತೆ ವ್ಯವಸಾಯಗಾರರಿಗೂ ಸುಲಭ ದರದಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಿ ಅದನ್ನು ಉಪಯೋಗಿಸಿದರೆ ಲಾಭ ಬರುತ್ತದೆಂದು ನಂಬಿಕೆ ಹುಟ್ಟಿಸಬೇಕು. ಕೊನೆಯಪಕ್ಷ ಮೂರುಕಾಸು ದರ ಹಾಕಿದರೂ ಅನ್ಯಾಯವಿಲ್ಲ. ಒಂದು ಲಕ್ಷ ಯೂನಿಟ್ ಕೊಡುವಾಗ ಆರುಸಾವಿರ ಯೂನಿಟ್ಟಿಗೆ ಜಾಸ್ತಿದರ ಹಾಕಿದರೆ ದೂರದಲ್ಲಿರುವವರು ಪಂಪು ಸೆಟ್ಟುಗಳನ್ನು ತೆಗೆದುಕೊಳ್ಳಲು ಅವರಿಗೆ ಆಕರ್ಷಣೀಯವಾಗಿರುವುದಿಲ್ಲ. ಅದರಿಂದ ಅನಾನುಕೂಲವಾಗುತ್ತದೆ. ಆರುಕಾಸು ದರ ಹಾಕಿದರೆ ಎಕರೆಗೆ ಅರವತ್ತು ರೂಪಾಯಿ ಬೀಳುತ್ತದೆ ; ಇದು ಲಾಭದಾಯಕವಲ್ಲ. ಆದ್ದರಿಂದ ಆದಷ್ಟು ತಮ್ಮ ನೀತಿಯನ್ನು ಸಡಿಲಪಡಿಸಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ನಮ್ಮ ಮುಂದಿರತಕ್ಕ 38 ಮತ್ತು 42ನೆಯ ಡಿಮ್ಯಾಂಡುಗಳನ್ನು ಅನುಮೋದಿಸುತ್ತೇನೆ. ಮಾಗಡಿ ತಾಲ್ಲೂಕು ಬೆಟ್ಟ ಗುಡ್ಡಗಳಿರುವ ಸ್ಥಳ. 128 ಜನರು ಅಲ್ಲಿ ಹಣ ಪಾವತಿ ಮಾಡಿ ಬಹಳ ದಿವಸವಾಯಿತು. ಮೊನ್ನೆ ಮಂತ್ರಿಗಳು 27 ಪಂಪುಗಳಿಗೆ ಒಂದು ಯೋಜನೆ ಮಂಜೂರು ಮಾಡಿದ್ದಾರೆ ; ಬಾಕಿ ಪಂಪುಗಳ ಯೋಜನೆ ಸರ್ಕಾರ ಕಾರ್ಯಗತ ಮಾಡಿಲ್ಲ. ಅಲ್ಲಿ ಮಳೆ ಹೆಚ್ಚಾಗಿ ಬಾರದೆ, ದೊಡ್ಡ ದೊಡ್ಡ ಜಲಾಶಯಗಳಿಲ್ಲದೆ ರೈತಾಪಿ ಜನರಿಗೆ ತೊಂದರೆಯಾಗಿರುವುದರಿಂದ ಪಂಪುಗಳ ಸಹಾಯ ಮುಂದುವರಿಯಬೇಕಾದದ್ದು ಅಗತ್ಯವಾಗಿದೆ. ಸರ್ಕಾರದವರು ಈ ಬೇಡಿಕೆಯನ್ನು ಜಾಗ್ರತೆಯಾಗಿ ಮಂಜೂರು ಮಾಡಿ ಮಾಗಡಿ ತಾಲ್ಲೂಕಿನ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಅರಿಕೆಮಾಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಹೋಬಳಿ ಹೆಡ್ ಕ್ವಾರ್ಟರುಗಳಿಗೂ ಕೂಡ ದೀಪವನ್ನೊದಗಿಸಿಲ್ಲ. ನಮ್ಮ ಸಂಸ್ಥಾನದಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತಿದ್ದರೂ ಇಲ್ಲಿನ ಎಲ್ಲಾ ಜನರಿಗೂ ಇದರ ಉಪಯೋಗ ಲಭಿಸಿರುವುದಿಲ್ಲ. ಆದ್ದರಿಂದ ನಮ್ಮ ಸಂಸ್ಥಾನದವರಿಗೆಲ್ಲಾ ಮೊದಲು ಬೇಕಾದಷ್ಟು ಕರೆಂಟನ್ನೊದಗಿಸಿ ಅನಂತರ ಬೇರೆಯವರಿಗೆ ಆ ಸಹಾಯವನ್ನೊದಗಿಸಬೇಕೆಂದು ಮನವಿಮಾಡುತ್ತೇನೆ. ಇರಿಗೇಷನ್ ಪಂಪುಗಳನ್ನು ಜಾಗ್ರತೆಯಾಗಿ ಮಂಜೂರು ಮಾಡಿ ಯಾರುಯಾರು ಎಲ್ಲೆಲ್ಲಿ ಅಪೇಕ್ಷೆಪಡುತ್ತಾರೋ ಅವರಿಗೆಲ್ಲಾ ಅತ್ಯಾವಶ್ಯಕವಾಗಿ ಜಾಗ್ರತೆ ಮಂಜೂರು ಮಾಡಿದರೆ ದೇಶದ ಆಹಾರದ ಕಷ್ಟವೂ ತಪ್ಪುವುದಲ್ಲದೆ ಉತ್ಪತ್ತಿಯೂ ಹೆಚ್ಚಿ ಆಹಾರದ ಪದಾರ್ಥಗಳು ಕಡಿಮೆ ದರದಲ್ಲಿ ಸಿಕ್ಕಲೂ ಸಹ ಅನುಕೂಲವಾಗುತ್ತದೆ.

ಶ್ರೀಮಾನ್ ಹುಚ್ಚೇಗೌಡರು ಹೇಳಿದ ಹಾಗೆ, ಹೊನ್ನೆಮರಡು ಮತ್ತು ಶಿಂಷಾ ಪ್ರಾಜೆಕ್ಟುಗಳೆರಡೂ ಜಾಗ್ರತೆ ಮುಂದುವರಿಯಬೇಕು. ಹಿಂದೆ ಬಡ್ಜೆಟ್ ಭಾಷಣಗಳಿಗೆ ಉತ್ತರ ಕೊಡುವಾಗ ಈ ಎರಡು ಪ್ರಾಜೆಕ್ಟುಗಳನ್ನೂ ಜಾಗ್ರತೆ ಮಾಡುವುದಾಗಿ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದರು. ಆದರೆ ಸುಮಾರು 20 ವರ್ಷಗಳಿಂದಲೂ ಈ ಎರಡು ಯೋಜನೆಗಳೂ ನಮ್ಮ ಸರ್ಕಾರದ ಮುಂದಿವೆ. ಆದ್ದರಿಂದ ಈ ಕೆಲಸಗಳು ಬಹಳ ಪ್ರಾಮುಖ್ಯವಾಗಿಯೂ, ಲಾಭದಾಯಕವಾಗಿಯೂ ಮತ್ತು ಉಪಯುಕ್ತವಾಗಿಯೂ ಇರುವುದರಿಂದ ಇವುಗಳನ್ನು ಜಾಗ್ರತೆಯಾಗಿ ಕಾರ್ಯಗತ ಮಾಡಬೇಕು.

ಶ್ರೀಮಾನ್ ಗೋಪಾಲಗೌಡರು ಕಾರ್ಮಿಕರ ವಿಷಯದಲ್ಲಿ ಸ್ವಲ್ಪ ಪ್ರಸ್ತಾಪ ಮಾಡಿದ್ದಾರೆ. ಕಾರ್ಮಿಕರು ಅಗತ್ಯವಿಲ್ಲದಿದ್ದರೂ ಸಾರ್ವಜನಿಕರ ಮತ್ತು ಕೆಲವು ಮಹನೀಯರ ಪ್ರೇರಣೆಯಿಂದ ಗೊಂದಲಮಾಡಿ ಹೆಚ್ಚಿನ ರೀತಿಯ ಅನಾನುಕೂಲಪಡಿಸಿದರು. ಈಗತಾನೆ ಶಾಂತಿ ಮೂಡಿದೆ. ಸರ್ಕಾರದ ಧೋರಣೆ ಮತ್ತು ನೀತಿ ಈ ವಿಷಯದಲ್ಲಿ ಸರಿಯಲ್ಲವೆಂದು ಶ್ರೀ ಗೋಪಾಲಗೌಡರು ಹೇಳುತ್ತಿದ್ದರು. ಆದರೆ ಒಂದು ಅಭಿಪ್ರಾಯವನ್ನು ಸರ್ಕಾರಕ್ಕೆ ಸೂಚಿಸುವಾಗ ಯಾರೇ ಆಗಲಿ ಒಂದು ನೀತಿ ನಿಯಮಕ್ಕೊಳಪಟ್ಟು ಮಾತನಾಡುವುದು ಉತ್ತಮ. ಈ ಕಾರ್ಮಿಕರ ವಿಚಾರದಲ್ಲಿ ಉಂಟಾಗಿರುವ ಸಮಸ್ಯೆಯನ್ನು ಜಾಗ್ರತೆ ಪರಿಹರಿಸಬೇಕೆಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒತ್ತಿ ಹೇಳಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಸ್ವಾಮಿ, ವಿದ್ಯುಚ್ಛಕ್ತಿಯ ವಿಷಯದಲ್ಲಿ ಎಷ್ಟೋ ಸಂದರ್ಭಗಳಲ್ಲಿ ಪ್ರಸ್ತಾಪಿಸಿ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳು ಡಿಸ್ಟ್ರೆಸ್ ಏರಿಯಾಕ್ಕೆ ಸೇರಿವೆ, ಅಲ್ಲಿಗೆ ಮೊದಲು ವಿದ್ಯುಚ್ಛಕ್ತಿ ಸಾಕಷ್ಟು ಸರಬರಾಯಿ ಮಾಡಬೇಕು ಎಂದು ಹೇಳಿದರೂ ಇದುವರೆಗೂ ಏನೂ ಮಾಡಿಲ್ಲ. ಹೋದ ಬಡ್ಜೆಟ್ ಭಾಷಣದಲ್ಲೂ ಇದನ್ನು ಹೇಳಿ ಬಳ್ಳಾರಿಗಿಂತ ಮೊದಲು ಸಂಸ್ಥಾನದಲ್ಲಿದ್ದ ಪ್ರದೇಶಗಳಿಗೆ ಸರಬರಾಯಿ ಮಾಡಬೇಕೆಂದು ಕೇಳಿಕೊಂಡ ಮೇಲೆ ಒಪ್ಪಿದ್ದರೂ ಅದಕ್ಕೆ ವಿರುದ್ಧವಾಗಿ ನಡೆಯುತ್ತಿರುವುದು ಈಗ ಸ್ಪಷ್ಟವಾಗಿದೆ. ಐವತ್ತಾರು ಲಕ್ಷದಲ್ಲಿ ಬಳ್ಳಾರಿಗೆಮಾತ್ರ ಹೆಚ್ಚಾಗಿಕೊಟ್ಟು ಇತರ ಸಂಸ್ಥಾನದ ಭಾಗಗಳನ್ನು ಉಪೇಕ್ಷಿಸುವುದು ಯಾವ ನ್ಯಾಯ ? ಬಳ್ಳಾರಿಯಾದರೋ ಇತ್ತೀಚೆಗೆ ಮೈಸೂರು ದೇಶಕ್ಕೆ ಸೇರಿರುವುದು. ನೂರಾರು

ವರ್ಷಗಳಿಂದ, 1799ರಿಂದ ಸಂಸ್ಥಾನದಲ್ಲಿರುವವರಿಗೆ ಬೇಕಾದ ಸೌಕರ್ಯ ಕೊಡದೆ ಒದಗಿಸಿರುವ ಹಣದಲ್ಲಿ ಬಳ್ಳಾರಿಗೆ ಹೆಚ್ಚು ಭಾಗ ಅಂದರೆ 28 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಯಾವ ನ್ಯಾಯ? ಎಷ್ಟೋ ದಿನಗಳಿಂದ ಕ್ಷಾಮಪೀಡಿತ ಪ್ರದೇಶವಾದ ಬಾಗೇಪಲ್ಲಿ ಮತ್ತು ಗುಡಿಬಂಡೆಗಳಿಗೆ ಸಹಾಯಮಾಡಿ ಎಂದು ಕೇಳಿದರೂ ಒಂದು ಪಂಪನ್ನಾದರೂ ಕೊಟ್ಟಿದ್ದೀರಾ? 770 ಐ.ಪಿ. ಸೆಟ್ಟುಗಳನ್ನು ಬಳ್ಳಾರಿಗೆ ಈಗ ಕೊಟ್ಟಿದ್ದೀರಿ. ಇನ್ನೊಂದುಸಲ ಓಟುಪಡೆಯಬೇಕೆಂದೇನಾದರೂ ಹೀಗೆ ಮಾಡಿದ್ದೀರಾ? ಇದು ಯಾವ ಧರ್ಮ? ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ಪ್ರಾರಂಭಿಸಿದಾಗಿನಿಂದಲೂ ಕೇಳಿದರೂ ಸಹ ನಮಗೆ ಅದರ ಉಪಯೋಗ ದೊರೆತಿಲ್ಲ. ಬಾಗೇಪಲ್ಲಿಯಲ್ಲಿರುವ ದೀಪಗಳು ಕುರುಡು ಲ್ಯಾಂಪುಗಳಿರುವಹಾಗಿವೆ. ಹೀಗಿರುವಾಗ ಎಷ್ಟೋ ಸಲ ಕೇಳಿದರೂ ಕುಂಟು ನೆಪ ಹೇಳಿ ತಳ್ಳುತ್ತಿದ್ದಾರೆ; ಭರವಸೆ ಕೊಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. ಯಾವ ಕಾರಣದಿಂದಲೋ ಏನೋ ನಮಗೆ ಸಹಾಯ ನೀಡಿಲ್ಲ. ಡಿಸ್ಟ್ರೆಸ್ಡ್ ಏರಿಯಾದಲ್ಲಿರುವವರಿಗೆ ಮೊದಲು ಪ್ರಾಶಸ್ತ್ಯಕೊಡಿ ಎಂದು ಎಷ್ಟೋ ಸಲ ಎಷ್ಟೋ ವೆಹಿಮೆಂಟಾಗಿ ಹೇಳಿದ್ದರೂ ಕೂಡ ನಮಗೆ ಸಹಾಯ ನೀಡದೆ 778 ಪಂಪುಗಳನ್ನು ಬಳ್ಳಾರಿಗೆ ಹೇಗೆ ಕೊಟ್ಟಿದ್ದಾರೆ? ಅವರ ಕೈಲಿ ಪೆನ್ನಿದೆ, ಕಾಗದವಿದೆ ಎಂದು ಮನಸ್ಸಿಗೆ ಬಂದಹಾಗೆ ಮಾಡಬಹುದೆ? ಕ್ಷಾಮಪೀಡಿತ ಪ್ರದೇಶದಲ್ಲಿರುವವರಿಗೆ ಆ ಪೈಕಿ 228 ಆದರೂ ಕೊಟ್ಟು ಬಾಕಿಯಾದ್ದನ್ನು ಬಳ್ಳಾರಿಗೆ ಕೊಡಬಾರದಾಗಿತ್ತೆ? ಬಳ್ಳಾರಿಗೆ ಎಷ್ಟುಕೊಟ್ಟಿದ್ದಾರೆಂಬುದು ಬಡ್ಜೆಟ್ಟಿನಲ್ಲಿ ನೋಡಿದರೆ ಈರೀತಿಯಾಗಿದೆ:—

Power supply to 13 pumps at Bevanahalli from Hagari.

Power supply to 25 pumps at Harapanahalli.

Power supply to 7 pumps at Ujjini.

Power supply to 8 pumps at Kuppanakeri.

Power supply to 5 pumps at Bisalahalli.

Power supply to 10 pumps at Kuruppi, Sandur Taluk.

Power supply to 19 at Joladarasi etc. villages.

Power supply to 35 pumps at Sangankal, Sirivaram.

Power supply to 7 pumps at Kampli, Kamalapuram villages.

Power supply to 86 pumps at Torangallu.

Power supply to Hireheggadahalu and Hansi villages 34 I.P. sets.

Power supply to Aiyanahalli village 17 I.P. sets.

Power supply to Rampuram and Kodihalli villages 26 I.P. sets.

Power supply to Sandur and enroute villages 1115 I.P. sets.

Power supply to Huvinahadagalli and Holagundi villages 46 I.P. sets.

Power supply to Chikkajogihalli and enroute villages 123 I.P. sets.

Power supply to Tulahalli 24 I.P. sets.

Power supply to Gudikota, Siriguppa, Kurugodu, Kadalabalu, Belahalli, Chitagodu and enroute villages.

Power supply to 42 I.P. sets at Aiyanahalli and Haralalu villages Kudligi Taluk.

Power supply to 38 I.P. sets at Byalahalu, Kadalabalu, Chilagodu and Jambararalli in Hadagalli Taluk.

Power supply to 38 I.P. sets at Kurugoda and Genikelhal villages Bellary district.

Power supply to 49 I.P. sets at Sirdekote, Mahadevapura, Appinahalli and Rayapura in Kudligi Taluk.

Power supply to 21 I.P. sets and Kannamadugu, Kudligi Taluk.

ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೆ? ಒಂದು ವೇಳೆ ಅವರ ಕೈಕೆಳಗಿರುವ ಅಧಿಕಾರಿಗಳೇನಾದರೂ ಮಂತ್ರಿಗಳ ಅಭಿಮಾನ ಎತ್ತ ಕಡೆ ಹೆಚ್ಚಾಗಿದೆಯೆಂದು ತಿಳಿದು ಅವರ ಪ್ರೀತಿ ಸಂಪಾದಿಸಲು ಇಷ್ಟನ್ನು ಬಳ್ಳಾರಿಗೆ ಮಂಜೂರು ಮಾಡಿದರೆ? ಹೀಗೆ ಹೇಳುವಾಗ ಬಳ್ಳಾರಿಗೆ ಕೊಡಬಾರದೆಂದು ಖಂಡಿತ ಹೇಳುತ್ತಿಲ್ಲ; ಅವರಿಗೂ ಕೊಡಬೇಕು. ಆದರೆ ಹಾಗೆ ಕೊಡುವಾಗ ನಮಗೆ ಮೊದಲು ಪ್ರಾಶಸ್ತ್ಯ ಕೊಡಿ, ಪ್ರಯಾರಿಟಿ ಕೊಡಿ. ಬಳ್ಳಾರಿಯವರಿಗೆ ಈಗಾಗಲೆ ತುಂಗಭದ್ರಾ ಪ್ರಾಜೆಕ್ಟಾಗಿದೆ. ಆದರೂ ಒಂದೇ ಸಲ 778 ಅಲ್ಲಿಗೆ ಕೊಟ್ಟು ನಮಗೆ ಒಂದು ಸೆಟ್ಟನ್ನಾದರೂ ಕೊಡದಿರುವುದು ಯುಕ್ತವೆ? ಇಂಥ ಅನ್ಯಾಯ ಮಾಡುವುದು ಸರಿಯಲ್ಲ. ಇದನ್ನು ಸರಿಪಡಿಸಬೇಕಾದದ್ದು ಅಗತ್ಯ. ಮೊದಲು ಯಾರಿಗೆ ವಾಗ್ದಾನ ಮಾಡಿದ್ದೀರೋ, ಯಾರಿಂದ ಹಣ ಕಟ್ಟಿಸಿಕೊಂಡಿದ್ದೀರೋ, ಯಾರು ಕಟ್ಟಡ ಕಟ್ಟಿ ಪವರ್ ಸೆಟ್ಟುಗಳನ್ನು ಕೊಂಡಿದ್ದಾರೋ ಅವರಿಗಾದರೂ ಕೊಟ್ಟು ಅನಂತರ ಬೇರೆಯವರಿಗೆ ಕೊಡಬೇಕೆಂದು ಸೂಚಿಸುತ್ತೇನೆ.

*ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೆ, ಪಾವಗಡ ತಾಲ್ಲೂಕು ನಿಡಗಲ್ಲು ಮತ್ತು ನಾಗಲಮಡಿಕೆ ಹೋಬಳಿಗಳಲ್ಲಿ ಪಂಪು ಸೆಟ್ಟುಗಳನ್ನು ಕೊಡಬೇಕೆಂದು ರೈತರು ಬಹಳ ದಿವಸಗಳಿಂದಲೂ ಮನವಿ ಮಾಡುತ್ತಿದ್ದಾರೆ. ಈ ತಾಲ್ಲೂಕಿನಲ್ಲಿ ಹೆಚ್ಚಾಗಿ ಮಳೆ ಬೆಳೆಯಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಈ ತಾಲ್ಲೂಕು ನಿಡಗಲ್ಲು ಹೋಬಳಿಯಲ್ಲಿ ವಿಶೇಷವಾಗಿ ಬಾವಿಗಳಿವೆ. ಆ ಹೋಬಳಿಯವರು ಹಣ ಸಹ ಕಟ್ಟಿದ್ದಾರೆ; 7-8 ವರ್ಷಗಳಿಂದ ವಿದ್ಯುಚ್ಛಕ್ತಿ ಪಂಪ್‌ಸೆಟ್ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದಾರೆ. ಹಾಗೆ ಮಾಡಿದರೂ ಸಹ ಇನ್ನೂ ಕೂಡ ಅಲ್ಲಿಗೆ ಕರೆಂಟ್ ಕೊಟ್ಟಿಲ್ಲ. ಅನೇಕ ಸಂದರ್ಭಗಳಲ್ಲಿ ಈಗಲೂ ಕೊಡುತ್ತಾರೋ ಇಲ್ಲವೋ ಎಂಬ ಅನುಮಾನವಿದೆ. ಈಗ ಅಲ್ಲಿ 25 ಸೈಕಲ್ ಇದೆ, 50 ಸೈಕಲ್ ಇಲ್ಲ; ಅದಿಲ್ಲದಿದ್ದರೆ ಕೊಡುವುದಿಲ್ಲ ಎಂದು ತಿಳಿದಮೇಲೆ ಜನರಿಗೆ ನಿರಾಶೆಯಾಗಿದೆ. ಆದ್ದರಿಂದ ಇದನ್ನು ಗಮನಿಸಿ ಈ ಸಾಲಿನಲ್ಲಾದರೂ ಪಾವಗಡ ತಾಲ್ಲೂಕು ನಿಡಗಲ್ಲು ಮತ್ತು ನಾಗಲಮಡಿಕೆ

(ಶ್ರೀ ಸಿ. ಟಿ. ಹನುಮಂತಯ್ಯ.)

ಹೋಬಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ವಿ. ಮಸಿಯಪ್ಪ (ಹಿರಿಯೂರು).—ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂಬಂಧಪಟ್ಟಿರತಕ್ಕಂಥ ಈ ಡಿಮ್ಯಾಂಡ್ ಮನವಿಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ತಿಳಿಸಲು ಇಷ್ಟಪಡುತ್ತೇನೆ. ಸರ್ಕಾರದವರು ರೈತರು ಹೆಚ್ಚು ಆಹಾರ ಬೆಳೆಯುವುದಕ್ಕೂ ಮತ್ತು ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕೂ ಹೆಚ್ಚು ಪ್ರೋತ್ಸಾಹ ಮತ್ತು ಅವಕಾಶ ಕಲ್ಪಿಸಿಕೊಡಬೇಕೆಂದು ವಿದ್ಯುಚ್ಛಕ್ತಿಯ ಕೆಲವು ಯೋಜನೆಗಳನ್ನು ತಯಾರಿಸಿ ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲತೆಯನ್ನೊದಗಿಸಲು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದು ತುಂಬ ಶ್ಲಾಘನೀಯವಾದುದು ಮತ್ತ ಪ್ರೋತ್ಸಾಹಾರ್ಹವಾದುದು. ಆದರೆ ಅನೇಕ ಸಂದರ್ಭಗಳಲ್ಲಿ ಈ ಯೋಜನೆಗಳು ಜಾರಿಗೆ ಬರುವಾಗ ಸರಿಯಾದ ವಿಚಕ್ಷಣೆಯಿಂದ ಅಥವಾ ವಿವೇಚನೆಯಿಂದ ರೂಪಿತವಾಗಿ ಕಾರ್ಯಗತವಾಗದಿರುವುದರಿಂದ ಕೈಕೊಳ್ಳುವ ಯೋಜನೆ ಅನೇಕ ವೇಳೆ ಫಲಪ್ರದವಾಗುತ್ತಿಲ್ಲವೆಂಬುದು ನಮ್ಮ ಗಮನಕ್ಕೆ ಬರುತ್ತಿದೆ. ಅದನ್ನು ಹೆಚ್ಚು ಫಲಪ್ರದವಾಗಿ ಮಾಡುವ ದೃಷ್ಟಿಯಿಂದ ಸರ್ಕಾರದವರು ಎಲ್ಲಿ ರೈತರಿಗೆ ನೀರಾವರಿಗಾಗಿ ವಿದ್ಯುಚ್ಛಕ್ತಿ ಆವಶ್ಯಕತೆ ಹೆಚ್ಚಾಗಿದೆ, ಯಾವ ಭಾಗದಲ್ಲಿ ನೀರನ್ನು ಬಾವಿಯಿಂದ ಎತ್ತುವುದರಿಂದಲೇ ನೀರಾವರಿ ವ್ಯವಸಾಯ ಮಾಡುತ್ತಾರೆ ಎಂಬುದನ್ನು ಗಮನಿಸಿ ಮೊದಲು ಅಂಥ ಪ್ರದೇಶಗಳಿಗೆ ಅವಕಾಶ ಕೊಡಲು ಸರ್ವೆಮಾಡಿ ಆ ಪ್ರದೇಶಗಳಿಗೆ ಪ್ರಯಾರಿಟಿ ಬೇಸಿಸ್ ಮೇಲೆ ವಿದ್ಯುಚ್ಛಕ್ತಿ ಒದಗಿಸಬೇಕಾದದ್ದು ಆವಶ್ಯಕ. ಹಾಗೆ ಮಾಡಿದ್ದೇ ಆದರೆ ಸರ್ಕಾರದ ಯೋಜನೆಗಳು ಹೆಚ್ಚು ಫಲಪ್ರದವಾಗಿ ಸಂಸ್ಥಾನದಲ್ಲಿ ನಿರೀಕ್ಷೆಗಿಂತ ಹೆಚ್ಚು ಆದಾಯ ಬರುವುದು ನಿರ್ವಿವಾದವಾದುದು. ಇದನ್ನು ಅನೇಕ ಸಂದರ್ಭಗಳಲ್ಲಿ ಈ ಮಾನ್ಯ ಸಭೆಯಲ್ಲೂ ಹೊರಗಡೆಯಲ್ಲೂ ಸರ್ಕಾರದ ಗಮನಕ್ಕೆ ತಂದರೂ ಕೂಡ ಇಲ್ಲಿಯವರೆಗೂ ಇದು ಕಾರ್ಯರೂಪಕ್ಕೆ ಬಂದಿಲ್ಲ.

ಅಲ್ಲಲ್ಲಿ ಕೆಲವು ಯೋಜನೆಗಳನ್ನು, ಎಸ್ಟಿಮೇಟುಗಳನ್ನು ಇಂಥ ಪ್ರದೇಶಗಳಲ್ಲಿ ಮಂಜೂರು ಮಾಡಿದ್ದಾರೆ. ಆದರೂ ಸಮಗ್ರವಾಗಿ ಒಂದು ಸರ್ವೆ ಮಾಡಿಸಿ ಯಾವ ಭಾಗದಲ್ಲಿ ಅತ್ಯಂತ ಅವಶ್ಯಕತೆಯುದೆಯೆಂಬುದನ್ನು ಗಣನೆಗೆ ತೆಗೆದುಕೊಂಡು ಅಲ್ಲಿ ಮಂಜೂರು ಮಾಡಿ. ಈ ಹೊತ್ತು ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿ ದಿವಸಕ್ಕೆ ಒಂದು ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಇನ್ನೂ ಅನೇಕ ನೀರಾವರಿ ಕಾಮಗಾರಿಗಳಲ್ಲಿ ತೀವ್ರವಾದ ಗತಿಯಿಂದ ಕೆಲಸ ಕಾರ್ಯಗಳು ನಡೆಯುತ್ತಿವೆ. ಹಾಗೆಯೇ ವಿದ್ಯುಚ್ಛಕ್ತಿ ಯೋಜನೆಗಳೇಕೆ ನಡೆಯುತ್ತಿಲ್ಲವೆಂದು ರೈತರಿಂದ ಕೇಳಿಬರುತ್ತಿದೆ. ತಾವು ಒಂದು ಯೋಜನೆಯನ್ನು ಕೈಕೊಂಡರೆ ಅದು ಸಂಪೂರ್ಣವಾಗಿ ಉಪಯೋಗಕ್ಕೆ ಬರುವಂತೆ ಮಾಡಬೇಕಾದದ್ದು ಮುಖ್ಯ. ಹಾಗಿಲ್ಲದೆ, ಎಲೆಕ್ಟ್ರಿಕ್ ಲೈನ್ ಹಾಕಿದ್ದೇವೆಂದು ಹೇಳಿ 10 ಮೈಲಿ ಮೆಯಿನ್ ಲೈನ್ ಎಳೆದು ಬಿಟ್ಟರೆ ಆಗಲಲ್ಲ. ಅಲ್ಲಿಂದ ಮುಂದೆ ಸಬ್ ಲೈನ್‌ಗಳನ್ನೆಳೆದು, ಜಾಗ್ರತೆ ಪಂಪು ಸೆಟ್ಟುಗಳನ್ನು ಒದಗಿಸಿ ಕೊಟ್ಟು ಎಲ್ಲಾ ಬಾವಿಗಳಿಗೂ ನೀರು ಒದಗಿಸಿಕೊಟ್ಟರೇ ನಿಜವಾಗಿ ಕೆಲಸ ಪೂರೈಸಿದಂತಾಗುತ್ತದೆ.

ಆದರೆ ಈಗ ಇದಾವುದೂ planned basis ಮೇಲೆ ನಡೆಯುತ್ತಿಲ್ಲ. ಈಗ ಮುಖ್ಯವಾಗಿ ಎರಡು ತೊಂದರೆಗಳು ನಮ್ಮ ಗಮನಕ್ಕೆ ಬಂದಿವೆ. ಒಂದು, ರೈತರಿಗೆ ಬೇಕಾದ ಪಂಪುಸೆಟ್ಟುಗಳು ಕಂತಿನ ಮೇಲೆ ಒದಗಿಸಿಕೊಡುವುದರಲ್ಲಿ ತಡವಾಗುತ್ತಿದೆ. ಒದಗಿಸಿರತಕ್ಕ ಪಂಪುಗಳಿಗೆ ಸರ್ಕಾರದಿಂದ ಬರಬೇಕಾದ ಹಣ ಜಾಗ್ರತೆ ಬಾರದಿರುವುದರಿಂದ ಲಕ್ಷಾಂತರ ರೂಪಾಯಿಗಳು ಸರ್ಕಾರದಲ್ಲಿ ನಿಂತು ವಿಪರೀತ ಬಾಕಿಗಳಿರುವುದರಿಂದ ಸರ್ಕಾರದ indentಗಳ ಮೇಲೆ ಅವರು ಪಂಪುಗಳನ್ನು ಕೊಡುತ್ತಿಲ್ಲ. ಇನ್ನೊಂದು ತೊಂದರೆ ಯೇನೆಂದರೆ, ವಿದ್ಯುಚ್ಛಕ್ತಿಯ ಮೆಯಿನ್ ಲೈನ್‌ಗಳನ್ನು ಹಾಕುವುದಕ್ಕೆ ಬೇಕಾದ ಹೆಚ್ಚು ಶಕ್ತಿಯಿರುವ ತಂತಿಗಳು ಮಾರ್ಕೆಟ್ಟಿನಲ್ಲಿ ಸಿಕ್ಕುತ್ತಿವೆ; ಆದರೆ ಸಬ್ ಲೈನ್‌ಗಳನ್ನು ಹಾಕುವುದಕ್ಕೆ ಬೇಕಾಗುವ ಸಣ್ಣಸಣ್ಣ ತಂತಿಗಳು ಸಿಕ್ಕುವುದಿಲ್ಲ. ಹೀಗಾಗಿ ಅನೇಕ ಕಡೆಗಳಲ್ಲಿ ಈ ದಿವಸ ಕೆಲಸ ಕಾರ್ಯಗಳು ನಿಂತು ಹೋಗಿವೆ. ಇದೇ ಕಾರಣದಿಂದ ಈಗ ನಮ್ಮ ತಾಲ್ಲೂಕಾದ ಹಿರಿಯೂರು ಮುಂತಾದ ಕಡೆಗಳಲ್ಲಿ ಸರ್ವಿಸ್ ಕೊಡುವುದೇ ನಿಂತು ಹೋಗಿದೆ.

ಇನ್ನೂ ಕೆಲವು ತೊಂದರೆಗಳನ್ನು ನಾವು ಗಮನಿಸಿದ್ದೇವೆ. ಹೈರ್ ಪರ್ಚೇಸ್ ಮೇಲೆ ಪಂಪನ್ನು ಕೊಡಿಸಿಕೊಡಬೇಕೆಂದು ಕೇಳಿದ ತಕ್ಷಣ, ತಮಗೆ ರೈತರು ಆ ಬಾವಿ ಎಲ್ಲಿದೆ, ಯಾವ ಸರ್ವೆ ನಂಬರಿನಲ್ಲಿದೆ, ಆ ಸರ್ವೆ ನಂಬರು ಜಮೀನು ಮಾಲೀಕನಿಗೆ ಸೇರಿದೆಯೋ ಎಂಬುದನ್ನು ತಿಳಿಸಬೇಕು. ಒಂದು ವೇಳೆ ವೇದಾವತಿ ನದಿಯ ದಡದಲ್ಲಿ ಒಬ್ಬ ಬಾವಿ ಹಾಕಿಕೊಂಡಿದ್ದರೆ, ಆ ಬಾವಿ ಜಮೀನ್ದಾರನ ಜಮೀನಿನಲ್ಲಿಲ್ಲ, ಸರ್ಕಾರಿ ಖರಾಬಿನಲ್ಲಿದೆ ಎಂದು ಹೇಳಿ ಪಂಪು ಕೊಡುವುದನ್ನು ನಿರಾಕರಿಸಿದ್ದಾರೆ. ತಲಾತಲಾಂತರದಿಂದ ಆ ಬಾವಿ ಅಲ್ಲಯೇ ಇದ್ದು ಅದನ್ನು ಉಪಯೋಗಿಸತಕ್ಕ ಹಕ್ಕು ರಿಕಾರ್ಡ್ ಆಫ್ ರೈಟ್ಸ್‌ನ ದಾಖಲೆಗಳಲ್ಲಿ ನಮೂದಾಗಿ ಅನುಭವದಲ್ಲಿ ಬಂದಿದ್ದರೂ, ಹಾಗೂ ಕ್ರಯಪತ್ರದಲ್ಲಿ ಕಂಡಿದ್ದರೂ ಕೂಡ, ಸರ್ಕಾರಿ ಖರಾಬಿನಲ್ಲಿದೆಯೆಂದು ಹೇಳಿ ಪಂಪು ಕೊಡುವುದಕ್ಕೆ ತಡೆ ಮಾಡಿರುವ ನಿದರ್ಶನಗಳು ಇವೆ. ಹೀಗಾಗಿ ಒಂದಲ್ಲೊಂದು ರೀತಿಯಲ್ಲಿ ಈ ಯೋಜನೆ ಸಂಪೂರ್ಣವಾಗಿ ಕಾರ್ಯಗತವಾಗದಿರುವುದಕ್ಕೆ ಅವಕಾಶವಾಗಿದೆ. ಆದಷ್ಟು ಜಾಗ್ರತೆ ಈ ತೊಂದರೆಯನ್ನು ನಿವಾರಣೆಮಾಡಿ ವರಮಾನ ಹೆಚ್ಚಿಸುವುದಕ್ಕೆ ಪ್ರಯತ್ನಮಾಡುವುದು ಅಗತ್ಯವೆಂದು ಹೇಳುತ್ತೇನೆ.

ಎರಡನೆಯದಾಗಿ, ನಾನು ಮೊದಲೇ ಹೇಳಿದ ಹಾಗೆ, ಎಲ್ಲಿ ಬಾವಿಗಳ ಸಂಖ್ಯೆ ಹೆಚ್ಚಾಗಿ, ಎಲ್ಲಿ ಬಾವಿಗಳೇ ರೈತರ ವ್ಯವಸಾಯಕ್ಕೆ ಮೂಲಾಧಾರವಾಗಿವೆಯೋ ಅಲ್ಲಿ ಸಾಕಾದಷ್ಟು ಮಟ್ಟಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವ ಏರ್ಪಾಡನ್ನು ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಉದಾಹರಣೆಗಾಗಿ ಹೇಳುವುದಾದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ಇಲ್ಲದಷ್ಟು ಹೆಚ್ಚಿನ ಬಾವಿಗಳು ಇವೆ. ಪ್ರತಿಯೊಬ್ಬ ರೈತನೂ ಎರಡು ಮೂರು ಬಾವಿಗಳನ್ನಿಟ್ಟುಕೊಂಡು ವ್ಯವಸಾಯ ಮಾಡುವ ಪ್ರದೇಶವಾಗಿರುವುದರಿಂದ ನೀವು ಅಲ್ಲಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಪ್ಲಾನಿಂಗ್ ಕಮಿಷನ್ನಿನವರೂ ಕೂಡ ಇದು ಅಭಾವ ಪ್ರದೇಶವೆಂದು ಹೇಳಿ priority ಮೇಲೆ ಇಲ್ಲಿಗೆ ಒದಗಿಸಬೇಕೆಂದು ತಿಳಿಸಿದ್ದಾರೆ. ನಮ್ಮ ತಾಲ್ಲೂಕಾದ ಹಿರಿಯೂರಿನಲ್ಲಿ ಸುಮಾರು 10-12 ಹಳ್ಳಿಗಳಲ್ಲಿ, 200 ಪಂಪುಸೆಟ್ಟುಗಳವರೆಗೂ ಡಿಪಾಜಿಟ್ ಮಾಡಿದ್ದಾರೆ. ಡಿಪಾಜಿಟ್ ಮಾಡಿಸಿಕೊಂಡು 8-10 ತಿಂಗಳಾದರೂ ಇನ್ನೂ ಅನೇಕ ಎಸ್ಟಿಮೇಟುಗಳು ಮಂಜೂರಾಗಿಲ್ಲ.

ಅವರುಗಳೆಲ್ಲರೂ ಎಂದು current ಬರುತ್ತದೋ ಎಂದು ಎದುರು ನೋಡುತ್ತಿದ್ದಾರೆ. ಈ ಕಡೆ ತಾವು ತೀವ್ರ ಗಮನಕೊಟ್ಟು ಬೇಗ ಮಾಡಿಸಿಕೊಟ್ಟರೆ ತಾವು ಎಷ್ಟು ಪ್ರಮಾಣ ಬರಬೇಕೆಂದು ನಿರೀಕ್ಷೆ ಮಾಡುತ್ತಿದ್ದೀರೋ ಅದಕ್ಕಿಂತ ಹೆಚ್ಚಿಗೆಯೇ ಬರುತ್ತದೆಂದು ನಾನು ತಮಗೆ ಭರವಸೆ ಕೊಡಬಲ್ಲೆ. ಇನ್ನೊಂದು ತೊಂದರೆ ನೀವು ರೈತರಿಗೆ ಉಂಟು ಮಾಡುತ್ತಿರುವುದನ್ನು ನಾನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಪಂಪುಗಳನ್ನು ಕೊಡುವುದರಲ್ಲಿ ತಾವು ದಿನದಿನಕ್ಕೂ ಒಂದೊಂದು ನಿಬಂಧನೆಯಲ್ಲಿ ಬದಲಾವಣೆ ಮಾಡುತ್ತಾ ಇದ್ದೀರಿ. ಮೊದಲು ಡಿಪಾಜಿಟ್ ಕೊಡದೆ ಮಂಜೂರು ಮಾಡುವುದಿಲ್ಲವೆಂದು ಹೇಳುತ್ತಿದ್ದಿರಿ. ಈಚೆಗೆ ಎಸ್ಟಿಮೇಟ್ ಮಾಡಿಸುವುದಕ್ಕೂ ಮುಂಚೆ ಡಿಪಾಜಿಟ್ ಕಟ್ಟಬೇಕೆಂದು ಹೇಳಿದಿರಿ. ಅದಾದ ಮೇಲೆ, ಎಸ್ಟಿಮೇಟ್ ಮಂಜೂರು ಮಾಡಿದರೂ ಮೆಯಿನ್ ಲೈನ್, ಸಬ್ ಲೈನ್ ಹಾಕಬೇಕಾದರೆ ಪ್ರತಿಯೊಬ್ಬರೂ ಪಂಪು ಸೆಟ್ಟುಗಳನ್ನು ಹಾಕಿಕೊಂಡು completion report ಕೊಡಬೇಕೆಂದು ಹೇಳುತ್ತಿದ್ದಾರೆ. ಇದರ ಸಾಧಕ ಬಾಧಕಗಳನ್ನು ನೋಡಬೇಕು. 8—10 ಮೈಲಿಗಳಿಂದ ಪವರ್ ಲೈನನ್ನು ಹಾಕಿಕೊಂಡು ಬರಬೇಕೆಂದಿರುವಾಗ ಯಾವ ರೈತ ತಾನೇ ತಾವು ಬೇಗ ಲೈನ್ ಹಾಕಿಸಿ ಕೊಡುತ್ತೀರೆಂದು ಯಾವ ನಂಬಿಕೆಯನ್ನಿಟ್ಟುಕೊಂಡು ಪಂಪು ಹಾಕಿಸಿಕೊಳ್ಳುತ್ತಾನೆ? ಮೇಲಾಗಿ ರೈತರ ಸ್ಥಿತಿಗತಿಗಳು ಹೇಗಿವೆಯೆಂದು ಆಲೋಚನೆ ಮಾಡೋಣ. ಅವರಾದರೂ ಈ ಹೊತ್ತು ಹೈರ್ ಪರ್‌ಚೇಸ್ ಸಿಸ್ಟಮ್ಮನ್ನೇ ನಂಬಿಕೊಂಡಿರುವುದರಿಂದ ಯಾವ ಆಧಾರದ ಮೇಲೆ ಮನೆ ಕಟ್ಟುತ್ತಾರೆ, ಯಾವ ಆಧಾರದ ಮೇಲೆ ಪಂಪು ತರುತ್ತಾರೆ ಎಂಬುದನ್ನೂ ತಾವು ಆಲೋಚನೆ ಮಾಡಬೇಕು. ಹೀಗಾಗಿ ಈ ಯೋಜನೆಯನ್ನು ಎಷ್ಟು ಉತ್ಸಾಹದಿಂದ ಕಾರ್ಯ ರೂಪಕ್ಕೆ ತರಬೇಕೆಂದು ನೀವು ಹೊರಟಿದ್ದೀರೋ ಅಷ್ಟು ಉತ್ಸಾಹ ನೀವು ಕಾರ್ಯಗತ ಮಾಡುವುದರಲ್ಲಿ ತೋರುತ್ತಿಲ್ಲ. ಕೆಲವರ ಲೋಪ ದೋಷಗಳಿಂದ ಇದು ಹಿಂದೆ ಬೀಳುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಅದರಲ್ಲೂ ನಮ್ಮ ಪ್ರದೇಶಗಳಲ್ಲಿ ಕೆಲಸ ಕಾರ್ಯಗಳು ನಿಂತಿರುವುದಕ್ಕೆ ಮೂಲಕಾರಣ ಇದು ಎಂದು ಕಂಡು ಬಂದಿದೆ. ನಮ್ಮ ಕಡೆಯಲ್ಲಿ 10—12 ಹಳ್ಳಿಗಳ ಹೆಸರುಗಳನ್ನು ಕೊಟ್ಟು ಅಲ್ಲಿ ಪ್ರತಿಯೊಂದು ಬಾವಿಗೂ ಹಣ ಕಟ್ಟಿದ್ದರೂ, ನೀವು ನಿಗದಿಮಾಡಿರುವಂತೆ ಸಾವಿರ ರೂಪಾಯಿಗಳ ವರಮಾನ ಬರುವಂತಿದ್ದರೂ ಮತ್ತು ಆ ಭಾಗಕ್ಕೆ ಕೊಡುವುದರಲ್ಲಿ ಯಾವ ತೊಂದರೆಯೂ ಇಲ್ಲದೆ ಇದ್ದರೂ ಇನ್ನೂ ಎಸ್ಟಿಮೇಟನ್ನು ತಯಾರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗಲಾದರೂ ಈ ಅರ್ಜಿಗಳನ್ನು ಆದಷ್ಟು ಬೇಗ ತರಿಸಿಕೊಂಡು, ಏನು ನ್ಯೂನಾತಿರಿಕ್ತಗಳಿದ್ದರೂ ತೊಂದರೆಯಾಗದಂತೆ ಮಾಡಿ ರೈತರಿಗೆ ಮಂಜೂರು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡುವುದರಿಂದ ಈ ಡಿಮ್ಯಾಂಡಿನಲ್ಲಿ ಕೇಳಿರತಕ್ಕ ಹಣ ಹೆಚ್ಚು ಲಾಭದಾಯಕವಾದ ರೀತಿಯಲ್ಲಿ ಖರ್ಚು ಮಾಡಿದಂತಾಗುತ್ತದೆಂದು ನಾನು ಭಾವಿಸುತ್ತೇನೆ. ಈ ಹಳ್ಳಿಗಳ ಹೆಸರುಗಳನ್ನೂ ಬೇಕಾದರೆ ತಾವು ಕೇಳಿದಾಗ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಮುಖ್ಯವಾಗಿ ಅವುಗಳ ಬಗ್ಗೆ ಎಸ್ಟಿಮೇಟ್ ಮಾಡಿಸಿ ಜಾಗ್ರತೆ ಮಂಜೂರು ಮಾಡಿ ಕೊಡುವುದು ನಿಮ್ಮ ಕರ್ತವ್ಯವೆಂದು ಭಾವಿಸಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಪರಮೇಶ್ವರಪ್ಪ (ಸಿರಗುಪ್ಪ).—ಅಧ್ಯಕ್ಷರೇ, ಶ್ರೀ ನಾರಾಯಣರೆಡ್ಡಿಯವರು ನಮ್ಮ ತಾಲ್ಲೂಕಿಗೆ ಪಂಪುಗಳಿಗೆ ಹೆಚ್ಚಿಗೆ ಕೊಟ್ಟಿದ್ದಾರೆಂದು ಹೇಳಿದರು. ನಾವೇನೂ ಅವರ ಬಾಗೇಪಲ್ಲಿ ತಾಲ್ಲೂಕಿಗೆ ಹೆಚ್ಚಿಗೆ ಕೊಡಬೇಡಿ ಎಂದು ಹೇಳಲಿಲ್ಲ. ಬೇಕಾದರೆ ಮೊದಲು ಅಲ್ಲಿಗೆ ಕೊಡಿ. ಆದರೆ, ನನ್ನ ಕಾನ್‌ಸ್ಟಿಟ್ಯುಯನ್ಸಿ ವಿಚಾರ ಹೇಳುವುದಾದರೆ, ಅವು ಬಹಳ ಹಿಂದುಳಿದ ತಾಲ್ಲೂಕುಗಳು. ನೀರಾವರಿ ಸೌಕರ್ಯವಿಲ್ಲದೆ ಬಹಳ ತೊಂದರೆಯಿದೆ. 1945-46ನೆಯ ಇಸವಿಯಿಂದಲೂ, ನಾವು ಮೆಂಬರಾಗುವುದಕ್ಕೆ ಮುಂಚಿನಿಂದಲೂ, ಪಂಪುಗಳನ್ನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ. ಹತ್ತು ವರ್ಷಗಳಿಂದಲೂ ಕಷ್ಟಪಟ್ಟಿದ್ದೇವೆ. ಈಗಲಾದರೂ ಮಂತ್ರಿಗಳು ಮನಸ್ಸಿಟ್ಟು ನಮಗೆ ಸಹಾಯಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಮಲೆನಾಡಿನಲ್ಲಿ ವಿದ್ಯುಚ್ಛಕ್ತಿ ಹುಟ್ಟಿ ಅಲ್ಲಿಂದ ಎಲ್ಲಾ ಕಡೆಗೂ ಸರಬರಾಯಿಯಾಗುತ್ತಿದ್ದರೂ ಕೂಡ, ನಮ್ಮ ಪ್ರಾಂತ್ಯದಲ್ಲೇ ಅಲ್ಲದೆ ನೆರೆ ಪ್ರಾಂತ್ಯಗಳಿಗೂ ಕೂಡ ನಮ್ಮ ವಿದ್ಯುಚ್ಛಕ್ತಿ ಉಪಯೋಗವಾಗುತ್ತಿದ್ದರೂ ಕೂಡ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವ ಸ್ಥಳದವರಾದ ಮಲೆನಾಡಿನವರಾದ ನಮಗೇ ಅಷ್ಟಾಗಿ ವಿದ್ಯುಚ್ಛಕ್ತಿ ಉಪಯೋಗವಾಗುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಮಲೆನಾಡಿನಲ್ಲಿ ಉತ್ಪತ್ತಿಯು (return) ಸಾಧಾರಣವಾಗಿ ಕಡಮೆ ಬರುತ್ತದೆಂದು ಹೇಳಿ, ಇತ್ತೀಚೆಗೆ ಉತ್ಪತ್ತಿಯನ್ನು (return) ಶೇಕಡ ಐದಕ್ಕೆ ಇಳಿಸಿರುವುದರಿಂದ ಈಗ ಮಲೆನಾಡಿನಲ್ಲೂ ವಿದ್ಯುಚ್ಛಕ್ತಿ ಸೌಕರ್ಯ ಹೊಂದುವುದಕ್ಕೆ ಅನುಕೂಲವಾಗಿದೆ. ಇದರ ಮೇಲೆ, ಹಿಂದೆ ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ಗ್ರಾಮಗಳವರು ವಿದ್ಯುಚ್ಛಕ್ತಿ ಬೇಕೆಂದು ಕೇಳಿದ್ದರೋ ಆ ಗ್ರಾಮಗಳನ್ನು ಪುನಃ ಸರ್ವೆ ಮಾಡಿದರೆ ಉತ್ಪತ್ತಿ (return) ಜಾಸ್ತಿ ಬರುತ್ತದೆ. ರೀ-ಸರ್ವೆಮಾಡಿ ಈಗಲಾದರೂ ವಿದ್ಯುಚ್ಛಕ್ತಿ ಸರಬರಾಯಿ ಮಾಡಬಹುದಾಗಿರುತ್ತದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಹಿಂದೆ ಒಮ್ಮೆ ಸರ್ವೆ ಮಾಡಿ ನಿಮ್ಮ ಅಂದಾಜಿಗೆ ಹುಟ್ಟುವಳಿ ಬರಲಿಲ್ಲವೆಂದು ಹೇಳಿ ಕೈಬಿಟ್ಟಿದ್ದರೂ ಈಗ ಮತ್ತೆ ಸರ್ವೆ ಮಾಡಿಸಿದರೆ ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಅವಕಾಶವಾಗುತ್ತದೆಂದು ಹೇಳುತ್ತೇನೆ. ಈ ಸಾಲಿನಲ್ಲಿ ಸಕ್ಕರೆಪಟ್ಟಣಕ್ಕೆ ಲೈನ್ ಹಾಕುವುದಕ್ಕೆ ಮಂಜೂರು ಮಾಡಿದ್ದೇವೆಂದು ಹೇಳಿದಿರಿ. ಆದಷ್ಟು ಜಾಗ್ರತೆ ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ, ಬಹಳ ವರ್ಷಗಳಿಂದ ಸಕ್ಕರೆಪಟ್ಟಣದ ಅಕ್ಕಪಕ್ಕದ ಗ್ರಾಮಗಳಾದ ಲಕ್ಯಾ, ಹಿರೇಗೌಜ ಮುಂತಾದ ಗ್ರಾಮಗಳವರು ಈ ಬಗ್ಗೆ ಕೇಳಿಕೊಳ್ಳುತ್ತಲೇಬಂದಿದ್ದಾರೆ. ಈಗಲಾದರೂ ಅವರ ಬೇಡಿಕೆ ಫಲಕಾರಿಯಾಗುವಂತೆ ಬೇಗ ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಕಡೂರು ತಾಲ್ಲೂಕು ದೇವನೂರು, ಬಿದರೆ, ಮತಿಘಟ್ಟ ಮತ್ತು ಒಗರೆಹಳ್ಳಿ ಗ್ರಾಮದವರೂ ತಮ್ಮನ್ನು ಅನೇಕ ವರ್ಷಗಳಿಂದ ಲೈನ್ ಹಾಕಲು ಕೇಳುತ್ತಿದ್ದಾರೆ. ಚಿಕ್ಕಮಗಳೂರು ತಾಲ್ಲೂಕು ಜೋಳದಾಳ್ ಮಾರ್ಗವಾಗಿ ಹೊಸಹಳ್ಳಿಪೇಟೆ ಮತ್ತು ಮಲಂದೂರು ಗ್ರಾಮದವರೂ ಲೈನ್ ಹಾಕಲು ಕೇಳುತ್ತಿದ್ದಾರೆ. ಆ ಹಳ್ಳಿಗಳ ಸರ್ವೆ ಕೂಡ ಆಗಿದೆ. ಸರ್ಕಾರದವರೂ ಬೇಗ ಬೆಳಕನ್ನು ಒದಗಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ ಯಾವ ಕಾರಣದಿಂದಲೋ, ಇಲ್ಲವೇ ರಿಸರ್ವೇ ಮಾಡಬೇಕೆಂತಲೋ ನಿರ್ದಿಷ್ಟವಾಗಿ ಯಾವುದನ್ನೂ ತಿಳಿಸದೆ delay ಆಗುತ್ತಿದೆ. ಇದನ್ನು ಪರಿಶೀಲನೆ ಮಾಡಿ ಬೇಗ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಾರೆಂದು ನಂಬಿದ್ದೇನೆ.

(ಶ್ರೀ ಜಿ. ಪುಟ್ಟಸ್ವಾಮಿ.)

ಮೂಡಿಗೆರೆ ತಾಲ್ಲೂಕಿನಲ್ಲಿ ಗೋಣಿಬೀಡಿನವರೆಗೂ ವಿದ್ಯುಚ್ಛಕ್ತಿ ಕೊಡಬೇಕೆಂದು ಆ ಭಾಗದವರು ಕೇಳು ತ್ತಿದ್ದಾರೆ. ಏನೇನು ಅನುಕೂಲತೆಗಳಿರಬೇಕೋ ಅವೆಲ್ಲಾ ಅಲ್ಲಿವೆ. ಈ ಲೈನನ್ನು ತೆಗೆದುಕೊಂಡರೆ ಸರ್ಕಾರಕ್ಕೆ ನಷ್ಟವೇನೂ ಆಗುವುದಿಲ್ಲ.

ಡಾ॥ ಆರ್. ನಾಗನಗೌಡ.—ಈ ಹೊತ್ತು ಸಭೆಯ ಮುಂದೆ ಬಂದಿದ್ದ 112ನೆಯ ಪ್ರಶ್ನೆಯ ಸಂಬಂಧದಲ್ಲಿ ಈ ವಿಷಯದ ಬಗ್ಗೆ ಎಲ್ಲಾ ವಿವರಗಳನ್ನೂ ಕೊಟ್ಟಿದೆ. ಅದನ್ನು ತಾವು ನೋಡಬಹುದು.

ಶ್ರೀ ಜಿ. ಪುಟ್ಟಸ್ವಾಮಿ.–ತಾವು ಅಂದಾಜನ್ನು ಸಕ್ಕರೆ ಪಟ್ಟಣಕ್ಕೆ ಮಂಜೂರುಮಾಡಿದ್ದೇವೆಂದು ಹೇಳಿದ್ದೀರಿ. ಅಂದಾಜನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗು ವುದು ಎಂದು ಹೇಳುವುದರಿಂದಲೇ ನಾವು ತೃಪ್ತಿಪಟ್ಟು ಕೊಳ್ಳಬೇಕೇ? ಇದನ್ನು ತೀವ್ರವಾಗಿ ಆಲೋಚನೆ ಮಾಡಿ ಈ ಸಾಲಿನಲ್ಲಿಯೇ ಹಣವನ್ನೊದಗಿಸಿ ಕೆಲಸವನ್ನು ಕೈ ಕೊಳ್ಳಬೇಕೆಂಬ ಉದ್ದೇಶದಿಂದ ನಾನು ಈ ಮಾತು ಗಳನ್ನು ಹೇಳುತ್ತಿದ್ದೇನೆ.

3 P.M.

ಸ್ವಾಮಿ, ದೇಶದ ಬೇರೆ ಪ್ರಾಂತ್ಯಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿರತಕ್ಕದ್ದನ್ನು ನಮ್ಮ ಮಲೆನಾಡಿಗೆ ಹೋಲಿಸಿ ನೋಡಿದರೆ, ನಮ್ಮ ಮಲೆನಾಡಿಗೆ ಈ ವಿದ್ಯುಚ್ಛಕ್ತಿ ಸರಬರಾಯಿ ಮಾಡಿರತಕ್ಕದ್ದು ಬಹಳ ಕಮ್ಮಿ ಆಗಿದೆ ಎಂದು ನಾನು ಹೇಳದೆ ವಿಧಿಯಿಲ್ಲ. ಮಲೆನಾಡು ಅಭಿ ವೃದ್ಧಿಯಾದರೆ ದೇಶದ ಮಹತ್ವದ ಉದ್ದೇಶಗಳೆಲ್ಲಾ ಈಡೇರುವುದಕ್ಕೆ ಇದರಿಂದ ತುಂಬ ಸಹಾಯಕವಾಗು ತ್ತದೆ. ಆದುದರಿಂದ ಸರ್ಕಾರದವರು ಈ ವಿದ್ಯುಚ್ಛಕ್ತಿ ಯನ್ನು ಪ್ರತಿಯೊಂದು ಗ್ರಾಮಕ್ಕೂ ವ ತ್ತು ಪ್ರತಿ ಯೊಂದು ಮನೆಗೂ ಒದಗಿಸಬೇಕೆಂದು ಕೇಳಿಕೊಳ್ಳು ತ್ತೇನೆ. ತಾವು ಮೇಲಾಗಿ ಈ ಮಲೆನಾಡಿನ ಜನರಿಗೆ ಈ ವಿದ್ಯುಚ್ಛಕ್ತಿಯ ಬಗ್ಗೆ ಒಂದು ರಿಯಾಯಿತಿಯನ್ನು ತೋರಿಸಬೇಕಾಗಿದೆ. ಆದರೆ ಆ ಚಿಕ್ಕಮಗಳೂರು ಜಿಲ್ಲೆಗೆ ಪ್ರತಿಯೊಂದು ಗ್ರಾಮಕ್ಕೂ ಈ ವಿದ್ಯುಚ್ಛಕ್ತಿ ಯನ್ನು ಸರಬರಾಯಿ ಮಾಡತಕ್ಕ ಬಗ್ಗೆ ಸರ್ಕಾರದ ವರು ಯಾವ ಒಂದು ನಿರ್ದಿಷ್ಟವಾದ ಯೋಜನೆಯ ನ್ನಾಗಲಿ ಅಥವಾ ಅದರ ಬಗ್ಗೆ ಬಡ್ಜೆಟ್ಟಿನಲ್ಲಿ ಸಾಕಷ್ಟು ಹಣವನ್ನಾಗಲಿ ಮೀಸಲಾಗಿ ತೆಗದಿಡದೆ ಇರುವುದಕ್ಕಾಗಿ ನಾನು ತುಂಬ ವಿಷಾದಪಡುತ್ತೇನೆ. ಈಗಲಾದರೂ ಸಹ ಸರ್ಕಾರದವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿಯೊಂದು ಗ್ರಾಮಕ್ಕೂ ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಜನರಿಗೆ ಸೌಕರ್ಯಗಳನ್ನುಂಟುಮಾಡಬೇಕೆಂದು ಕೇಳಿಕೊಳ್ಳು ತ್ತೇನೆ. ಅಲ್ಲಿರತಕ್ಕ ಜನರೆಲ್ಲಾ ಈ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚಾಗಿ ಆ ಪ್ರಾಂತ್ಯಕ್ಕೆ ಸರಬರಾಯಿ ಮಾಡ ಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಜಾಗ್ರತೆ ಆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಈ ವಿದ್ಯು ಚ್ಛಕ್ತಿಯನ್ನು ಒದಗಿಸಬೇಕೆಂದು ಹೇಳುತ್ತೇನೆ.

MR. SPEAKER.—Now the House will rise for lunch and meet at 3-35.

The House rose for Lunch at Five Minutes past Three of the Clock and re-assembled at Thirty-five Minutes past Three of the Clock.

[MR. SPEAKER in the Chair.]

*ಶ್ರೀ ಜಿ. ಪಾಪಣ್ಣ (ಚಿಕ್ಕಬಳ್ಳಾಪುರ–ಶಿಡ್ಲಘಟ್ಟ).— ಸ್ವಾಮಿ, ಈ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಮಾಡತಕ್ಕ ಬಗ್ಗೆ ಮೊದಲು ಕ್ಷಾಮಪೀಡಿತ ಪ್ರದೇಶಗಳ ಲ್ಲಿರುವ ನೀರಾವರಿ ಕಾಮಗಾರಿಗಳಿಗೆ ಮೊದಲು ಅವ ಕಾಶ ಕೊಟ್ಟು ಅನಂತರ ಬೇರೆ ಬಾಬುಗಳಿಗೆ ಇದನ್ನು ಕೊಡಬೇಕೆಂದ ಶ್ರೀ ರಾಮಮೂರ್ತಿ ಸಮಿತಿಯವರು ಸರ್ಕಾರಕ್ಕೆ ಶಿಫಾರ್ಸುಮಾಡಿದ್ದಾರೆ. ಆದಾಗ್ಗೂ ಆ ಕ್ಷಾಮ ಪೀಡಿತ ಪ್ರದೇಶವಾದಂಥ ಕೋಲಾರ ಜಿಲ್ಲೆಗೆ ಕಳೆದ 2-3 ವರ್ಷಗಳಿಂದಲೂ ಯಾವ ಒಂದು ಹೊಸ ಲೈನನ್ನೂ ಕೂಡ ಎಳೆಯದೆ ಇರತಕ್ಕದ್ದೂ ಮತ್ತು ಈ ವಿದ್ಯುಚ್ಛಕ್ತಿಯನ್ನು ಆ ಜಿಲ್ಲೆಗೆ ಸರಬರಾಯಿ ಮಾಡದೆ ಇರತಕ್ಕದ್ದೂ ತುಂಬ ಶೋಚನೀಯ. ಇಂಥ ಆರೋಪಣೆಗಳನ್ನು ನಾವು ಹೇಳುವುದಕ್ಕೆ ಪ್ರಾರಂಭಿ ಸಿದ ಕೂಡಲೆ ಸರ್ಕಾರದವರು ನಾವು ವಿದ್ಯುಚ್ಛಕ್ತಿ ಯನ್ನು ಒದಗಿಸುತ್ತಿದ್ದೇವೆ ಎಂದು ಏನೋ ಒಂದು ಸಮಾಧಾನ ಹೇಳಿಬಿಡುತ್ತಾರೆ. ಅವರು ಬೇಕಾದ ಕಡೆಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾಗ್ಗೂ ಈ ಕ್ಷಾಮ ಪೀಡಿತ ಪ್ರದೇಶಗಳಿಗೆ ಏಕೆ ಕೊಡಲಿಲ್ಲ ಎಂದು ಕೇಳಿದರೆ ಅದಕ್ಕೆ ಸರ್ಕಾರದವರು ಏನು ಕಾರಣ ಹೇಳುತ್ತಾರೆಂದರೆ— ಈಗ ಕೋಲಾರ ಜಿಲ್ಲೆಯಲ್ಲಿ 25 ಸೈಕಲ್ ಪವರಿನ ಲೈನ್ ಇದೆ, ಅದರಲ್ಲಿ 50 ಸೈಕಲ್ ಪವರಿನ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವು ದಕ್ಕೆ ಆಗುವುದಿಲ್ಲ, ಭದ್ರಾವತಿಯಿಂದ ಬೆಂಗಳೂರಿಗೆ ಇನ್ನೊಂದು ಲೈನನ್ನು ಎಳೆಯುವ ತನಕ ಈ ಪವರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿಬಿಡುತ್ತಾರೆ. ಹೀಗೆ ಹೇಳುತ್ತಾ ಕಾಲವನ್ನು ತಳ್ಳಿಹಾಕಿಕೊಂಡು ಬರುತ್ತಿದ್ದಾರೆ. ಹೀಗೇ ಇವರು ಒಂದು ಕುಂಟುನೆಪ ಹೇಳುತ್ತಾ ಕಾಲ ತಳ್ಳಿಕೊಂಡು ಬಂದರೆ ಈ ಬೆಂಗ ಳೂರಿನ ಮತ್ತು ಕೋಲಾರ ಜಿಲ್ಲೆಯ ಕೆಲವು ಭಾಗ ಗಳ ಜನರಿಗೆ ಬಹಳ ಅನ್ಯಾಯ ಮಾಡಿದಂತಾಗು ತ್ತದೆ. ಈಗ ಆ ಚಿಕ್ಕಬಳ್ಳಾಪುರದ ತಾಲ್ಲೂಕಿಗೇನೋ ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಒದಗಿಸಿದ್ದಾರೆ. ಹಾಗೆ ಒದಗಿಸಿರತಕ್ಕ ಕಡೆಗಳಲ್ಲಿ ಸಹ ಯಾರಾದರೂ ಒಬ್ಬಿಬ್ಬರು ಈ ಪವರನ್ನು ಸರಬರಾಯಿ ಮಾಡಬೇಕೆಂದು ಕೇಳಿಕೊಂಡರೆ—ಅದಕ್ಕೆ ಅಷ್ಟೇನೂ ಹೆಚ್ಚಿನ ಖರ್ಚು ವೆಚ್ಚಗಳು ಬಾರದೆ ಇದ್ದರೂ ಸಹ, ಅವರಿಗೆ ಒಂದೆರಡು ಕಂಬಗಳು ಬೇಕಾಗಿದ್ದಾಗಲೂ ಸಹ, ಕಂಬಗಳಿಲ್ಲ ತಂತಿಯಿಲ್ಲ ಎಂದು ಹೇಳಿ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿ ಮಾಡುವುದರಿಂದ ರೈತರಿಗೂ ನಷ್ಟ ಮತ್ತು ಸರ್ಕಾರಕ್ಕೂ ನಷ್ಟ. ಕೆಲಕೆಲವು ಸಂದರ್ಭಗಳಲ್ಲಿ ಸರ್ಕಾರದವರು 200-300 ರೂಪಾಯಿಗಳ ಬಂಡ ವಾಳ ಹಾಕಿದರೆ ಅವರಿಗೆ ನೂರಾರು ರೂಪಾಯಿಗಳ ಆದಾಯ ಬರುವಂಥ ಅವಕಾಶವಿದೆ. ಆದರೆ ಯಾರು ಲೈನನ್ನು ಅಪೇಕ್ಷೆ ಮಾಡುತ್ತಾರೋ ಅಂಥವರ ವಿಚಾರ ವನ್ನು ಮಾತ್ರ ಸರ್ಕಾರದವರು ಗಣನೆಗೆ ತೆಗೆದು ಕೊಂಡು ಅಕ್ಕ ಪಕ್ಕದಲ್ಲಿ ಆ ಲೈನು ಎಲ್ಲಿಯವರೆಗೆ ಹೋಗಿರುತ್ತದೆಂಬ ಅಂಶವನ್ನು ಗಮನಿಸದೆ ಅದು ಲಾಭದಾಯಕವಾಗಿಲ್ಲ, ಅಲ್ಲಿಗೆ ಪವರನ್ನು ಕೊಡುವು ದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಕೇವಲ 1-2 ಕಂಬಗಳನ್ನು ಹಾಕಿದರೆ ಅಲ್ಲಿಗೆ ಪವರನ್ನು ಕೊಡುವುದಕ್ಕೆ ಸಾಧ್ಯವಿರುತ್ತದೆ. ಹಾಗಿದ್ದರೂ ಒಂದೆ ರಡು ಕಂಬಗಳ ಲೆಕ್ಕವನ್ನು ಗಣನೆಗೆ ತೆಗೆದುಕೊಳ್ಳದೆ ಆ ಇಡೀ ಲೈನಿನ ಖರ್ಚುವೆಚ್ಚಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಸರ್ವೀಸನ್ನು ಕೊಟ್ಟರೆ ಲಾಭ-

ದಾಯಕವಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ರೈತನಿಗೆ ತುಂಬ ತೊಂದರೆಯಾಗಿದೆ. ಸರ್ಕಾರದವರು ಇಷ್ಟು ಅಲ್ಪ ಖರ್ಚಿನಲ್ಲಿ ಆಗುವಂಥ ಕೆಲಸಗಳನ್ನೂ ಸಹ ಹಿಂದಕ್ಕೆ ತಳ್ಳುತ್ತಿದ್ದಾರೆ. ರೈತರಿಗೆ ತಾವು ಏನು ಅನುಕೂಲಪಡಿಸಿದಂತೆ ಆಯಿತು? ಇಂಥ ಸಂದರ್ಭಗಳಲ್ಲಿ ರೈತರಿಗೆ ತಾವು ಉದಾರವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಇದರಿಂದ ರೈತನಿಗೂ ಅನುಕೂಲ ಮತ್ತು ಸರ್ಕಾರಕ್ಕೂ ಆದಾಯ ಬರುತ್ತದೆ. ಇದರಿಂದ ಸರ್ಕಾರಕ್ಕೆ ಯಾವ ನಷ್ಟವೂ ಆಗುವುದಿಲ್ಲ. ತಾವು ಹೀಗೆ ಮಾಡದಿದ್ದರೆ ರೈತರಿಗೆ ತೊಂದರೆ ಮತ್ತು ಸರ್ಕಾರಕ್ಕೆ ನಷ್ಟ ಸಹ ಆಗುತ್ತದೆ. ಕೆಲವು ದಿವಸಗಳಿಂದ ಆ ಚಿಕ್ಕಬಳ್ಳಾಪುರ ಡಿವಿಜನ್‌ನಲ್ಲಿ ತೀರಾ ಚಿಕ್ಕಪುಟ್ಟ ವಿಚಾರಗಳಿಗೂ ಕೂಡ, ಒಂದು ದಿವಸ ತಂತಿ ಇಲ್ಲ ಎಂದು ಹೇಳಿದರೆ ಇನ್ನೊಂದು ದಿವಸ ಕಂಬಗಳಿಲ್ಲ ಅಂತ ಹೇಳುತ್ತಾರೆ, ಮತ್ತೊಂದು ದಿವಸ ಟ್ರಾನ್ಸ್‌ಫಾರ್ಮರುಗಳಿಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಇಂಥ ಸಾಮಾನುಗಳನ್ನೆಲ್ಲಾ ಅಧಿಕ ಪ್ರಮಾಣದಲ್ಲಿ ಒದಗಿಸಿಕೊಳ್ಳಬೇಕಾದದ್ದು ತೀರಾ ಆವಶ್ಯಕ. ಅವರಿಗೆ ಸಾಕಷ್ಟು ಸಾಮಾನುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಹಣವನ್ನು ಧಾರಾಳವಾಗಿ ಒದಗಿಸಲಾಗಿರುತ್ತದೆ. ಹೀಗೆ ಮಾಡಿದರೆ ಈಗತಾನೆ ಶ್ರೀ ಮ್ಯಾಸ್ಕರನ್‌ಹ್ಯಾಸ್‌ರವರು ಹೇಳಿದಂಥ ತೊಂದರೆ ಕೂಡ ತಪ್ಪುತ್ತದೆ. ಇದೂ ಅಲ್ಲದೆ ಇಲಾಖೆಯವರು ಹೆಚ್ಚು ಕೂಲಿ ಆಳುಗಳನ್ನು ಬೇರೆ ಇಟ್ಟುಕೊಂಡಿರುತ್ತಾರೆ. ಆದರೆ ಅವರಿಗೆ ಸಾಕಷ್ಟು ಕೆಲಸ ಇರುವುದಿಲ್ಲ. ಅವರು ವ್ಯರ್ಥವಾಗಿ ಕಾಲಹರಣ ಮಾಡಬೇಕಾಗಿರುತ್ತದೆ. ಈ ದಿವಸ ಈ ಇಲಾಖೆಯವರು ಹಾಕುತ್ತಿರುವ ಖರ್ಚುವೆಚ್ಚಗಳು ಬಹಳ ದುಬಾರಿಯಾಗಿರುತ್ತವೆ. ರೈತನು ಆ ಕೆಲಸಗಳನ್ನು ತಾನೇ ಮಾಡಿಕೊಂಡರೆ ಆತನಿಗೆ ಎಷ್ಟು ಖರ್ಚು ಬರಬಹುದೋ ಅದಕ್ಕೆ ನಾಲ್ಕರಷ್ಟನ್ನು ಈಗ ಈ ಇಲಾಖೆಯವರು ವೆಚ್ಚಮಾಡುತ್ತಿದ್ದಾರೆ. ಹೀಗಿದ್ದರೂ ಸಣ್ಣಪುಟ್ಟ ಲೈನುಗಳನ್ನು ಎಳೆಯುವುದಕ್ಕೂ ಕೂಡ ಇವರು ಮನಸ್ಸು ಕೊಡುತ್ತಿಲ್ಲ. ಆದುದರಿಂದ ಸರ್ಕಾರದವರು ಇವರಿಗೆ ಯಾವಾಗಲೂ ಇವರಬಳಿ ಇಂತಿಷ್ಟು ಸಾಮಾನುಗಳು ಇದ್ದೇತೀರಬೇಕೆಂಬ ಒಂದು ವ್ಯವಸ್ಥೆಯನ್ನು ಮಾಡಿ ಇವರಿಗೆ ಯಥೇಷ್ಟವಾಗಿ ಈ ಸಾಮಾನುಗಳನ್ನು ಸರಬರಾಯಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಈ ಇಲಾಖೆಯವರು ಒಂದು ಹಾರ್ಸ್ ಪವರಿಗೆ ಒಂದು ಸಾವಿರ ರೂಪಾಯಿಗಳ ಖರ್ಚು ಬರುತ್ತೆಂದು ಹೇಳಿ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕಾಗಿ ಬಂದಾಗ ಅದರಿಂದ ಸರಿಯಾದ ರಿಟರ್ನ್ ಬರುವುದಿಲ್ಲವೆಂದು ಹೇಳಿ ಅವುಗಳನ್ನು ತಳ್ಳಿ ಹಾಕುತ್ತಿದ್ದಾರೆ. ಈ ರೀತಿಯಾಗಿ ಈಗ ನಮ್ಮ ಶಿಡಲಘಟ್ಟ ತಾಲ್ಲೂಕಿನಲ್ಲಿ ಸಾದಲಿ ಎಂಬ ಗ್ರಾಮದವರು 1947ರಿಂದ ಪವರನ್ನು ಕೇಳುತ್ತಿದ್ದಾರೆ. ಈಗಾಗಲೇ ಅಲ್ಲಿಗೆ ಅಂದಾಜು ತಯಾರಾಗಿ 7 ಲಕ್ಷ ರೂಪಾಯಿಗಳಿಗೆ ಅದು ಮಂಜೂರಾಗಿದೆ. ಅಲ್ಲಿ ಕಟ್ಟಡಗಳನ್ನು ಸಹ ಕಟ್ಟಿ ಆಗಿದೆ. ಆ ಸ್ಥಳಕ್ಕೆ ವಿದ್ಯುಚ್ಛಕ್ತಿಯನ್ನು ಕೊಟ್ಟರೆ $2\frac{1}{2}$ ಲಕ್ಷ ರೂಪಾಯಿಗಳ ವರಮಾನ ಬರುತ್ತದೆಂದು ಹೇಳುತ್ತಿದ್ದಾರೆ. ಈ ಲೈನನ್ನು ಆ ಸಾದಲಿ ಗ್ರಾಮಕ್ಕೆ ತರುವಾಗ ಮಧ್ಯೆ 15 ಗ್ರಾಮಗಳಿವೆ. ಅವರೂ ಸಹ ವಿದ್ಯುಚ್ಛಕ್ತಿ ಬೇಕೆಂದು ಕೇಳುತ್ತಿದ್ದಾರೆ. ಆದರೆ ಅವರ ಮನವಿಗಳನ್ನೇ ಗಣನೆಗೆ ತೆಗೆದುಕೊಳ್ಳದೆ, ಆ ಲೈನನ್ನು ಸಾದಲಿಗೆ ಎಳೆಯುವುದರಿಂದ ಸರ್ಕಾರಕ್ಕೆ ಸರಿಯಾದ ರಿಟರ್ನ್ ಬರುವುದಿಲ್ಲ—ಅದು ರೆಮ್ಯುನರೇಟೀವ್ ಆಗಿಲ್ಲ ಎಂದು ಹೇಳಿ ಈಗ ಅದನ್ನು ಕೈಬಿಟ್ಟಿದ್ದಾರೆ. ಆದರೆ ಈ ಸಾದಲಿ ಹಳ್ಳಿಯವರು ಮಾತ್ರ ಅರ್ಜಿ ಕೊಟ್ಟಿದ್ದಾರೆ, ಆ ಮಧ್ಯೆ ಇರುವ 15 ಗ್ರಾಮಗಳವರ ಅರ್ಜಿ ಬಂದಿಲ್ಲ. ಆದ್ದರಿಂದ ಈ ಲೈನು ರೆಮ್ಯುನರೇಟೀವ್ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆ ಆ ಹಳ್ಳಿಯವರೆಲ್ಲಾ ಅರ್ಜಿ ಕೊಟ್ಟಾಗ್ಯೂ ಇದು ರೆಮ್ಯುನರೇಟೀವ್ ಆಗುವುದಿಲ್ಲ, ಆದ್ದರಿಂದ ಇದನ್ನು ಮಂಜೂರು ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ನಾನೊಂದು ಸಲಹೆ ಮಾಡುತ್ತೇನೆ. ಏನೆಂದರೆ, ತಾವು ಈ ಇರಿಗೇಷನ್ ಬಾಬುಗಳಿಗೆ ಇಲ್ಲಿಯವರೆಗೂ ಒದಗಿಸಿರುವ ವಿದ್ಯುಚ್ಛಕ್ತಿ ಲೈನಿನಲ್ಲಿ ತಮಗೆ ಎಲ್ಲಿಯೂ ಲುಕ್ಸಾನು ಬಂದಿಲ್ಲ. ಇದರಿಂದ ಎಂದಿಗೂ ಹಾಗೆ ನಷ್ಟವಾಗುವುದಿಲ್ಲವೆಂದು ಹೇಳುತ್ತೇನೆ. ಹಾಗೆ ತಮಗೆ ಬೇಕಾಗಿದ್ದರೆ ತಾವು ಕೋಲಾರ ಜಿಲ್ಲೆಗೆ ಒದಗಿಸಿರುವ ಲೈನುಗಳ ಬಗ್ಗೆ ಪರಿಶೀಲನೆ ಮಾಡಿ ನೋಡಿದರೆ ಅಲ್ಲಿ ಪ್ರತಿಯೊಂದು ಲೈನಿನಿಂದಲೂ ತಮಗೆ ಶೇಕಡ 10-12 ಆದಾಯ ಬರುತ್ತಲೇ ಇದೆ. ಮೊದಲು 1-2 ವರ್ಷಗಳು ತಮಗೆ ಸ್ವಲ್ಪ ಕಷ್ಟವಾಗಿ ಕಂಡುಬಂದರೂ ಮುಂದೆ ಅವು ಲಾಭದಾಯಕವಾಗಿಯೇ ಕೆಲಸ ಮಾಡುತ್ತವೆ. ಆದರೆ ತಾವು ಹೀಗೆ ಲಾಭ ನಷ್ಟದ ಲೆಕ್ಕವನ್ನು ಹಾಕುವಾಗ ಕೇವಲ ಒಂದೆರಡು ಹಳ್ಳಿಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಹಾಗೆ ಮಾಡಿದರೆ ತಮಗೆ ಲಾಭ ಕಂಡುಬರುವುದಿಲ್ಲ. ತಾವು ಒಟ್ಟೊಟ್ಟಾಗಿ ಈ ಲೈನಿನಲ್ಲಿ ಎಷ್ಟು ಜನರಿಗೆ ಅನುಕೂಲಪಡಿಸುತ್ತೀರೋ ಅಷ್ಟೂ ನಿಮಗೆ ಲಾಭದಾಯಕವಾಗುತ್ತದೆ. ಇದರಿಂದ ರೈತರಿಗೂ ಅನುಕೂಲ ಮತ್ತು ಸರ್ಕಾರಕ್ಕೂ ಸಹ ಆದಾಯ ಬರುತ್ತದೆ. ಆದುದರಿಂದ ಸರ್ಕಾರದವರು ತಮ್ಮ ಈಗಿನ ಮನೋಭಾವವನ್ನು ಬದಲಾಯಿಸಿ ಹಳ್ಳಿಯ ಜನರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಒದಗುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ವೆಂಕಟೇಶ್ (ಗಾಂಧೀನಗರ).—ಸ್ವಾಮಿ, ಈ ದಿವಸ ನಮ್ಮ ಎಲೆಕ್ಟ್ರಿಕಲ್ ಇಲಾಖೆಯ ಕಾರ್ಮಿಕ ವರ್ಗದವರು ಮಾಡಿಕೊಂಡಿರತಕ್ಕಂಥ ಕಾರ್ಮಿಕ ಸಂಘವನ್ನು ಅಧಿಕಾರ ವರ್ಗದವರು S. P. ಸಂಘವೆಂದು ಹೇಳಿರುವುದು ಖಂಡಿತ ನ್ಯಾಯಬದ್ಧವಾದದ್ದಲ್ಲ. ಈಗ ನಮ್ಮಲ್ಲಿರತಕ್ಕಂಥ ಈ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಮಿಕ ವರ್ಗದವರ ಸಂಘಕ್ಕೆ ಮೈಸೂರ್ ಸರ್ವಿಸ್ ರೆಗುಲೇಷನ್ ಪ್ರಕಾರ ಕ್ರಮ ಕೈಗೊಳ್ಳಬೇಕೇ ಅಥವಾ ಇದನ್ನು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಬೇಕೇ, ಅನ್ನುವುದು ಬಹಳ ತಾಪತ್ರಯಕ್ಕೆ ಇಟ್ಟುಕೊಂಡಿದೆ. ಕೇಂದ್ರ ಸರ್ಕಾರದವರ ಆಡಳಿತದಲ್ಲಿರತಕ್ಕ ಅನೇಕ ಇಲಾಖೆಗಳಲ್ಲಿ ಈ ರೀತಿ ಕಾರ್ಮಿಕರ ಸಂಘಗಳು ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಸ್ಥಾಪಿಸಲ್ಪಟ್ಟಿವೆ. ಇವುಗಳಿಗೆಲ್ಲಾ ಅಂದರೆ ರೈಲ್ವೆ, ಪೋಸ್ಟ್ ಅಂಡ್ ಟೆಲಿಗ್ರಾಫಿಕ್, ಇತ್ಯಾದಿ ಎಲ್ಲಾ ಇಲಾಖೆಗಳ ನೌಕರರ ಸಂಘಕ್ಕೂ ಮತ್ತು ಟ್ರೇಡ್ ಯೂನಿಯನ್‌ಗಳಿಗೂ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟನ್ನು ಅಪ್ಲೈ ಮಾಡಿದ್ದಾರೆ.

ಆದರೆ ಇಲ್ಲಿ ಏನಾಗಿದೆ ಎಂದರೆ Industrial Disputes Act ಪ್ರಕಾರ ನಮ್ಮ ದೇಶದಲ್ಲಿಕೂಡ ತಕರಾರುಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಯಾವ ಅವಕಾಶವಿದೆಯೋ ಅದರ ಪ್ರಕಾರ ಸರ್ಕಾರಕ್ಕೆ ನೋಟೀಸ್ ಕೊಟ್ಟರು. Notice of strike ಕೊಡುವವರೆಗೂ ಕೂಡ ಸರ್ಕಾರದವರು conciliationಗೆ ಕರೆಯದೆ ಇದ್ದು ಕಾನೂನು ಪ್ರಕಾರ ಲೋಪ

(ಶ್ರೀ ಡಿ. ವೆಂಕಟೇಶ್.)

ಮಾಡಿದ್ದಾರೆ. ಅದು ಸರಿಯಲ್ಲವೆಂದು ನಮ್ಮ ಅಭಿಪ್ರಾಯ.

ಇಷ್ಟೇ ಅಲ್ಲ, conciliation ಆದಮೇಲೂ ಸಹ ಕೋರ್ಟಿಗೆ ಹೋಗುವುದಕ್ಕಾಗಲಿ, ಹೋಗದೇ ನಿಲ್ಲಿಸುವುದಕ್ಕಾಗಲಿ ಸರ್ಕಾರದವರಿಗೆ ಅಧಿಕಾರವಿದೆ. ಈಗ ಬಹಳ ನಷ್ಟವಾಗುತ್ತ ಇರುವುದರಿಂದ ಯಾವ ರೀತಿಯಲ್ಲಿಯೂ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಸರ್ಕಾರದವರು ಒಂದು ದೊಡ್ಡ ನೋಟೀಸ್ ಹಾಕಿ ಎಷ್ಟು ಅನುಕೂಲತೆಗಳನ್ನು ಕಾರ್ಮಿಕರಿಗೆ ಕಲ್ಪಿಸಿಕೊಟ್ಟಿದ್ದಾರೆ ಎನ್ನುವುದನ್ನೆಲ್ಲ ಪ್ರಚುರಮಾಡಿ ನಾಲ್ಕು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿ ಇಲಾಖೆಯ ನೌಕರರಿಗೆ ಮತ್ತು ಪ್ರಜೆಗಳಿಗೆ ಹಂಚಿದರು. ಈ ವಿಚಾರದಲ್ಲಿ ಏನೇನು ಅನುಕೂಲತೆಗಳನ್ನು Conciliation Officer ಮುಂದೆ ಒಪ್ಪಿಕೊಂಡಿದ್ದಾರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಪ್ರಶ್ನೆ ಮುಖಾಂತರ ಕೇಳಿದಾಗ ನಮ್ಮ ಸರ್ಕಾರದವರು ಪ್ರಜೆಗಳ ಹಿತದೃಷ್ಟಿಯಿಂದ, ವಿವರಕೊಡಲು ಸಾಧ್ಯವಿಲ್ಲವೆಂದು ಹೇಳಿದರು. ಅವರು ದೇಶದ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ Industrial Disputes Actನ 21ನೆ ಸೆಕ್ಷನ್ ಪ್ರಕಾರ Confidential ಎಂದು treat ಮಾಡಿದ್ದೇವೆಂದು ಉತ್ತರ ಕೊಟ್ಟರು. ಸೆಕ್ಷನ್ 21ರ ಪ್ರಕಾರ Conciliation ಆಫೀಸರ ಮುಂದೆ ಉಭಯ ಪಕ್ಷಗಳವರು confidential ಆಗಿ treat ಮಾಡಬೇಕು ಎಂದು ಕೇಳುವುದನ್ನು ಮಾತ್ರ ರಿಪೋರ್ಟ್‌ನಲ್ಲಿ ಪಬ್ಲಿಷ್ ಮಾಡಬಾರದು, ಜನತೆಗೆ ಕೊಡಬಾರದು ಎಂದಿದೆ. ಈ ರೀತಿ conciliation proceedings ನಲ್ಲಿ ಕೇಳಿಕೊಂಡಿಲ್ಲ. ಆದರೂ ಕೂಡ ಇಲ್ಲಿ ಇಲಾಖಾಧಿಕಾರಿಗಳು ಅಥವಾ ಸೆಕ್ರೆಟರಿಗಳು ಯಾವ ರೀತಿಯಲ್ಲಿ guide ಮಾಡುತ್ತಾರೆಯೋ ಆ ರೀತಿಯಾಗಿ ಇಲ್ಲಿ ನಮಗೆ ಉತ್ತರಗಳನ್ನು ಕೊಡುತ್ತಾರೆ. ಕಾನೂನು ವಿರುದ್ಧವಾಗಿ ಉತ್ತರಗಳಿರುತ್ತವೆ. Guide ಮಾಡತಕ್ಕ ಅಧಿಕಾರ ವರ್ಗದವರೂ ಕೂಡ ಸರ್ಕಾರಕ್ಕೆ ಸರಿಯಾದ ಸಲಹೆಗಳನ್ನು ಕೊಡಬೇಕು. ಈ ರೀತಿ ಮಾಡತಕ್ಕದ್ದು ಸರಿಯಲ್ಲವೆಂದು ತಿಳಿದುಕೊಳ್ಳಬೇಕು.

ಹೀಗೆ ಹೇಳುವಾಗ ಜನತೆಯ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಮತ್ತು ಕೆಲಸಗಾರರ ದೃಷ್ಟಿಯಿಂದ ಈ industryಯಲ್ಲಿ ಉತ್ಪನ್ನವಾಗತಕ್ಕ ಕರೆಂಟನ್ನು ಹಂಚಬೇಕು ಮತ್ತು ಕೆಲಸಗಾರರ ವಾದ ಒಳ್ಳೆಯ ರೀತಿಯಲ್ಲಿರಬೇಕು. ಆ ವಾದ ಹೂಡುವಾಗ ಸರ್ಕಾರದವರಿಗೆ ಏನು ದೃಷ್ಟಿಯಲ್ಲಿ ಬರುತ್ತದೆಂದರೆ, ಒಂದು ಇಲಾಖೆಗೆ ಸಂಬಳ ಸಾರಿಗೆ ಜಾಸ್ತಿಮಾಡುವುದಾದರೆ ಇತರ ಇಲಾಖೆಯವರೂ ಕೇಳುತ್ತಾರೆ, ಅವರಿಗೂ ಕೊಡ ಬೇಕಾಗುವುದರಿಂದ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಸ್ವಾತಂತ್ರ್ಯಬಂದಮೇಲೆ ಪ್ರತಿಯೊಬ್ಬರಿಗೂ ಮುಂದೆ ತಮ್ಮ ಬಾಳನ್ನು ಉತ್ತಮ ದರ್ಜೆಗೆ ತರಬೇಕು ಎಂಬ ಆಶೋತ್ತರಗಳಿರುತ್ತವೆ. ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ನಮ್ಮ ಸರ್ಕಾರದವರು ಇತ್ತೀಚೆಗೆ ಮಾಡಿರತಕ್ಕ ಪ್ರಚಾರ ಮತ್ತು statements ನೋಡುವುದಾದರೆ ನಿಜವಾಗಿಯೂ ಜನತೆಯನ್ನು ಕೆಲಸಗಾರರಿಗೆ ವ್ಯತಿರಿಕ್ತವಾಗಿ ಎತ್ತಿಕಟ್ಟಬೇಕು ಎನ್ನುವ ದೃಷ್ಟಿ ಸರ್ಕಾರದವರಲ್ಲಿದೆ. ಅದು ಸರಿಯಲ್ಲವೆಂದು ಹೇಳಬೇಕಾಗಿದೆ. ಕೆಲಸಗಾರರ ವರ್ಗದಲ್ಲಿ industrial labour, agricultural labour ಮತ್ತು plantation labour ಎಂದು ಈ ರೀತಿಯಾಗಿದೆ. ನಾವು Central enactment ನೋಡಿದರೆ agricultural labourನ್ನು ಕೂಡ ಈ enactment ಕೆಳಗೆ ತರುವುದಕ್ಕೆ ಪ್ರಯತ್ನಮಾಡಿದ್ದಾರೆ. ಎರಡನೆಯದು, Minimum Wages Act ಈಗಾಗಲೇ apply ಆಗಿದೆ. Plantation labourಗೆ ಮತ್ತು Agricultural Labourಗೆ Industrial Relations Law apply ಆಗಿದೆ. ಮತ್ತು journalistsಗೆ ಕೂಡ ಈಗಾಗಲೇ Industrial Billನ್ನು apply ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿರತಕ್ಕ ಕಾಲದಲ್ಲಿ, ಕೇಂದ್ರ ಸರ್ಕಾರದವರು Commercial establishments ಎಲ್ಲವನ್ನೂ Trade Union Act ಮತ್ತು Iudustrial Relations Act ಕೆಳಗೆ ತರುತ್ತಾ ಇರತಕ್ಕ ಕಾಲದಲ್ಲಿ ನಮ್ಮ ಸರ್ಕಾರದವರು ಈ ರೀತಿ ಇರತಕ್ಕದ್ದು ಸರಿಯಲ್ಲ. ಇಷ್ಟೇ ಅಲ್ಲದೆ Military ತಂದು ಮುಷ್ಕರ ಕಾಲದಲ್ಲಿ emergency ಎಂದು utilise ಮಾಡಿದ್ದಾರೆ. ನಮ್ಮ Constitution ಪ್ರಕಾರ emergency ಅನ್ನುವುದಕ್ಕೆ "Outside Aggression or Local Commotion" ಎಂದು define ಮಾಡಿದ್ದಾರೆ. ಒಂದು ಸರ್ಕಾರವನ್ನು Overthrow ಮಾಡುವ ಸನ್ನಿವೇಶಕ್ಕೆ emergency ಎಂದು define ಮಾಡಿದ್ದಾರೆ. ಹೀಗೆ ಮಾಡುವುದಕ್ಕೆ ಪ್ರೆಸಿಡೆಂಟರಿಗೆ ಪಾರ್ಲಿಮೆಂಟ್ ನಡೆಯದಿರುವಾಗ ಅಧಿಕಾರವಿದ್ದರೂ ಕೂಡ ಅವರು ಅದನ್ನು ಪಾರ್ಲಿಮೆಂಟ್‌ನಡೆಯುವಾಗ ಇಟ್ಟು sanction ಪಡೆಯಬೇಕೆಂದಿದೆ. ಪಾರ್ಲಿಮೆಂಟ್ ನಡೆಯತಕ್ಕ ಕಾಲದಲ್ಲಿ ಇದನ್ನು emergency ಎಂದು ಸಾರಿದರೂ ಸಹ ಅದನ್ನು ಪಾರ್ಲಿಮೆಂಟಿನಲ್ಲಿಟ್ಟು ಸರಿಮಾಡಿಕೊಂಡಿಲ್ಲ. ಈ ದೃಷ್ಟಿಯಿಂದ ನೋಡಿದರೂ ಕೂಡ Constitution ಪ್ರಕಾರ ಲೋಪಮಾಡಿದ್ದಾರೆ. ಹೀಗೆ ಹೆಜ್ಜೆ ಹೆಜ್ಜೆಗೂ ಕೂಡ ಲೋಪಮಾಡಿದ್ದಾರೆ. ಒಂದು ವೇಳೆ ಲೋಪ ಮಾಡಿಲ್ಲವೆಂಧು ಇದ್ದರೆ, ಕೋರ್ಟಿಗೆ ಹೋಗುವುದಾದರೆ Primary Consideration in Industrial Conciliation ಏನೆಂದರೆ, ಆ Industry ಯಲ್ಲಿ ಲಾಭವಿಲ್ಲವೆಂದರೆ ಏನೂ ಕೊಡಬಾರದು ಎಂದು ಅನೇಕ Industrial Tribunals ಅಲ್ಲಿ ತೀರ್ಮಾನ ಮಾಡಿದ್ದಾರೆ. ಇಲ್ಲಿ Legal Department ಬೇರೆ ಇದ್ದರೂ ಪರಿಶೀಲನೆ ಮಾಡದೆ ಕಾನೂನಿಗೆ ವಿರುದ್ಧವಾಗಿ ಕೂಲಿಗಾರರಿಗೆ ದ್ರೋಹ ಮಾಡಬೇಕು ಎನ್ನುವುದನ್ನು ಮಾತ್ರ ಪರಿಶೀಲನೆ ಮಾಡಿದರೆ ಸರಿಯಲ್ಲ. ಕಾನೂನು ಏನಿದೆ, authority ಏನಿದೆ, ಸರ್ಕಾರದ ಪರವಾಗಿದೆಯೇ, ಅಥವಾ ವಿರೋಧವಾಗಿದೆಯೇ ಎನ್ನುವುದನ್ನು ನೋಡಬೇಕು. ಕೋರ್ಟು ತೀರ್ಪು ಕೊಟ್ಟರೂ ಕೂಡ modification ಮಾಡುವ ಅಧಿಕಾರ ಸರ್ಕಾರ ಮತ್ತು ಶಾಸನ ಸಭೆಗಳಿಗಿದೆ. ಅವರ ಮುಂದೆ ತಂದು ದೇಶದ ಹಿತದೃಷ್ಟಿಯಿಂದ ಇಷ್ಟು ಹಣವನ್ನು ಒದಗಿಸಿಕೊಡುವುದು ಸಾಧ್ಯವಿಲ್ಲವೆಂದು ಹೇಳಿದರೆ ಅದನ್ನು reject ಮಾಡುವ ಅಧಿಕಾರ legislatureಗೆ ಇದೆ. ಈ ಅವಕಾಶಗಳೆಲ್ಲ ಇದ್ದರೂ ಕೂಡ, ಇವನ್ನೆಲ್ಲ ತಡೆಗಟ್ಟಿ peaceful ಆಗಿ ನಮ್ಮ ದೇಶವನ್ನು administer ಮಾಡಬೇಕು ಎಂಬ ದೃಷ್ಟಿಯನ್ನು ಬಿಟ್ಟು ದೌರ್ಜನ್ಯ ಮಾಡುವುದು ಸರಿಯಲ್ಲ. ಸರ್ಕಾರದವರು ಕೈಗಾರಿಕೆ ಮತ್ತು ವ್ಯವಸಾಯದ ಕಾರ್ಮಿಕರಲ್ಲಿ ವೈಮನಸ್ಯವುಂಟಾಗುವ ರೀತಿ ಪ್ರಚಾರಮಾಡಿ ಜನಗಳಿಗೆ ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ನಡೆದಿದ್ದಾರೆ. ಸರ್ಕಾರ Progressive Government ಎಂದು ಒಳ್ಳೆಯ

ಹೆಸರನ್ನು ಪಡೆದು ಪ್ರಸ್ತುತ ವ್ಯವಹಾರದಿಂದ ವಿರೋಧವಾದ (reactionary) ಮನೋಭಾವವನ್ನು ಜನತೆಯಲ್ಲಿ ಉಂಟು ಮಾಡಿರುವುದನ್ನು ಹೋಗಲಾಡಿಸಲು ಇನ್ನು ಮುಂದಾದರೂ ಪ್ರಯತ್ನ ಮಾಡಬೇಕು. ಇದು ನನ್ನ ಸಲಹೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಮತ್ತು ದೇವನಹಳ್ಳಿ ತಾಲ್ಲೂಕಿನಲ್ಲಿ ನೂರಾರು ನೀರಾವರಿ ಭಾವಿಗಳಿವೆ. ತರಿ ಮತ್ತು ಭಾಗಾಯತು ಬೆಳೆಗಳಿಗೆ ಬಾವಿಯ ನೀರೇ ಆಧಾರ. 1947ನೆ ಇಸವಿಯಿಂದ ಸಹ ಭಾವಿಗಳ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂಬ ಸುಮಾರು 450 ಅರ್ಜಿಗಳು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇವೆ. ಸಾಮಾನ್ಯವಾಗಿ ಇವರು ಅರ್ಜಿದಾರರಿಗೆ ಇದು ಲಾಭದಾಯಕವಾಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಸರ್ಕಾರದವರಿಗೆ ರೈತರ ವಿಷಯದಲ್ಲಿ ಎಷ್ಟರಮಟ್ಟಿನ ಸಹಾನುಭೂತಿ ಇದೆ, ಅವರ ಕಷ್ಟಗಳನ್ನು ತಪ್ಪಿಸಬೇಕು ಎನ್ನುವ ಮನಸ್ಸು ಎಷ್ಟರಮಟ್ಟಿಗಿದೆ ಎನ್ನುವುದು ಆ ಇಲಾಖೆಯಿಂದ ಬಂದಿರತಕ್ಕ ಉತ್ತರದಲ್ಲಿ ಕಾಣಬಹುದಾಗಿದೆ. ಅಲ್ಲದೆ 1947ನೆ ಇಸವಿಯಿಂದೀಚೆಗೆ ಅನೇಕ ಜನರು ಅರ್ಜಿ ಹಾಕಿ ಪದೇ ಪದೇ ಒತ್ತಾಯ ಮಾಡಿದರೂ ಸಹ ಅವರ ಅರ್ಜಿಗಳನ್ನು ಯಾವ ರೀತಿಯಲ್ಲಿಯೂ ಪರಿಶೀಲನೆ ಮಾಡಿದಹಾಗೆ ಕಾಣಿಸುತ್ತ ಇಲ್ಲ. ಆದರೆ ಇಲ್ಲಿ ನಾವು ಈ ಬಡ್ಜೆಟ್ಟನ್ನು ನೋಡಿದರೆ, ವಿದ್ಯುಚ್ಛಕ್ತಿಯನ್ನು ಹಂಚಿರತಕ್ಕ ಪರಿಸ್ಥಿತಿಯನ್ನು ನೋಡಿದರೆ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 5-6 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದೆ. ಹಿಂದೆ ಬಂದಿದ್ದ ಅರ್ಜಿಗಳನ್ನು ಹಾಗೆಯೇ ಇಟ್ಟುಕೊಂಡು ಹೊಸದಾಗಿ ಬಂದಿರತಕ್ಕ ಅರ್ಜಿಗಳಿಗೆ ಮತ್ತು ಹೊಸ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿರುವಂತೆ ಕಾಣುತ್ತದೆ.

ಶ್ರೀಮಾನ್ ಭಾಷ್ಯಂರವರು ಮಂತ್ರಿಗಳಾಗಿದ್ದಾಗಲೂ, ಶ್ರೀಮಾನ್ ಸಿದ್ದಲಿಂಗಯ್ಯನವರು ಅನಂತರ ಶ್ರೀಮಾನ್ ಸಿದ್ದವೀರಪ್ಪನವರು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳಾಗಿದ್ದಾಗಲೂ ಸಹ ಈ ಪ್ರಾಂತದ ರೈತರು ಬಂದು ತಮ್ಮ ಮನವಿಗಳನ್ನು ಒಪ್ಪಿಸಿದ್ದಾರೆ. ಅನಂತರ ಈಗ ಶ್ರೀಮಾನ್ ನಾಗನಗೌಡರಲ್ಲಿಯೂ ಸಹ ಅವರು ತಮ್ಮ ಮನವಿಗಳನ್ನು ಒಪ್ಪಿಸಿದ್ದಾರೆ. ಶ್ರೀಮಾನ್ ಭಾಷ್ಯಂ ಮತ್ತು ಸಿದ್ದಲಿಂಗಯ್ಯನವರು ಮಂತ್ರಿಗಳಾಗಿದ್ದಾಗ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದ್ದರಮೇಲೆ ಅರ್ಜಿದಾರರಲ್ಲಿ ಸುಮಾರು 25 ಜನ ಪಂಪುಗಳನ್ನು ತೆಗೆದುಕೊಂಡುಹೋಗಿ ಇಟ್ಟಿದ್ದಾರೆ. ಇನ್ನೂ ವಿದ್ಯುಚ್ಛಕ್ತಿಯನ್ನು ಅವರಿಗೆ ಒದಗಿಸಿಲ್ಲ—ಪಂಪುಗಳೆಲ್ಲ ತುಕ್ಕು ಹಿಡಿಯುತ್ತಿವೆ. ಪಂಪುಗಳು ತುಕ್ಕು ಹಿಡಿದರೆ ಅದರಿಂದ ಉಂಟಾಗತಕ್ಕ ನಷ್ಟವನ್ನು ಯಾರು ಕಟ್ಟಿಕೊಡಬೇಕು? ಇದನ್ನು ಸರ್ಕಾರದವರು ಮುಖ್ಯವಾಗಿ ಗಮನಿಸಬೇಕು.

ಇನ್ನೊಂದು ವಿಚಾರವೇನೆಂದರೆ 25 ಸೈಕಲ್ಸ್‌ನಿಂದ 50 ಸೈಕಲ್ಸ್‌ಗೆ ಬದಲಾಯಿಸಬೇಕು, ಅದಕ್ಕೆ ಬೇರೊಂದು ಲೈನ್ ಎಳೆಯಬೇಕು ಎಂಬುದಾಗಿ ಉತ್ತರಗಳು ಈಗೀಗ ಬರುತ್ತಿವೆ. ಈ ವಿಚಾರವನ್ನು ಮೊದಲೇ ರೈತರಿಗೆ ತಿಳಿಸಿದ್ದ ಪಕ್ಷದಲ್ಲಿ ಅವರು ಪಂಪುಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಪಂಪುಗಳನ್ನು ತೆಗೆದು ಇಟ್ಟುಕೊಳ್ಳಿ, ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದರಮೇಲೆ ಈ ರೀತಿಯಾಯಿತು. ಅಲ್ಲದೆ ಜೋಗ್‌ನಿಂದ ಬೆಂಗಳೂರಿಗೆ ಇನ್ನೊಂದು ಲೈನ್ ಎಳೆಯುತ್ತೇವೆ ಎಂದು ಸುಮಾರು 2 ವರ್ಷಗಳಿಂದ ಹೇಳುತ್ತಲೇ ಇದ್ದೀರಿ. ಯಾವಾಗ ಕೇಳಿದರೂ ಜೋಗ್‌ನಿಂದ ಲೈನ್ ಎಳೆಯುತ್ತೇವೆ, ಅನಂತರ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತೇವೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದಿಂದ ಸಹ ಹಣ ಮಂಜೂರಾಗಿದೆ. ನಾವು ಪರಿಶೀಲನೆ ಮಾಡುತ್ತಿದ್ದೇವೆ, ಏನೇನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನೆಲ್ಲ ನಡೆಸುತ್ತೇವೆಂದು ಹೇಳುತ್ತಿದ್ದೀರೇ ಹೊರತು ಕಾರ್ಯಕ್ರಮ ಪ್ರಾರಂಭಿಸಿದ್ದೇವೆ ಎನ್ನುವ ಉತ್ತರ ಕೊಟ್ಟಿಲ್ಲ. ಹೀಗೆ ಮಾಡಿದರೆ ರೈತನು ಬಹಳ ಕಷ್ಟದಲ್ಲಿ ಸಿಕ್ಕುತ್ತಾನೆ ಮತ್ತು ಎಲ್ಲಾ ಪ್ರಜಾ ವರ್ಗದವರೂ ತೊಂದರೆಗೆ ಸಿಕ್ಕಬೇಕಾಗುತ್ತದೆ. ಆದುದರಿಂದ ಕಾಲ ಕಳೆಯದೆ ಎರಡನೆಯ ಲೈನನ್ನು ಜೋಗ್‌ನಿಂದ ಹಾಕಬೇಕು ಎಂದು ಹೇಳುತ್ತೇನೆ.

ಚಿಕ್ಕಬಳ್ಳಾಪುರ ಸರ್ಕಲ್ಲಿನಲ್ಲಿ, ದೊಡ್ಡಬಳ್ಳಾಪುರ ಮೊದಲಾದ ಪ್ರದೇಶಗಳಲ್ಲಿ power looms ನಡೆಸುವುದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ಒಂದು ವರ್ಷದ ಹಿಂದೆ ಕೊಟ್ಟಿರತಕ್ಕ ಅರ್ಜಿಯನ್ನು ಎಲ್ಲೋ ಬಚ್ಚಿಟ್ಟು ನಿನ್ನೆ ಕೊಟ್ಟಿರತಕ್ಕ ಅರ್ಜಿದಾರನಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಹೀಗೆ ಹತ್ತಾರು ಕೇಸುಗಳು ನಡೆದಿವೆ. ಹೀಗೆ ಹಿಂದೆ ಕೊಟ್ಟಿರುವ ಅರ್ಜಿಗಳು ಹಾಗೆಯೇ ಇರಬೇಕಾದರೆ ಹೊಸದಾಗಿ ಕೇಳುವವರಿಗೆ ಕೊಡುವುದು ಯಾವ ನ್ಯಾಯ? ಇದನ್ನು ಸರ್ಕಾರದವರು ಕೂಡಲೇ ಪರಿಶೀಲನೆಮಾಡಿಸಬೇಕು ಎಂದು ಹೇಳುತ್ತೇನೆ.

ಇಷ್ಟು ಮಾತ್ರ ಹೇಳಿ ಈ ಡಿಮ್ಯಾಂಡನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ ಎಂದು ತಿಳಿದುಕೊಂಡು ಅನೇಕರು ಹೊರಗಡೆ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಹಂಚಿಕೆ ವ್ಯವಸ್ಥೆಯನ್ನು ಕುರಿತು ಬಹಳವಾಗಿ ಮಾತನಾಡುತ್ತಿದ್ದಾರೆ. ದೀಪ ಎಲ್ಲರಿಗೂ ಒದಗಬೇಕು. ಆದರೆ ವಿದ್ಯುಚ್ಛಕ್ತಿ ಉತ್ಪತ್ತಿಯಾಗತಕ್ಕಂಥ ಪ್ರದೇಶದ ಸುತ್ತಮುತ್ತಲ ಗ್ರಾಮಗಳಲ್ಲಿ ಕತ್ತಲು ಇದ್ದು ಮೈಸೂರು ಸಂಸ್ಥಾನದಲ್ಲಿ ಮತ್ತು ಹೊರಗಡೆ ಎಲ್ಲ ಕಡೆಯೂ ಬೆಳಕು ಇದ್ದರೆ ಆ ಪ್ರದೇಶದ ಜನ ಎಷ್ಟು ಸುಖವಾಗಿ ಮತ್ತು ಸಂತೋಷವಾಗಿ ಇರಬಹುದು ಎನ್ನುವುದು ಸರ್ಕಾರದವರು ಗಮನಿಸಬೇಕಾದ ವಿಷಯ. ಶಿವಮೊಗ್ಗೆಯಿಂದ ಹೊನ್ನಾಳಿಯವರೆಗಿನ 24 ಮೈಲಿ ಪ್ರದೇಶದಲ್ಲಿ ಹತ್ತಾರು ವರ್ಷಗಳಿಂದಲೂ ಸಹ ಅಲ್ಲಿನ ರೈತರು, channel ಆಗುವುದಕ್ಕೆ ಹಿಂದೆ, ವಿದ್ಯುಚ್ಛಕ್ತಿಯನ್ನು ಕೊಡಬೇಕು, ಪಂಪುಗಳನ್ನು ಹಾಕಿಕೊಳ್ಳುವುದಕ್ಕೆ ಸೌಕರ್ಯ ಮಾಡಿಕೊಡಬೇಕು ಎಂದು ಅರ್ಜಿ ಹಾಕಿಕೊಂಡು ಅನೇಕ ಎಸ್ಟಿಮೇಟ್‌ಗಳು ಆಗಿದ್ದರೂಕೂಡ ಅದಕ್ಕೆ ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಿಲ್ಲ. ಅವರಿಗೆ ಈವಾಗ channel ಬಂದಿದೆ. ಅದರಲ್ಲಿ ನೀರನ್ನು ಒಂದೆರಡು ವರ್ಷಗಳಲ್ಲಿ ಬಿಡುತ್ತಾರೆಂದು ಕಂಡುಬಂದಿದೆ. ಆ ಪ್ರದೇಶದಲ್ಲಿರತಕ್ಕ ಗ್ರಾಮಗಳಲ್ಲಿ 1,000 ದಿಂದ 2,000ದ ವರೆಗೆ ಪ್ರಜಾಸಂಖ್ಯೆ ಇರತಕ್ಕ ಗ್ರಾಮಗಳು 15-20 ಇವೆ. ಶಿವಮೊಗ್ಗೆಯಿಂದ ಷಿಕಾರಿಪುರಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಬಹಳ ಬೇಗ ಲೈನ್ ತೆಗೆದುಕೊಂಡು ಹೋದರು. ಇದರಿಂದೇನಾಗಿದೆ ಎಂದರೆ ದಾರಿಯಲ್ಲಿ ಒಂದು ಗ್ರಾಮಕ್ಕೂ current ಕೊಡುವುದಕ್ಕೆ ಆಗುವುದಿಲ್ಲ. ಆದರೆ ಅದೇ ಲೈನನ್ನು ಶಿವಮೊಗ್ಗೆಯಿಂದ ಷಿಕಾರಿಪುರಕ್ಕೆ ಹೊನ್ನಾಳಿಯ ಮಾರ್ಗವಾಗಿ ತೆಗೆದುಕೊಂಡು ಹೋಗಿದ್ದರೆ ಅದರಿಂದ 30-40 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನುಕೂಲವಾಗಿ ಉತ್ಪತ್ತಿ

(ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.)

ಯನ್ನು ಸಹ ಹೆಚ್ಚಿಸಿಕೊಳ್ಳಬಹುದಾಗಿತ್ತು. ಈಗಲಾದರೂ ಕೂಡ ಈ 24 ಮೈಲಿಯಲ್ಲಿರುವ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ವಾಸ್ತವವಾಗಿ ಒಂದು ಅಂದಾಜನ್ನು ತಯಾರಿಸಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

ಕೆಲವು ಗ್ರಾಮಗಳಲ್ಲಿ ಕಪಿಲೆ ಎತ್ತಬೇಕಾದರೆ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ಒಂದೇ ಭಾವಿಯಿಂದ ನೀರನ್ನು ತೆಗೆದುಕೊಳ್ಳುತ್ತಾರೆ. ಹೀಗಿರಬೇಕಾದರೆ ಒಬ್ಬನು ಒಂದು ಕಪಿಲೆಗೆ ಪಂಪ್ ಹಾಕಿಸಿಕೊಂಡಿದ್ದು ಇನ್ನೊಬ್ಬನೂ ಸಹ ಪಂಪ್ ಹಾಕಲು connection ಕೊಡಿ ಎಂದು ಕೇಳಿದರೆ ಯಾವ ಕಾರಣದಿಂದಲೋ ಏನೋ ಕೊಡುತ್ತಾ ಇಲ್ಲ. ಅವರು ನೀರನ್ನು ಒಂದೇ ಪಂಪಿನಿಂದ ಒದಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಅದಕ್ಕೆ ಅನೇಕ ತೊಂದರೆಗಳಿವೆ. ಇಂಥ ಸಂದರ್ಭಗಳಲ್ಲಿ ಒಂದು ಭಾವಿಗೆ ಒಬ್ಬನು ಪಂಪ್ ಹಾಕಿಸಿಕೊಂಡಿರುವಾಗ ಇನ್ನೊಬ್ಬನೂ ಪಂಪ್ ಬೇಕು ಎಂದು ಕೇಳಿದರೆ ಕೊಡತಕ್ಕದ್ದು ನ್ಯಾಯ ಮತ್ತು ಅವನಿಗೆ ಕರೆಂಟ್ ಕೊಡುವುದು ಉತ್ತಮವಾದದ್ದು ಎಂದು ಈ ಸಲಹೆಯನ್ನು ನಾನು ಸಭೆಯಮುಂದೆ ಇಡುತ್ತೇನೆ.

ಸರ್ಕಾರದವರು ಅನೇಕ ಕೆಲಸಗಳನ್ನು ಈ ವಿದ್ಯುಚ್ಛಕ್ತಿ ಯೋಜನೆಯಲ್ಲಿ ಮಾಡಿದ್ದಾರೆ. ವಾಸ್ತವವಾಗಿ ಬಹಳ ಉತ್ತಮವಾದಂಥ ಕೆಲಸಗಳನ್ನು ಮಾಡಿದ್ದಾರೆ. ಹೊನ್ನೆಮರಡು ಯೋಜನೆಯ ಅಂಗವಾಗಿ ಮೈಸೂರು ಸಂಸ್ಥಾನದಲ್ಲಿ ಎಲ್ಲ ಕೆಲಸಕಾರ್ಯಗಳೂ ನಡೆಯುತ್ತಿವೆ ಎಂದು ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಜೋಗ್‌ನಲ್ಲಿ ಉತ್ಪತ್ತಿಯಾಗತಕ್ಕಂಥ power ಏನಿದೆಯೋ ಅದನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಎರಡು ಮೂರು ವರ್ಷಗಳಿಂದ ಪ್ರಯತ್ನಮಾಡಿದರೂ ಕೂಡ ಆಗುತ್ತಿಲ್ಲ. ಆದ್ದರಿಂದ ಇದರ ಕಡೆಗೆ ಗಮನಕೊಟ್ಟು ಹೆಚ್ಚಿನ ಸಾಮಗ್ರಿಗಳನ್ನು ತರಿಸುವುದಾದರೆ ಮುಂದೆ ಒಂದೆರಡು ವರ್ಷಗಳಲ್ಲಿ ಅಲ್ಲಿ ಉತ್ಪತ್ತಿಯಾಗತಕ್ಕ power ಉಪಯೋಗಿಸಿಕೊಂಡು ಜನಗಳಿಗೆ ಅನುಕೂಲಮಾಡಿ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

*ಶ್ರೀ ಜಿ. ನಾರಾಯಣಗೌಡ (ಮುಳಬಾಗಿಲು—ಶ್ರೀನಿವಾಸಪುರ).—ಸ್ವಾಮಿ, ಈ ವಿದ್ಯುಚ್ಛಕ್ತಿ ಡಿಮ್ಯಾಂಡಿನಮೇಲೆ ಮಾತನಾಡುತ್ತ ಕೆಲವು ಸಲಹೆಗಳನ್ನು ಮಾಡಬೇಕೆಂದು ಇಷ್ಟಪಡುತ್ತೇನೆ. ನಮ್ಮ ದೇಶಕ್ಕೆ ಆಗುವಷ್ಟು ವಿದ್ಯುಚ್ಛಕ್ತಿ ಈಗ ಉತ್ಪತ್ತಿಯಾಗುತ್ತಿದೆ. 1956ನೆ ಇಸವಿಯನಂತರ ನಮಗೆ ಹೆಚ್ಚಿಗೆ ವಿದ್ಯುಚ್ಛಕ್ತಿ ಬೇಕಾದರೆ ನಾವು ಹೊಸದಾಗಿ ಉತ್ಪತ್ತಿ ಮಾಡಬೇಕಾಗಿರುತ್ತದೆ ಎನ್ನುವುದು ಸರ್ಕಾರಕ್ಕೆ ತಿಳಿದಿರತಕ್ಕ ವಿಷಯವೇ ಆಗಿದೆ. ಇದಕ್ಕೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದು ತಿಳಿಯದಾಗಿದೆ. ಯಾಕೆಂದರೆ ಈಗ ನಾಲ್ಕೈದು ವರ್ಷಗಳಿಂದ ಕೆಲವು ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ಪ್ರಾರಂಭಮಾಡಬೇಕು ಎಂದು ಹೇಳುತ್ತಲೇ ಇದ್ದಾರೆ. ಆದರೆ ಯಾವುದೂ ಸಹ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದನ್ನು ಬೇಗ ಕಾರ್ಯರೂಪಕ್ಕೆ ತರುವುದು ಬಹಳ ಉಚಿತವೆಂದು ನನಗೆ ತೋರುತ್ತದೆ.

4 P.M.

ಈಗ ವಿದ್ಯುಚ್ಛಕ್ತಿ ಸರಬರಾಜು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹೆಚ್ಚಾಗಿ ಆಗಬೇಕು ಎಂದು ಹೇಳುತ್ತಿದ್ದಾರೆ. ಈ ವರ್ಷ ಇಷ್ಟಿಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕಾದರೆ ಏನಾಗಬಹುದು ಎಂಬುದನ್ನು ಆಲೋಚನೆಮಾಡುವಾಗ ನಮ್ಮ ಸಂಸ್ಥಾನದಲ್ಲಿ ಸುಮಾರು 19 ಸಾವಿರ ಗ್ರಾಮಗಳು ಇವೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಮತ್ತು ಈ ವಿದ್ಯುಚ್ಛಕ್ತಿ ಸರಬರಾಯಿ ಹೆಚ್ಚಾಗಿ ಎಲ್ಲಿ ಆಗಬೇಕೋ ಅಲ್ಲಿ ಆಗುತ್ತಾ ಇಲ್ಲ. ಈಗ ಸಾಧಾರಣವಾಗಿ ಕೈಗಾರಿಕೆಗಳಿಗೆ ನಮ್ಮ ವಿದ್ಯುಚ್ಛಕ್ತಿ ಉತ್ಪನ್ನದೊಳಗೆ 1,05,000 ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಇದ್ದೇವೆ. ವ್ಯವಸಾಯಕ್ಕೆ 5,600 ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಇದ್ದೇವೆ. ಕೈಗಾರಿಕೆಗೆ ನಾವು ಕೊಡುತ್ತಾ ಇರುವುದು ನಮ್ಮ ಉತ್ಪನ್ನದ ಖರ್ಚು ಏನು ಬೀಳುತ್ತದೆಯೋ ಅದಕ್ಕಿಂತ ಕಡಿಮೆ ದರದಲ್ಲಿ ಕೊಡುತ್ತಾ ಇದ್ದೇವೆ. ವ್ಯವಸಾಯಕ್ಕೆ ಕೊಡುತ್ತಾ ಇರುವುದು ನಮ್ಮ ಉತ್ಪನ್ನದ ಖರ್ಚು ಎಷ್ಟಾಗುತ್ತದೆಯೋ —ಕೆಲವು ಸಂದರ್ಭಗಳಲ್ಲಿ ಅಂದರೆ ಆಹಾರ ಪದಾರ್ಥಗಳನ್ನು ಬೆಳೆಯುವಾಗ ಬಿಟ್ಟು—ಉಳಿದ ಸಂದರ್ಭಗಳಲ್ಲಿ ಅದಕ್ಕೆ ಮೂರರಷ್ಟು. ಈಗ ದೇಶದಲ್ಲಿ ಸಾಧಾರಣ ರೈತರ ಆರ್ಥಿಕಮಟ್ಟವನ್ನು ಹೆಚ್ಚು ಮಾಡಬೇಕಾದರೆ ನಾವು ಅವರಿಗೆ ಬಹಳ ಸಹಕಾರಿಯಾಗಬೇಕು. ಹಾಗೆ ಆಗಬೇಕಾದರೆ ಈಗಿನ ಸಂದರ್ಭದಲ್ಲಿ ಅವರು ಕೆಲವು ಹಣ ಬರುವ ಬೆಳೆಗಳನ್ನು ಬೆಳೆಯಲೇ ಬೇಕಾಗುತ್ತದೆ. ಆಗ ಅವರಿಗೆ $1\frac{1}{2}$ ಆಣೆಯನ್ನು ಒಂದು ಯೂನಿಟ್ಟಿಗೆ ಹೇರಿದರೆ ಅದರಿಂದ ಅವರಿಗೆ ಏನು ತಾನೆ ಉತ್ಪನ್ನ ಬರುತ್ತದೆ ಎಂಬುದನ್ನು ಸ್ವಲ್ಪ ಸರ್ಕಾರದವರು ಯೋಚನೆಮಾಡಬೇಕು. ಸಾಧಾರಣವಾಗಿ ಕಬ್ಬು ಬೆಳೆ ಒಂದು ತೆಗೆದುಕೊಳ್ಳಿ. ಈಗ ಕಬ್ಬು ಮಣ ಒಂದಕ್ಕೆ $2\frac{1}{2}$ ರೂಪಾಯಿನಿಂದ $2\frac{3}{4}$ ರೂಪಾಯಿಗಳವರೆಗೂ ಇದೆ. ಇಂಥ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಉಪಯೋಗಿಸಿ ಕಬ್ಬು ಬೆಳೆದರೆ ಅವನಿಗೆ ಏನು ಬರುತ್ತದೆ ಎಂಬುದನ್ನು ಸರ್ಕಾರದವರು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ನೀವು ಈ ಆಹಾರ ಪದಾರ್ಥಕ್ಕೆ ಒಂದು ದರ ಈ ವ್ಯಾಪಾರದ ಬೆಳೆಗಳಿಗೆ ಇನ್ನೊಂದು ದರ ಮಾಡಿರುವುದರಿಂದ ಎಷ್ಟು ಹೆಚ್ಚು ಉತ್ಪನ್ನ ಸರ್ಕಾರದವರಿಗೆ ಬಂದಿದೆ ಎಂಬುದನ್ನು ಸಹ ಸರ್ಕಾರದವರು ಸ್ವಲ್ಪ ನೋಡಿದಲ್ಲಿ, ನನಗೆ ಅನ್ನಿಸುತ್ತದೆ, ಅದರಿಂದ ಹೆಚ್ಚಾಗಿ ಬಂದಿಲ್ಲ ಎಂದು. ಇಂಥ ಸಂದರ್ಭದಲ್ಲಿ ಅವರಿಗೆ ಈ ದರಗಳನ್ನು ಕಡಿಮೆ ಮಾಡುವುದರಿಂದ ಆ ಜನಗಳ ಆರ್ಥಿಕಸ್ಥಿತಿಯ ಮಟ್ಟ ಸ್ವಲ್ಪ ಹೆಚ್ಚಾಗುವುದಕ್ಕೆ ಸ್ವಲ್ಪ ಗಮನ ಕೊಟ್ಟಹಾಗಾಗುತ್ತದೆ ಎಂದು ನಾನು ಅಂದು ಕೊಂಡಿದ್ದೇನೆ.

Mr. SPEAKER.—The cost of production of electricity and its supply will not permit of the rate per unit being less than one anna.

ಶ್ರೀ ಜಿ. ನಾರಾಯಣಗೌಡ.—ನಾವು ಕೈಗಾರಿಕೆಗೆ ಅನೇಕ ಸಂದರ್ಭಗಳಲ್ಲಿ ಮೂರು ಕಾಸು, ಎರಡು ಕಾಸು ಪ್ರಕಾರ ಕೊಡುತ್ತಾ ಇದ್ದೇವೆಯಲ್ಲಾ ಅದನ್ನು ಗಮನಿಸಿ ನೋಡಿದರೆ ವ್ಯವಸಾಯಕ್ಕೆ ಇನ್ನೂ ಸ್ವಲ್ಪ ಈಗಿನ ದರಕ್ಕಿಂತ ಕಡಮೆಮಾಡಬೇಕು; ಆ ರೀತಿ ಮಾಡುವುದು ನ್ಯಾಯವಾಗಿದೆ. ಕೆಲವು ಸಂದರ್ಭಗಳಲ್ಲಿ, ಈಗಿರುವ ಕೈಗಾರಿಕೆಗಳಿಗೆ ಒದಗಿಸುತ್ತಿರುವ ದರವನ್ನು ಹೆಚ್ಚುಮಾಡುವುದು ಸಾಧುವಾಗಿದೆ. ಈಗ ಕೋಲಾರ, ತುಮಕೂರು, ಚಿತ್ರದುರ್ಗ ಈ ಜಿಲ್ಲೆಗಳು ನಾವು ತಿಳಿದಹಾಗೆ ಮಳೆ ಬಹಳ ಕಡಿಮೆ ಬೀಳತಕ್ಕ ಪ್ರದೇಶಗಳು. ಇವು ಯಾವಾಗಲೂ ಬಹಳ ಕಷ್ಟಕ್ಕೆ ಈಡಾದ ಜಿಲ್ಲೆಗಳು ಎಂಬುದು ನಮಗೆಲ್ಲಾ ತಿಳಿದ

ವಿಷಯ. ಬೇರೆಯವರೆಲ್ಲಾ ಸುಖವಾಗಿದ್ದಾರೆಯೇ ಎಂದು ನಮ್ಮ ಸ್ನೇಹಿತರು ಕೇಳುತ್ತಾ ಇದ್ದಾರೆ. ಇದು ಸುಖದ ಪ್ರಶ್ನೆ ಅಲ್ಲ. ನಮ್ಮ ಕಡೆ ಮಳೆ ಇಲ್ಲದೆ ಅನೇಕರು ಬಾವಿಗಳನ್ನು ತೋಡಿಕೊಂಡು ಅವುಗಳಿಂದ ನೀರು ಎತ್ತಿ ಜೀವನಮಾಡುವ ಅನೇಕ ಪ್ರಸಂಗಗಳು ಇವೆ. ಅಂಥ ಸಂದರ್ಭದಲ್ಲಿ ನಮಗೆ ಏನಾಗಿದೆ ಎಂದರೆ ಈ ಒಂದು ಲೈನ್ ಎಳೆಯಬೇಕಾದರೆ ಒಂದು H.P.ಗೆ ಸಾವಿರ ರೂಪಾಯಿಗೆ ಒಂದು ಆಣೆ ಹೆಚ್ಚಾದರೂ ಕೂಡ ವಿದ್ಯುಚ್ಛಕ್ತಿ ಒದಗಿಸುವುದಿಲ್ಲ. ಹಿಂದೆ 1,500 ರೂಪಾಯಿ ಎಂದು ಇಟ್ಟುಕೊಂಡಿದ್ದರು. ಈಗಲೂ ನಮ್ಮ ಸರ್ಕಾರದವರಿಗೆ ಹೇಳುತ್ತೇನೆ ಪ್ರಾರಂಭ ದೆಶೆಯಲ್ಲಿ ಯಾವಾಗಲೂ ಲಾಭ ಬರುವುದಿಲ್ಲ. ಹಿಂದೆ ಎಂದೂ ಬಂದಿಲ್ಲ. ನಾನು ಒಂದು ಉದಾಹರಣೆ ಕೊಡುತ್ತೇನೆ. ಶ್ರೀನಿವಾಸಪುರ ಟೌನ್‌ಗೆ ವಿದ್ಯುಚ್ಛಕ್ತಿ ಒದಗಿಸಿದಾಗ ಒಂದು ಪರ್ಸೆಂಟು ಬಂತು. ಈಗ ಹತ್ತು ಪರ್ಸೆಂಟು ಬರುತ್ತಾ ಇದೆ. ಹೀಗೆ ಯಾವಾಗಲೂ ಈ ವಿದ್ಯುಚ್ಛಕ್ತಿ ಒದಗಿಸುವಾಗ ನಾವು ಯಾವ ಒಂದು remuneration ಬರಬೇಕೆಂದು ನಿರೀಕ್ಷೆಮಾಡುತ್ತೇವೆಯೋ ಅದು ಬರುವುದಿಲ್ಲ. ಅದನ್ನು ಗಮನಿಸಿ ವಿದ್ಯುಚ್ಛಕ್ತಿಯನ್ನು ಕೊಡುವಾಗ ಅನೇಕ ಸಂದರ್ಭಗಳಲ್ಲಿ ಶೇಕಡ ಇಷ್ಟೇ ಬರಬೇಕು ಎನ್ನುವುದನ್ನು ಕೆಲವು ಸಂದರ್ಭಗಳಲ್ಲಿ ಎಕ್ಸೆಮ್ಟ್‌ಮಾಡಿ ಲೈನ್ ಎಳೆಯಬೇಕಾಗುತ್ತದೆ. ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಾವಿರ ರೂಪಾಯಿ ಒಂದು H.P.ಗೆ ಇರುವುದನ್ನು ಸಾವಿರದ ಐನೂರು ರೂಪಾಯಿ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಆಮೇಲೆ ರೂರಲ್ ಎಲೆಕ್ಟ್ರಿಫಿಕೇಷನ್ ವಿಷಯ. ಹಳ್ಳಿಗಾಡುಗಳಲ್ಲಿ, ಬಯಲುಸೀಮೆ ಆದರೆ 100ಕ್ಕೆ 7½ಯಷ್ಟು, ಮಲೆನಾಡು ಆದರೆ 100ಕ್ಕೆ ಐದರಷ್ಟು ಆದಾಯ ಬಂದರೆ ಅಂಥ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡುವ ವಿಷಯವನ್ನು ಪರಿಶೀಲನೆ ಮಾಡುತ್ತಾ ಇದ್ದಾರೆ. ನಾನಾಗಲೇ ಹೇಳಿದಹಾಗೆ, ಪ್ರಾರಂಭ ದೆಶೆಯಲ್ಲಿ ನಮಗೆ ಅಷ್ಟು ಬರುವುದಿಲ್ಲ. ಅದನ್ನು ಗಮನಕ್ಕೆ ತೆಗೆದುಕೊಂಡು ನಾವು ಹಳ್ಳಿಗಳಿಗೆ ಹೆಚ್ಚು ವಿದ್ಯುಚ್ಛಕ್ತಿ ಒದಗಿಸುವ ಒಂದು ಆಶೆ ನಮ್ಮಲ್ಲಿದ್ದರೆ, ಹಳ್ಳಿಗಳವರ ಆರ್ಥಿಕ ಮಟ್ಟವನ್ನು ಮೇಲ್‌ಮಟ್ಟಕ್ಕೆ ತರುವ ಒಂದು ಆಶೆ ಇದ್ದರೆ, ಸ್ವಲ್ಪ ಎಕ್ಸೆಮ್ಟ್‌ಮಾಡಿ ಈ ಗ್ರಾಮಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಡಬೇಕೆಂದು ನಾನು ಮತ್ತೊಮ್ಮೆ ಸಲಹೆಮಾಡುತ್ತೇನೆ.

* ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು—ಉತ್ತರ).—ಸ್ವಾಮಿ, ಅಧ್ಯಕ್ಷರೇ, ನಾನು ಈ ಡಿಮ್ಯಾಂಡಿನಮೇಲೆ ಮಾತನಾಡುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈ ವಿದ್ಯುಚ್ಛಕ್ತಿಯ ಒಂದು ಹಾವಭಾವ ಏನೆಂಬುದನ್ನು ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ಈಗ್ಯೆ ಸುಮಾರು ಒಂದು ಒಂದೂವರೆ ವರ್ಷಗಳಿಂದ ಸತತವಾಗಿ ತರುತ್ತಾ ಇದ್ದರೂ, ಈಗ ಅವರು ಭದ್ರಾವತಿಯಿಂದ ಬೆಂಗಳೂರಿಗೆ ಇನ್ನೂ ಲೈನ್ 50 ಸೈಕಲ್ ಪವರ್ ಓವರ್‌ಲೋಡ್ ಆಗಿದೆ, ಅದರಮೇಲೆ ಹೆಚ್ಚಿನ ಪವರ್ ಕೊಡುವುದಕ್ಕಾಗುವುದಿಲ್ಲಎಂದು ಹೇಳಿ ಸುಮಾರು ಎರಡು ವರ್ಷಗಳಿಂದ ಒಂದೇ ಸಮನಾಗಿ ಹೇಳುತ್ತಾ ಇದ್ದಾರೆ. ಈ ಸಮಯದಲ್ಲಿ ಮಾನ್ಯ ಮಂತ್ರಿಗಳ ಮತ್ತು ಸರ್ಕಾರದವರ ಗಮನಕ್ಕೆ ಒಂದು ವಿಷಯ ತರಬೇಕೆಂದು ಆಶೆ ಇದೆ. ಈಗ ಬಯಲುಸೀಮೆ ಎಂದು ಏನು ಹೇಳುತ್ತೇವೋ ಆ ಡಿಸ್ಟ್ರಿಕ್ಟುಗಳಲ್ಲಿ ಕೇವಲ ಲಿಫ್ಟ್ ಇರಿಗೇಷನ್ ಸಿಸ್ಟಂನಿಂದಲೇ ನೀರುಸರಬರಾಯಿ ಮಾಡಿಕೊಂಡು ಜೀವನ ಮಾಡಬೇಕಾದ ಕಾಲ ಬಂದಿದೆ. ನಮಗೆ ಇರತಕ್ಕ ಕೆರೆ ಆಶ್ರಯದಲ್ಲಿ ಕೇವಲ ತರೀಬೆಳೆ ಬೆಳೆದುಕೊಂಡು ಆರು ತಿಂಗಳು ಜೀವನ ಮಾಡುವುದಕ್ಕೆ ಮಾತ್ರ ಸಾಧ್ಯವೇ ಹೊರತು ಬಾಕಿ ಕಾಲಗಳಲ್ಲಿ ಸಾಧ್ಯವಿಲ್ಲ. ರೈತರ ಆರ್ಥಿಕ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಈ ಪವರ್ ಮೂಲಕಾರಣವಾಗಿದೆ. ನಿನ್ನೆ ಶ್ರೀಮಾನ್ ಎಸ್. ವಿ. ರಾಮಮೂರ್ತಿಯವರೂ ಸಹ ಪಂಚ ವಾರ್ಷಿಕ ಯೋಜನೆಯಲ್ಲಿ ರೈತರ ಆರ್ಥಿಕ ಪರಿಸ್ಥಿತಿ ಸರಿಹೋಗಬೇಕಾದರೆ ಏನೇನು ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವ ಸಂದರ್ಭದಲ್ಲಿ ಹಳ್ಳಿಗಳ ಕಡೆ ಬಂದು ಬಹುಮಟ್ಟಿಗೆ ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ಒದಗಿಸಲು ಆಲೋಚನೆ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ನಮ್ಮ ಸರ್ಕಾರದವರಿಗೆ ಪವರ್ ಸರಬರಾಯಿ ಮಾಡಲು ತೊಂದರೆ ಬರಬಹುದು, ಹೊನ್ನೆಮರಡು ಪ್ರಾಜೆಕ್ಟ್ ತೆಗೆದುಕೊಳ್ಳದಿದ್ದರೆ ಮುಂದೆ ಬಯಲುಸೀಮೆಗೆ ಏನೇನೂ ಪವರ್ ಕೊಡುವುದಿಲ್ಲ ಎಂದು ಹೇಳುತ್ತಾರೆ ಎಂದು ನಾವು ಕೂಡ ಹೇಳಿದೆವು. ಅವರೂ ಕೂಡ ಒಪ್ಪಿಕೊಂಡು ಅದನ್ನು ಬೇಗ ಕಾರ್ಯಗತಮಾಡೋಣ ಎಂದು ಭರವಸೆ ಕೊಟ್ಟಿದ್ದಾರೆ. ಈ ಪವರ್ ಕೊಡುವ ವಿಷಯದಲ್ಲಿ ನಾವು ಸತತವಾಗಿ ಹೇಳುತ್ತಾ ಇದ್ದೇವೆ, ಆ ರೀತಿ ಕನ್ಸ್ಯೂಮರ್ಸ್‌ಗೆ ಎಂದರೆ ರೈತರಿಗೆ ಸತಾಯಿಸಿದರೆ ಅವರ ಮನಸ್ಸಿಗೆ ನೋವಾಗುತ್ತದೆ, ಅವರಿಗೆ ಬೇರೆ ಯಾವ ಮಾರ್ಗವೂ ಇಲ್ಲ. ಬೆಂಗಳೂರಿನ ಸುತ್ತುಮುತ್ತಲೂ ಅವರು ಕೇವಲ ಕಮರ್ಷಿಯಲ್ ಕ್ರಾಪ್ಸ್‌ನಿಂದಲೇ ಜೀವನಮಾಡಬೇಕು. ಒಂದು ವಿಷಯ ನಮ್ಮ ಮಂತ್ರಿಗಳ ಗಮನಕ್ಕೆ ತರಬೇಕೆಂದು ಆಶೆ ಇದೆ. ನನಗೆ ತಿಳಿದಮಟ್ಟಿಗೆ ಹತ್ತಾರು ಹಳ್ಳಿಗಳಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಒಬ್ಬೊಬ್ಬರಿಗೇ ಐದು ಎಕರೆ ಇರತಕ್ಕ ಪ್ಲಾಟು ಇಲ್ಲ. ಅದರಲ್ಲಿ 2-3 ಜನ ವ್ಯವಸಾಯ ಮಾಡಿಕೊಂಡು ಒಬ್ಬೊಬ್ಬರು 1, 2, 3 ಎಕರೆ ಜಮೀನುಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಬಾವಿಗಳಿಗೆ ಸಾವಿರಾರು ರೂಪಾಯಿ ಖರ್ಚುಮಾಡಿ ಅದರಿಂದ ನೀರನ್ನೆತ್ತಿ ಕಮರ್ಷಿಯಲ್‌ಕ್ರಾಪ್ಸ್ ಬೆಳೆದು ಜೀವನಮಾಡತಕ್ಕ ಪರಿಸ್ಥಿತಿ ಇದೆ. ಅಂಥ ಸಂದರ್ಭದಲ್ಲಿ ಪವರ್ ಇಲ್ಲ ಎಂದರೆ ಅವರ ಗತಿ ಏನು? ಈ ಪವರ್ ಕೊಡುವಾಗಲೂ ಸಹ ಒಂದು ತೊಂದರೆ ಆಗುತ್ತಾ ಇದೆ. ಇದನ್ನು ಬಹಳ ತೀವ್ರವಾಗಿ ಆಲೋಚನೆಮಾಡಬೇಕೆಂದು ಈ ಸಭೆಯ ಗಮನಕ್ಕೆ ತರಲು ಆಶಿಸುತ್ತೇನೆ. ಈಗ ಬಾವಿಗಳಿಗೆ ಪವರ್ ಕೊಡುತ್ತೀರಿ. ಅದು ಏನಾಗಿದೆ ಎಂದರೆ ನೀರೆಲ್ಲಾ ಆ ಕಡೆಯಲ್ಲೇ ಶೇಖರಣೆ ಆಗಿ ಇತರ ಬಾವಿಗಳಿಗೆ ಇರತಕ್ಕ ನೀರಿನ ಆಶ್ರಯ ಕಮ್ಮಿ ಆಗುತ್ತಾ ಇದೆ. ಅದರಿಂದ ಮುಂದೆ ಪವರ್ ತೆಗೆದುಕೊಳ್ಳುವವನಿಗೆ ತೊಂದರೆಯಾಗುತ್ತದೆ ಮತ್ತು ನೀರು ಇಲ್ಲದೆ ಹೋಗಿ ತಾಪತ್ರಯವಾಗುತ್ತದೆ. ಆದ್ದರಿಂದ ಪವರ್‌ಕೊಡುವುದಕ್ಕಿಂತ ಮುಂಚೆ ಒಂದು ನಿಯಮಿತವಾದ ರೀತಿಯಲ್ಲಿ ಕಂಡೀಷನ್‌ಹಾಕಿ ಪವರ್‌ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಅದನ್ನು ಯಾವ ರೀತಿಮಾಡಬೇಕೆಂಬುದನ್ನು ಆಲೋಚನೆಮಾಡಬೇಕೆಂದು ಹೇಳುತ್ತೇನೆ.

ಮತ್ತು ಪವರ್ ಕೊಡುತ್ತ ಇರುವ ದರದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈಗ ಕಮರ್ಷಿಯಲ್‌ಕ್ರಾಪ್ಸು, ಫುಡ್‌ಕ್ರಾಪ್ಸು ಎಂದು ಹೇಳಿ ಎರಡು ತರಹವಾದ ದರ ಇದೆ. ಆರು ಕಾಸನ್ನು 1½ ಆಣೆ ದರದಂತೆ ಮಾಡಿದ್ದರಿಂದ ಸರ್ಕಾರದವರಿಗೆ ಹೆಚ್ಚು

(ಶ್ರೀ ಕೆ. ವಿ. ಬೈರೇಗೌಡ.)

ವರಮಾನ ಬರಲಾರದು. ಆದ್ದರಿಂದ flat rate ವಿಧಿಸಿ ಯಾವ ವಿಧವಾದ ಅವ್ಯವಸ್ಥೆಗೂ ಅವಕಾಶವಿಲ್ಲದಂತೆ ಮಾಡಿದರೆ ಸುಲಲಿತವಾಗಿ ವರಮಾನ ಬರಲಿಕ್ಕೆ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಸರ್ಕಾರದವರ ಗಮನಕ್ಕೆ ತರುತ್ತೇನೆ. ಮತ್ತು ಮಿಲ್‌ಗಳಿಗೆ ಕೊಡುವ ದರ ತೆಗೆದುಕೊಳ್ಳೋಣ. ಬಿನ್ನಿಮಿಲ್ ಹೆಸರುವಾಸಿ ಯಾದ ಮಿಲ್ಲು. ಅದಕ್ಕೆ 4½ ಕಾಸಿನಂತೆ ಕೊಟ್ಟಿದ್ದೀರಿ. ಅವರು ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡಿದ್ದಾರೆ. ಇವೊತ್ತಿಗೂ ಸಹ ಅವರಿಗೆ ಅದೇ ದರದಂತೆ ಕೊಡುತ್ತಾ ಹೋದರೆ ಬಾಕಿ ರೈತರ ಗತಿ ಏನಾಗಬೇಕು? ದೇಶದಲ್ಲಿ ಸುಮಾರು 78 ಭಾಗ ಜನ ಹಳ್ಳಿಗಾಡಿನಲ್ಲಿ ಜೀವನ ಮಾಡುವವರು, ಸುಮಾರು 3-4 ಜಿಲ್ಲೆಗಳಲ್ಲಿ ಬಾವಿಗಳ ಆಶ್ರಯದಲ್ಲೇ ಅವರ ಜೀವನ ಆಗಬೇಕು. ಅಂಥ ಸಮಯದಲ್ಲಿ ರೈತನಿಗೆ ಹೆಚ್ಚಿನ ಪವರ್ ಕೊಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಸಂದರ್ಭದಲ್ಲಿ ಈ ಇಲಾಖೆಯು ಕಾರ್ಯಕ್ರಮ ಸರಿಯಾಗಿ ನಡೆದಂತೆ ಕಾಣುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಮತ್ತು ಪವರ್ ಈ ರೀತಿ ಓವರ್ ಲೋಡ್ ಆಗುತ್ತಿದೆ ಎಂಬ ವಿಷಯ ಇಲಾಖೆಯ ಅಧಿಕಾರಿಗಳ ಮತ್ತು ಸರ್ಕಾರದವರ ಗಮನಕ್ಕೆ ಬಂದರೂ ಕೂಡ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರ ಯಾವ ಯೋಚನೆಯನ್ನೂ ಮಾಡದೇ ಇರುವುದು ಸರಿಯಲ್ಲ. ಇಲಾಖೆಯವರನ್ನು ಕೇಳಿದರೆ ಪವರ್ ಓವರ್‌ಲೋಡ್ ಆಗಿದೆ ಬೇರೆ ಲೈನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಸರ್ಕಾರದವರನ್ನು ಕೇಳಿದರೆ ಮಾಡಿಸುತ್ತೇವೆ, ಮಾಡಿಸುತ್ತೇವೆ ಎಂದು ಹೇಳುತ್ತೀರಿ. ಆದ್ದರಿಂದ ಕೂಡಲೇ 50 ಸೈಕಲ್ ಪವರ್ ಲೈನ್‌ನಲ್ಲಿ ಓವರ್‌ಲೋಡ್ ಆಗಿರುವುದನ್ನು ಕಮ್ಮಿ ಮಾಡಿ. ಅದಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ವಿದ್ಯುಚ್ಛಕ್ತಿಯನ್ನು ಇತರರಿಗೂ ಒದಗಿಸಿಕೊಡಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ ಎಲೆಕ್ಟ್ರಿಸಿಟಿ ಬೋರ್ಡ್ ಎಂಬುದನ್ನು ಎಲ್ಲಾ ಸಂಸ್ಥಾನಗಳಲ್ಲೂ ಇಂಡಿಯಾ ಸರ್ಕಾರದವರು ಆಕ್ಟ್ ಪ್ರಕಾರ ಏರ್ಪಾಡು ಮಾಡುತ್ತಾರೆ, ಮೈಸೂರು ದೇಶಕ್ಕೆ ಸದ್ಯಕ್ಕೆ ಅನ್ವಯಿಸದಂತೆ ಏರ್ಪಾಡಾಗಿರುತ್ತದೆ ಎಂದು ಹೇಳಿ ಹೋದ ವರ್ಷ ಅಸೆಂಬ್ಲಿಯಲ್ಲಿ ಈ ಪ್ರಶ್ನೆ ಬಂದಾಗ ಉತ್ತರ ಕೊಡಲಾಗಿತ್ತು. ಈ ವರ್ಷ ಇದುವರೆಗೂ ನೋಡಿದ್ದರಲ್ಲಿ ಇಂಡಿಯಾ ಸರ್ಕಾರದವರು ಅದನ್ನು ಏರ್ಪಾಡು ಮಾಡಬೇಕೆಂದು ಒತ್ತಾಯ ಮಾಡುತ್ತ ಇದ್ದಾರೆ ಎಂದು ಕೇಳುತ್ತೇನೆ. ಅದರ ಬಗ್ಗೆ ಸರ್ಕಾರದ ಧೋರಣೆ ಏನು? ಸರ್ಕಾರದವರು ನಿಜವಾಗಿಯೂ ಆ ತರಹ ಎಲೆಕ್ಟ್ರಿಸಿಟಿ ಬೋರ್ಡ್‌ನ್ನು ಮೈಸೂರು ಸಂಸ್ಥಾನದಲ್ಲಿ ಏರ್ಪಾಡು ಮಾಡುತ್ತಾರೆಯೇ? ಆ ರೀತಿ ಮಾಡಿದ ಪಕ್ಷದಲ್ಲಿ ಅನುಕೂಲವಾಗುತ್ತದೆಯೇ, ಅನಾನುಕೂಲವಾಗುತ್ತದೆಯೆ? ಈ ಬಗ್ಗೆ ಯಾವ ಕಾರ್ಯಕ್ರಮ ಕೈಕೊಂಡಿದ್ದಾರೆ ಎಂಬ ವಿಷಯವನ್ನು ಅವರು ಸಭೆಗೆ ತಿಳಿಸುವುದೊಳ್ಳೆಯದು ಎಂದು ಭಾವಿಸುತ್ತೇನೆ. ಇರಿಗೇಷನ್ ಪಂಪುಗಳ ವಿಚಾರದಲ್ಲಿ ಮಾನ್ಯ ಸ್ನೇಹಿತ ರಾದ ಶ್ರೀ ಬೈರೇಗೌಡರು ಹೇಳಿದ್ದರ ಬಗ್ಗೆ ಸರ್ಕಾರದವರ ತೀವ್ರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದು ಆಶಿಸುತ್ತೇನೆ. ಸ್ವಾಮಿ, ಕಮರ್ಷಿಯಲ್ ಕ್ರಾಪ್ಸ್, ಫುಡ್‌ಕ್ರಾಪ್ಸ್ ಎಂದು ಹೇಳಿ ಬೇರೆ ಬೇರೆ ದರ ಮಾಡಿದ್ದೀರಿ. ಒಂದೇ ಜಮೀನಿನಲ್ಲಿ ಒಬ್ಬ ರೈತ ಒಂದು ಸಾರಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತಾನೆ. ಅದಾದನಂತರ ಫುಡ್‌ಕ್ರಾಪ್ಸ್ ಹಾಕುತ್ತಾನೆ. ಇದರ ಬಗ್ಗೆ ಇಲಾಖೆಯವರು ಏನು ಮಾಡುತ್ತಾರೆ ಎಂದರೆ, ಕಮರ್ಷಿಯಲ್ ಕ್ರಾಪ್ಸ್‌ನ ದರದಂತೆಯೇ ಎಲ್ಲಕ್ಕೂ ರೈತನಿಂದ ವಸೂಲು ಮಾಡಿಕೊಳ್ಳುತ್ತಾರೆ. ಆ ಮೇಲೆ ಅವನು ಅರ್ಜಿಹಾಕಿಕೊಳ್ಳಬೇಕು, ವಿದ್ಯುಚ್ಛಕ್ತಿ ಇಲಾಖೆಯವರು ರೆವಿನ್ಯೂ ಇಲಾಖೆಗೆ ಕಳುಹಿಸುತ್ತಾರೆ. ಆ ಅರ್ಜಿಯು ರೆವಿನ್ಯೂ ಇನ್ಸ್‌ಪೆಕ್ಟರಲ್ಲಿಗೆ ಬಂದಮೇಲೆ ಅವರು ಹೋಗಿ ನೋಡಿ, ಫುಡ್ ಕ್ರಾಪ್ ಬೆಳೆದಿದ್ದಾನೆ ಎಂದು ಸರ್ಟಿಫೈ ಮಾಡಿದ ಮೇಲೆ ರೀಫಂಡ್ ಕೊಡುತ್ತಾರೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಇದರಿಂದ ಲಂಚ ಮತ್ತು ಇತರ ದುರ್ ವ್ಯಾಪಾರಗಳಿಗೆ ಅವಕಾಶವಿದೆ ಮತ್ತು ಅವಕಾಶವಾಗಿದೆ, ಎಂಬುದನ್ನು ಎಷ್ಟು ಹೇಳಿದರೂ ತೀರದು. ಇದೆಲ್ಲಾ ಮಾಡುವುದಕ್ಕಿಂತ ಫ್ಲ್ಯಾಟ್ ರೇಟ್ ಮಾಡಿ ಕಮರ್ಷಿಯಲ್ ಕ್ರಾಪ್ ಆಗಲಿ ಫುಡ್‌ಕ್ರಾಪ್ ಆಗಲಿ ಒಂದೇ ದರ ನಿಗದಿ ಮಾಡಿದರೆ ಲಂಚ ಮುಂತಾದುವುಗಳಿಗೆ ಅವಕಾಶವಿರುವುದಿಲ್ಲ. ರೈತ ರೆವಿನ್ಯೂ ಇನ್ಸ್‌ಪೆಕ್ಟರ, ಅಮಲ್ದಾರರ ಮನೆ ಬಾಗಿಲಿಗೆ ಅಲೆಯಬೇಕಾದ ಪ್ರಮೇಯ ಬರುವುದಿಲ್ಲ. ಆ ರೀತಿ ಅತಿಶೀಘ್ರವಾಗಿ ಮಾಡಬೇಕಾದುದು ಅತ್ಯಗತ್ಯವೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಈಗ ಮೈಸೂರು ಸರ್ಕಾರದವರು ಖಾಸಗೀ ಮನೆಗಳಿಗೆ ಇರತಕ್ಕ ಎಲೆಕ್ಟ್ರಿಕಲ್ ಇನ್ಸ್ಟಲೇಷನ್ನನ್ನು ಪ್ರತಿ ವರ್ಷವೂ ಸಹ ಟೆಸ್ಟ್ ಮಾಡಿಸಬೇಕೆಂದು ಆರ್ಡರ್ ಮಾಡಿದ್ದಾರೆ. ಟೆಸ್ಟ್ ಮಾಡುವವರು ಯಾರು ಎಂದರೆ ಎಲೆಕ್ಟ್ರಿಕಲ್ ಕಂಟ್ರ್ಯಾಕ್ಟರುಗಳು ಮಾಡಬೇಕು. ಅವರ ಮೂಲಕ ಟೆಸ್ಟ್ ಮಾಡಿಸಿ ಸರ್ಟಿಫಿಕೇಟ್ ಪಡೆದರೆ ಮಾತ್ರ ಕರೆಂಟು ಕೊಡುವುದನ್ನು ಮುಂದುವರಿಸುತ್ತೇವೆ, ಇಲ್ಲದೆ ಇದ್ದರೆ ಸಾಧ್ಯವಿಲ್ಲ ಎಂದು ಹೊಸದಾಗಿ ಆರ್ಡರ್ ಕೊಟ್ಟಿದ್ದೀರಿ. ನಾನು ತಮ್ಮ ಗಮನಕ್ಕೆ ತರಬೇಕಾದದ್ದು ಏನೆಂದರೆ, ನೀವೇನೋ ಒಳ್ಳೆಯ ಉದ್ದೇಶದಿಂದ ಈ ಆರ್ಡರನ್ನು ಹೊರಡಿಸಿದ್ದೀರಿ. ಏಕೆಂದರೆ ಅನೇಕ ಮನೆಗಳಲ್ಲಿ ಕೆಲವರು ಕಾನೂನು ಮೀರಿ ಬೇರೆ ಬೇರೆ ಕಡೆ ಅಥವಾ ಅನೇಕ ರೀತಿಯಲ್ಲಿ ದೀಪಗಳನ್ನು ಹಾಕಿಕೊಂಡಿರತಕ್ಕ ಸಂದರ್ಭಗಳು ಇರಬಹುದು. ಆದರೆ ಖಾಸಗೀ ಕಂಟ್ರ್ಯಾಕ್ಟರುಗಳಿಂದ ಟೆಸ್ಟ್ ಮಾಡಿಸಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದರೆ ಅದರಲ್ಲಿ ಅನೇಕ ಲೋಪದೋಷಗಳಿವೆ. ಇದರಿಂದ ಮನೆಯವರೂ ಮತ್ತು ಖಾಸಗೀ ಕಂಟ್ರ್ಯಾಕ್ಟರುಗಳೂ ಸೇರಿಕೊಂಡು ಕಂಟ್ರಾಕ್ಟರುಗಳು ಚೆಕ್‌ಮಾಡದೆಯೇ ಒಪ್ಪಿಗೆ ಕೊಟ್ಟು ಸರ್ಟಿಫಿಕೇಟ್ ಬರೆದು ಕಳುಹಿಸಿಕೊಟ್ಟರೆ ಆಯಿತು, ಚೆಕ್ ಮಾಡಬೇಕಾದದ್ದೇ ಇಲ್ಲ. ಇದರಿಂದ ಈ ಸರ್ಟಿಫಿಕೇಟನ್ನು ಯಾವ ರೀತಿಯಲ್ಲಿ ಬೇಕಾದರೂ ಪಡೆದುಕೊಳ್ಳಲಿಕ್ಕೆ ಅವಕಾಶವಾಗುತ್ತದೆಯೇ ಹೊರತು ಯಾವ ಉದ್ದೇಶದಿಂದ ತಾವು ಆರ್ಡರ್ ಹೊರಡಿಸಿದ್ದೀರೋ ಆ ಸದುದ್ದೇಶ ಸಾರ್ಥಕವಾಗುವುದಿಲ್ಲ. ಅದರ ಬದಲು ಇದು ಅತ್ಯಗತ್ಯವಾಗಿ ಆಗಬೇಕಾದದ್ದು ಎಂಬುದನ್ನು ಅರಿತು, ಸರ್ಕಾರದವರೇ ವರ್ಷಕ್ಕೆ ಒಂದು ಸಾರಿ ಟೆಸ್ಟ್ ಮಾಡಿ ಲೋಪದೋಷ ಇದ್ದರೆ, ನಾಮಿನಲ್ ಫೀ ನಿಗದಿ ಮಾಡಿ, ಅದನ್ನು ಸರಿಪಡಿಸಿ ಆ ಫೀಜನ್ನು ವಸೂಲು ಮಾಡಿಕೊಳ್ಳಬಹುದು. ಇಲ್ಲದೇ ಇದ್ದರೆ ತಾವು ಮಾಡಿರುವ ಆರ್ಡರ್‌ನಿಂದ ಅನುಕೂಲವಾಗುವುದಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿ ಜನಗಳಿಗೆ ತೊಂದರೆಯಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಅನಂತರ ಸ್ವಾಮಿ, ಈ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನಲ್ಲಿನ ಕೆಲವು ನ್ಯೂನತೆಗಳನ್ನು ನನ್ನ ಮಾನ್ಯ ಸ್ನೇಹಿತರಾದ ವಿ. ಎಂ. ಮ್ಯಾಸ್ಕರೇನ್‌ಹ್ಯಾಸ್‌ರವರು ಹೇಳುತ್ತಾ ಇದ್ದರು. ಶಿಬ್ಬಂದಿ ಕೂಡ ಬಹಳ ಜಾಸ್ತಿ ಎಂದು ಕಾಣುತ್ತದೆ. ನಾನು ಈ ಸಿಟಿ ಪ್ರದೇಶದ ವಿಚಾರ ಪ್ರಸ್ತಾಪ ಮಾಡುವುದಿಲ್ಲ. ಹೊರಗಡೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡುತ್ತಾ ಇರಬೇಕಾದರೆ ಶಿಬ್ಬಂದಿ ಇಟ್ಟುಕೊಂಡು ಅಮಾನಿ ರೇಟ್‌ನಲ್ಲಿ ಕೆಲಸ ಮಾಡುತ್ತಾ ಇರುವಾಗ ನಾನು ನೋಡಿದ್ದೇನೆ. ಅನೇಕ ಜನ ಎಲೆಕ್ಟ್ರಿಕಲ್ ಇಲಾಖೆಯ ಶಿಬ್ಬಂದಿಯ ಅನೇಕ ಜನ ಎಲೆಕ್ಟ್ರಿಕಲ್ ಇಲಾಖೆಯವರು ಈ ಅಮಾನಿ ಸಿಬ್ಬಂದಿಯಲ್ಲಿ ಕೆಲವರಿಗೆ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರುಗಳ ಮನೆಯಲ್ಲೋ ಅಥವಾ ಲೆಕ್ಕಕ್ಕೆ ಮಾತ್ರ ಹಾಜರಾತಿ ಹಾಕಿ ಹಣವನ್ನು ಪಡೆಯುವ ಒಂದು ದುರ್ವ್ಯಾಪಾರ ಈಗ ಹಾಲಿ ಇದೆ. ಅವರಲ್ಲಿ ಕೆಲವರು ನಿಜವಾಗಿಯೂ ಕೆಲಸ ಮಾಡುವುದಿಲ್ಲ. ಸುಮ್ಮನೆ ಹಣವನ್ನು ಮಾತ್ರ ಕೆಲಸ ಮಾಡಿದ್ದಾರೆ ಎಂದು ಡ್ರಾ ಮಾಡುವುದು ಸ್ವಾಭಾವಿಕವಾಗಿ ಕಾಣುತ್ತಾ ಇದೆ. ನನಗೆ ಅನ್ನಿಸುತ್ತದೆ ಇದರ ಬದಲು ಖಾಸಗೀ ಕಂಟ್ರ್ಯಾಕ್ಟರುಗಳಿಗೇ P. W. D. ಇಲಾಖೆಯಲ್ಲಿ ಟೆಂಡರ್ ಮೂಲಕ ಯಾವ ರೀತಿ ಕೊಟ್ಟು ಕೆಲಸ ಮಾಡಿಸುತ್ತೀರೋ ಅದೇ ರೀತಿ ಟೆಂಡರ್ ಕರೆದು ಎಫಿಷ್ಯೆಂಟ್ ಮ್ಯಾನೇಜ್‌ಮೆಂಟ್ ಮಾಡಲು ತಕ್ಕ ಸಿಬ್ಬಂದಿ ಇಟ್ಟು ಕೆಲಸ ಮಾಡಿಸಿದರೆ ಅನುಕೂಲ ವಾಗುತ್ತದೆ ಎಂದು ಹೇಳುತ್ತೇನೆ. ತಾವು ದಕ್ಷತೆಗೆ ಧಕ್ಕೆ ಬರಬಹುದು, ಅದರ ಬಗ್ಗೆ ಬಹಳ ನಿಗಾ ಕೂಡ ಬೇಕು ಎಂದು ಹೇಳಬಹುದು. ಬೇರೆ ಕೆಲವು ಪ್ರಾಂತಗಳಲ್ಲಿ ಮಾಡಿರುವಂತೆ ತಕ್ಕ ನಿಗಾ ಇಟ್ಟುಕೊಂಡು ಟೆಂಡರು ಮೂಲಕ ವಿಲೇ ಮಾಡಿ ಕೆಲಸ ಮಾಡಿಸಿದರೆ ಉಳಿತಾಯವಾಗುತ್ತದೆ.

ಎರಡನೆಯದಾಗಿ ದಾಸ್ತಾನಿರುವ ಸಾಮಾನಿನ ಬಗ್ಗೆ, ಲೈನನ್ನು ಹಾಕಲು ಇರುವ ಸಾಮಾನಿನ ಬಗ್ಗೆ ಅನೇಕ ದೂರುಗಳಿವೆ. ಲೈನು ಹಾಕಬೇಕೆಂದು ಹೆಚ್ಚು ಸಾಮಾನು ತೆಗೆದುಕೊಳ್ಳುತ್ತಿದ್ದಾರೆ, ಸಾಮಾನ್ಯವಾಗಿ ಕಳೆದು ಹೋಯಿತು, ಮುರಿದು ಹೋಯಿತು ಎಂದು ನೆಪ ಹೇಳಿ ಹೆಚ್ಚು ಸಾಮಾನನ್ನು ತೆಗೆದುಕೊಳ್ಳುತ್ತಿದ್ದಾರೆಂದು ತಿಳಿದು ಬರುತ್ತದೆ ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಇದರ ಬದಲು ಪ್ರೈವೇಟ್ ಏಜನ್ಸಿ ಮೂಲಕ ಟೆಂಡರು ಕರೆದು ಕೆಲಸ ಮಾಡಿಸಿದರೆ ಹಣವೂ ಉಳಿಯುತ್ತದೆ, ದಾಸ್ತಾನಿನ ವಿಚಾರದಲ್ಲಿ ಆಗುವ ಅನ್ಯಾಯವೂ ತಪ್ಪುತ್ತದೆ, ಸಿಬ್ಬಂದಿಯೂ ಹೆಚ್ಚಾಗಿ ಬೇಕಾಗುವುದಿಲ್ಲ.

ಮಲೆನಾಡಿನ ಪ್ರದೇಶಗಳಲ್ಲಿ ಬೈಲು ಸೀಮೆಯಲ್ಲಿರುವ ಹಾಗೆ ಭಾರಿ ಗ್ರಾಮಗಳಿಲ್ಲ, ಸಣ್ಣ ಸಣ್ಣ ಹಳ್ಳಿಗಳಿವೆ. ವಿದ್ಯುಚ್ಛಕ್ತಿ ಲೈನು ಹಾಕುವುದಕ್ಕೆ, ಇರಿಗೇಷನ್ ಪಂಪು ಕೊಡುವುದಕ್ಕೆ ನಿರ್ದಿಷ್ಟವಾದ ಪರ್ಸೆಂಟೇಜ್ ಬರಬೇಕು, ಅದನ್ನು ಕೊಡುವುದಾದರೆ ಕೊಡಬಹುದು ಎಂದು ಹೇಳುತ್ತೀರಿ. ನೀವು ನಿಜವಾಗಿಯೂ ರೈತನ ಆರ್ಥಿಕಮಟ್ಟ ಹೆಚ್ಚಿಸಬೇಕಾದರೆ ಲೈನು ಹಾಕಿ ಸೌಕರ್ಯ ಕೊಟ್ಟು ಅನುಕೂಲವಾದ ಮೇಲೆ ನೀವು ಕೇಳುವ ಪರ್ಸೆಂಟೇಜ್ ತೆಗೆದುಕೊಳ್ಳಬಹುದು. ಆಗ ಹೆಚ್ಚಾಗಿ ಕೊಡಲು ಅವಕಾಶವಾಗುತ್ತದೆ. ಹಾಗಿಲ್ಲದೆ ಲೈನು ಹಾಕುವುದಕ್ಕೆ ಮುಂಚೆಯೇ ಇಷ್ಟು ಪರ್ಸೆಂಟೇಜ್ ಕೊಡುವುದಾದರೆ ಕೊಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಮಲೆನಾಡಿನಲ್ಲಿ ಬಹಳ ಕಷ್ಟವಿದೆ. ವಿದ್ಯುಚ್ಛಕ್ತಿ ಸೌಕರ್ಯ ಕೊಟ್ಟರೆ ಅಲ್ಲಿನವರ ಆರ್ಥಿಕ ಮಟ್ಟ ಹೆಚ್ಚಿ ಸರ್ಕಾರಕ್ಕೂ ಕ್ರಮೇಣ ಅನುಕೂಲವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಪರ್ಸೆಂಟೇಜನ್ನು ಹೆಚ್ಚಿಸಿ ಶೇಕಡ ಐದು ಅಥವಾ ಏಳು ಕಡ್ಡಾಯವಾಗಿ ಕೊಟ್ಟರೆ ಸೌಕರ್ಯ ಕೊಡುತ್ತೇವೆಂದು ಒತ್ತಾಯ ಮಾಡದೆ ಮೊದಲು ವಿದ್ಯುಚ್ಛಕ್ತಿನ್ನೊದಗಿಸ ಬೇಕೆಂದು ಅರಿಕೆ ಮಾಡುತ್ತೇನೆ.

ಈಚೀಚೆಗೆ ಇರಿಗೇಷನ್ ಪಂಪುಗಳನ್ನೊದಗಿಸುವುದಕ್ಕೂ, ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೂ ಅನೇಕ ಯೋಜನೆಗಳು ಮಂಜೂರಾಗಿವೆ. ಆದರೆ ಸಾಮಾನು ಬಂದಿಲ್ಲ, ಅದರಿಂದ ಕೆಲಸ ಕೈಗೊಳ್ಳಲು ನಿಧಾನವಾಗಿದೆಯೆಂದು ಹೇಳುವುದು ಸರ್ವೇಸಾಧಾರಣವಾಗಿದೆ. ಹಣ ಡಿಪಾಜಿಟ್ಟುಮಾಡಿ ಪಂಪು ತರಿಸಿದರೂ ಇನ್ನೂ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸದೆ ಇರುವ ಅನೇಕ ಉದಾಹರಣೆಗಳಿವೆ. ಈ ಬಗ್ಗೆ ಸರ್ಕಾರ ತೀವ್ರ ಕಾರ್ಯಕ್ರಮ ತೆಗೆದುಕೊಂಡು ಜಾಗ್ರತೆಯಾಗಿ ಸಾಮಾನು ತರಿಸಿ ಯಾರು ಡಿಪಾಜಿಟ್ ಮಾಡಿದ್ದಾರೋ ಅವರಿಗೆ ಜಾಗ್ರತೆ ಇರಿಗೇಷನ್ ಪಂಪು ತರಿಸಿಕೊಟ್ಟು ಅದಕ್ಕೂ ಮತ್ತು ದೀಪದ ಸೌಕರ್ಯ ಬೇಕಾಗಿರುವ ಕಡೆಗೂ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಬೇಕು.

ಇಲಾಖೆಯ ವಿಚಾರ ತೆಗೆದುಕೊಂಡರೆ, ಈಗ ಸುಮಾರು 8-10 ವರ್ಷಗಳಿಂದ ಕೆಲವರು ಆಪರೇಟರುಗಳಾಗಿದ್ದಾರೆ ಅವರಿಗೆ ಇನ್ನೂ 50-5-100 ರೂಪಾಯಿಗಳ ಗ್ರೇಡನ್ನು ನಿಗದಿ ಮಾಡಿ ಖಾಯಂಮಾಡಿ ಇನ್‌ಕ್ರಿಮೆಂಟ್ ಕೊಟ್ಟಿಲ್ಲ. ಇದರಿಂದ ಅವರಿಗೆ ಬಹಳ ಅತೃಪ್ತಿಯಾಗಿದೆ. ಸರ್ಕಾರಕ್ಕೆ ಅನೇಕ ಸಲ ಇದನ್ನು ತಿಳಿಸಲಾಗಿದೆ. ಜಾಗ್ರತೆಯಾಗಿ ಇದಕ್ಕೆ ತಕ್ಕ ಕಾರ್ಯಕ್ರಮ ಕೈಗೊಂಡು ಕೆಲಸವನ್ನು ಅವರಿಗೆ ಖಾಯಂಮಾಡಿ ಇನ್‌ಕ್ರಿಮೆಂಟುಗಳನ್ನು ಕೊಡಲು ಅವಕಾಶ ಮಾಡಬೇಕು. ಇಲ್ಲಿಯವರೆಗೂ ಈ ಕೆಲಸವನ್ನು ನಿಧಾನ ಮಾಡಿರುವುದು ಸರಿಯಲ್ಲ. ಆಪರೇಟರುಗಳ ಜವಾಬ್ದಾರಿ ಹೆಚ್ಚಾಗಿದೆ. ಅವರು ಬಹಳ ಮುತವರ್ಜಿಯಿಂದ ಕೆಲಸ ಮಾಡಬೇಕಾಗಿದೆ. ಸರ್ಕಾರ ಕೂಡಲೆ ಸಹಾನುಭೂತಿಯಿಂದ ಈ ವಿಚಾರವನ್ನು ಪರಿಶೀಲಿಸಿ ಜಾಗ್ರತೆಯಾಗಿ ಈ ನೌಕರರಿಗೆ ಕೆಲಸ ಖಾಯಂಮಾಡಿ ಇನ್‌ಕ್ರಿಮೆಂಟು ಮಂಜೂರು ಮಾಡಬೇಕು. ಇಲ್ಲಿಯವರೆಗೂ ಹೀಗೆ ನಿಧಾನ ಮಾಡಿರುವುದು ತಪ್ಪು. ಇದರ ಬಗ್ಗೆ ತಕ್ಷಣ ಕಾರ್ಯಕ್ರಮ ಕೈಗೊಳ್ಳುತ್ತೀರೆಂದು ನಂಬಿ ಈ ಡಿಮ್ಯಾಂಡನ್ನು ಅನುಮೋದಿಸುತ್ತೇನೆ.

*ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈ ಡಿಮ್ಯಾಂಡಿನ ವಿಷಯದಲ್ಲಿ ಒಂದೆರಡು ಸಲಹೆ ಕೊಡಲು ಇಷ್ಟಪಡುತ್ತೇನೆ. ನಾವು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಉದ್ಯಮದಲ್ಲಿ ತೊಡಗಿರುವಾಗ ಅದನ್ನು ಒಂದು ಕೈಗಾರಿಕೆಯ ಹಾಗೆ ಭಾವಿಸಬೇಕೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಇದನ್ನು ಆ ರೀತಿಯಾಗಿ ಕೈಗಾರಿಕೆಯೆಂದು ಗಮನಿಸದೇ ಹೋದರೆ ಈಗ ಆಗುತ್ತಿರುವ ಅನೇಕ ಲೋಪದೋಷಗಳು ಇದೇ ರೀತಿ ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ. ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರವಾಗಿ "The average cost of production at the Generating Station is about 0·54 anna per unit" ಎಂದು ಹೇಳಿದ್ದೀರಿ. ಇದಕ್ಕಿಂತ ಕಡಮೆ ದರದಲ್ಲಿ ನಾವು ಪವರನ್ನು ಒದಗಿಸುತ್ತಿದ್ದೇವೆ. ಉತ್ಪತ್ತಿಯ ಖರ್ಚನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ಜನರೇಟಿಂಗ್ ಸ್ಟೇಷನ್ನಿಂದ ಟ್ರ್ಯಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಆದಮೇಲೆ ಸರಬರಾಯಿ ಮಾಡುವ ಪಾಯಿಂಟ್‌ವರೆಗೆ ಎಷ್ಟು ಖರ್ಚಾಗುತ್ತದೆಂಬುದನ್ನೂ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಗಮನಿಸಬೇಕು. ಇದಕ್ಕೆ 25 ಕೋಟಿ ರೂಪಾಯಿಗಳ ಬಂಡವಾಳ ಹಾಕಿದ್ದೇವೆ. ಇದರಮೇಲೆ ಬಡ್ಡಿ ಎಷ್ಟಾಗುತ್ತದೆಯೆಂಬುದನ್ನು ಗಮನಿಸಬೇಕು. ಇದಕ್ಕಿಂತ ಹೆಚ್ಚಾಗಿ ವಿದ್ಯುಚ್ಛಕ್ತಿ ಸರಬರಾಯಿ ಮಾಡುವಾಗ ಒಂದು ವೈಶಿಷ್ಟ್ಯವಿದೆ. ಉತ್ಪತ್ತಿ ಮಾಡುವ ಪ್ರದೇಶದಲ್ಲಿ ಎಷ್ಟು ಕಿಲೋವಾಟು ಉತ್ಪತ್ತಿಯಾಗುತ್ತದೆಯೋ ಅಷ್ಟು ಪವರು ನಾವು ಕನ್ಸ್ಯೂಮ್ ಮಾಡುವ ಪ್ರದೇಶದಲ್ಲಿ ಒದಗುವುದಿಲ್ಲ. ಮಧ್ಯೆ ಅನೇಕವಾಗಿ ಅನೇಕ ಕಾರಣದಿಂದ ಪೋಲಾಗುತ್ತದೆ. ಇದನ್ನು ಪ್ರವೀಣರಿಂದ ತಿಳಿದುಕೊಳ್ಳಲು ಸಾಧ್ಯ. ಆದರೆ ಜನರೇಟಿಂಗ್ ಸ್ಟೇಷನ್ನಿಂದ ಕನ್ಸ್ಯೂಂ ಮಾಡುವ ಪ್ರದೇಶದವರೆಗೆ ಒಂದು ಮೈಲಿ ಅಥವಾ ಎಷ್ಟು ದೂರವಿರುತ್ತದೋ ಅಷ್ಟು ದೂರದಲ್ಲಿ ಎಷ್ಟು ಪವರ್ ಈ ರೀತಿಯಾಗಿ ದಾರಿಯಲ್ಲಿ ನಷ್ಟವಾಗುತ್ತದೆ ಎಂಬುದನ್ನು ಇನ್ನೂ ಇಲಾಖೆ ಸರ್ಕಾರಕ್ಕೆ ವರದಿ ಮಾಡಿಲ್ಲವೆಂಬ ಭಾವನೆಯಿದೆ. ಸರ್ಕಾರದವರು ಇದನ್ನು ಮುಖ್ಯವಾಗಿ ಗಮನಿಸಿ ಉತ್ಪತ್ತಿಯ ಖರ್ಚೆಷ್ಟು ಎಂದು ಲೆಕ್ಕಹಾಕಿ ಸರಬರಾಯಿ ಮಾಡುವುದು ಅಗತ್ಯ. ಇಲ್ಲಿಯವರೆಗೆ ಉತ್ಪತ್ತಿಯ ಖರ್ಚನ್ನು ನಿಗದಿಮಾಡಲು ಸಾಧ್ಯವಾಗಿಲ್ಲ. ಮಂತ್ರಿಗಳು ಬೆಳಗ್ಗೆ ಉತ್ತರ ಕೊಡುವಾಗಕೂಡ ಯಾವ ಯಾವ ಪಾಯಿಂಟಿನಲ್ಲಿ ಡಿಸ್ಟ್ರಿಬ್ಯೂಷನ್ ಮತ್ತು ಟ್ರಾನ್ಸ್ಮಿಷನ್ ಸ್ಟೇಜಿನಲ್ಲಿ ಖರ್ಚೆಷ್ಟು, ಉತ್ಪತ್ತಿಯ ಖರ್ಚೆಷ್ಟು ಎಂದು ತಿಳಿಸಲು ಸಾಧ್ಯವೆ ಎಂದು ಕೇಳಿದಾಗ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹೀಗೆ ಕನ್ಸ್ಯೂಂ ಮಾಡುವ ಕಡೆ ಉತ್ಪತ್ತಿಯ ಖರ್ಚೆಷ್ಟಾಗುತ್ತದೆಂದು ನಿಖರವಾಗಿ ಹೇಳುವ ಶಕ್ತಿ ಸರ್ಕಾರಕ್ಕೆ ಬರಬೇಕಾದ್ದು ಅಗತ್ಯ. ಈ ರೀತಿ ಮಾಡಿದರೆ ಕೈಗಾರಿಕೆಯ ಹಾಗೆ ಈ ಉದ್ಯಮವನ್ನು ಪರಿಗಣಿಸುವುದಕ್ಕೆ ಸಾಧ್ಯ ಎಂಬುದನ್ನು ಗಮನಿಸಬೇಕು ಇನ್ನು ಕೆಲವು ಕೈಗಾರಿಕೆಗಳಿಗೆ ಕೊಟ್ಟಿರುವುದನ್ನು ನೋಡಿದರೆ ಉತ್ಪತ್ತಿ ಖರ್ಚನ್ನು ಗಮನಿಸದೆ ಒದಗಿಸಿರುವುದು ಅಷ್ಟು ಚೆನ್ನಾಗಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಚಿನ್ನದ ಗಣಿ, ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಮತ್ತು ಇತರ ಕೈಗಾರಿಕೆಗಳಿಗೆ ಒದಗಿಸುವಾಗ ಉತ್ಪತ್ತಿಯ ಖರ್ಚನ್ನು ಲೆಕ್ಕದಲ್ಲಾದರೂ ಇಡದಿದ್ದರೆ ಬಹಳ ಕಷ್ಟವಾಗುತ್ತದೆ. ಮುಂದಾದರೂ ಉತ್ಪತ್ತಿಯ ಖರ್ಚು ಇಷ್ಟು ಎಂದು ನಿಖರವಾಗಿ ಸಭೆಯ ಗಮನಕ್ಕೆ ತರುವುದು ಅಗತ್ಯ.

ಇನ್ನು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಶ್ರೀನಿವಾಸ ಯ್ಯಂಗಾರ್‌ರವರು ಒಂದು ಖೋತಾ ಸೂಚನೆಯನ್ನು ಕಳುಹಿಸಿದ್ದಾರೆ. ತಂತಿ ಈಗ ಕಳವಾಗುತ್ತಾ ಇರುತ್ತದೆ; ಎಷ್ಟು ಲಕ್ಷ ರೂಪಾಯಿಗಳವರೆಗಾಗುತ್ತಿದೆ, ಯಾರು ಹೇಗೆ ಮಾಡುತ್ತಿದ್ದಾರೆ ಎಂಬುದು ಇನ್ನೂ ಚಿದಂಬರ ರಹಸ್ಯವಿದ್ದಹಾಗೆ ಇದೆಯೆಂದು ಹೇಳಬಹುದು. ತಂತಿ ಕಳವುಮಾಡಲು ಪರಿಣತರಿಗೆ, ಈ ಇಲಾಖೆಯಲ್ಲಿ ಕೆಲಸಮಾಡುವವರಿಗೆ ಮಾತ್ರ ಸಾಧ್ಯವೇ ಹೊರತು ಇತರರಿಗೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಇತರರು ವಿದ್ಯುಚ್ಛಕ್ತಿ ಲೈನಿನ ಹತ್ತಿರ ಹೋಗಿ ಅದನ್ನು ಮುಟ್ಟುವುದಕ್ಕೇ ಹೆದರುತ್ತಾರೆ. ಸ್ವಲ್ಪ ಮಾಹಿತಿಯುಳ್ಳ ಜನರಿಗೆ, ಇಲಾಖೆಯಲ್ಲಿರುವವರಿಗೆ ಅಥವಾ ಈ ಉದ್ಯಮದಲ್ಲಿ ನಿರತರಾಗಿರುವವರಿಗೆ ಮಾತ್ರ ಈ ಕೆಲಸ ಮಾಡಲು ಸಾಧ್ಯ. ಪ್ರತಿ ವರ್ಷ ಏತಕ್ಕಾಗಿ ತಂತಿ ಕಳವಾಗುತ್ತಿದೆ, ಈ ಕಳವನ್ನು ತಪ್ಪಿಸಲು ಏನು ಕಾರ್ಯಕ್ರಮವಿದೆ, ಇದಕ್ಕಾಗಿ ಎಷ್ಟು ಖರ್ಚಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ಕಡೆ ಸ್ವಲ್ಪ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈ ವಿಷಯದಲ್ಲಿ ಇನ್ನೂ ಅನೇಕ ದೂರುಗಳಿವೆ. ಇಲಾಖೆಯಲ್ಲಿ ಕೆಲಸ ಮಾಡುವವರೇ ಕಳುವು ಮಾಡುತ್ತಾರೆ, ಆ ಮೇಲೆ ಹೊಸ ಸರಬರಾಯಾದ ಮೇಲೆ ಅವರ ಹತ್ತಿರವಿರುವ ಹಳೆಯ ತಂತಿಯನ್ನೇ ಹಾಕುತ್ತಾರೆ ಎಂಬ ದೂರಿದೆ. ಎಷ್ಟುಮಟ್ಟಿಗೆ ಇದರಲ್ಲಿ ಸತ್ಯವಿದೆ ಯೆಂಬುದನ್ನು ನೋಡಬೇಕು.

ಇನ್ನು ಕಂಟ್ರಾಕ್ಟು ಕೊಡುವ ವಿಷಯದಲ್ಲಿ ಈ ಇಲಾಖೆಯಲ್ಲಿ ಕಟ್ಟಡ ಕಟ್ಟುವುದರಲ್ಲಿ ಸಹ ದೂರುಗಳು ಬರುತ್ತಿವೆ. ಈಗ ಸಾಮಾನ್ಯವಾಗಿ ಮರಾಮತ್ ಇಲಾಖೆ ಕಂಟ್ರಾಕ್ಟು ಕೊಡುವಾಗ ಅಂದಾಜುದರಕ್ಕಿಂತ ಶೇಕಡ 10-20ರಷ್ಟು ಕಡಮೆ ಕೊಡವ ಪರಿಸ್ಥಿತಿಯಿದೆ. ಆದರೆ ಇಲಾಖೆಯಲ್ಲೇ ಮನೆ ಕಟ್ಟುವವರಿಗೆ ಅಂದಾಜಿಗಿಂತ ಶೇಕಡ 30-40ಕ್ಕೆ ಕಡಮೆಯಿಲ್ಲದೆ ಕೊಟ್ಟು ಕಂಟ್ರಾಕ್ಟು ಕೊಡುತ್ತಿದ್ದಾರೆಂದು ಗೊತ್ತಾಗಿದೆ. ಇಷ್ಟೇ ಅಲ್ಲದೆ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಮನೆ ಕಟ್ಟುವುದನ್ನು ಒಬ್ಬರಿಗೇ ಖಾಯಮ್ಮಾಗಿ ಕೊಟ್ಟಿರುವ ಸಂದರ್ಭಗಳೂ ಇವೆ. ಹೀಗೆಯೇ ಇನ್ನೇನು ದೋಷವಿದೆಯೆಂದರೆ, ಕಾಲಕ್ಕೆ ಸರಿಯಾಗಿ ಹಣವನ್ನು ಪಾವತಿಮಾಡುತ್ತಿಲ್ಲ ಎಂದು ಹೇಳುತ್ತಾರೆ. ನೂರಕ್ಕೆ ನಲವತ್ತರಷ್ಟು ಜಾಸ್ತಿಯಾಗಿ ಕಂಟ್ರಾಕ್ಟರುಗಳು ಕೋಟ್ ಮಾಡುತ್ತಾರೆ. ಇಲಾಖೆಯವರೇ ಕೆಲಸ ಮಾಡಲು ಸಾಧ್ಯವಿಲ್ಲದ್ದರಿಂದ ಶೇಕಡ 40-50 ರಷ್ಟು ಅಂದಾಜು ಮೊಬಲಗಿನ ಮೇಲೆ ಜಾಸ್ತಿಯಾಗಿ ಕಂಟ್ರಾಕ್ಟರಿಗೆ ಕೊಡುವುದು ಸೂಕ್ತವಲ್ಲ. ಮರಾಮತ್ ಇಲಾಖೆ ಪ್ರತಿ ಮನೆ ಕಟ್ಟುವಾಗಲೂ ಟೆಂಡರು ಕರೆದು ಬೇಗ ಹಣ ಕೊಡಲು ಏನುಮಾಡಬೇಕೋ ಮಾಡಿ ಖರ್ಚು ಬಾಬನ್ನು ಕಡಮೆಮಾಡಬೇಕು.

ಇನ್ನು ಹಂಗಾಮಿ ಕೆಲಸ ಮಾಡುವವರ ಸಂಖ್ಯೆ ಬಹಳ ಹೆಚ್ಚಾಗಿದೆ, ಮಿತಿಯಿಲ್ಲದೆ ಇದೆ ಎಂಬ ದೂರಿದೆ. ಎಷ್ಟು ಮಟ್ಟಿಗೆ ಈ ಸಂಖ್ಯೆಯನ್ನು ಕಡಮೆಮಾಡಲು ಸಾಧ್ಯವೆಂಬುದನ್ನು ಸರ್ಕಾರದವರು ತನಿಖೆಮಾಡಿ ಅಂತ್ಯ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಭಾವಿಸುತ್ತೇನೆ.

ಇಷ್ಟು ತಿಳಿಸಿ ಒಟ್ಟಿನಲ್ಲಿ ಈ ಇಲಾಖೆಯ ಕೆಲಸ ಕಾರ್ಯ ಒಂದು ಕೈಗಾರಿಕೋದ್ಯಮದ ಹಾಗೆ ನಡೆಯಬೇಕು, ಆ ರೀತಿಯಾಗಿ ಲೆಕ್ಕಾಚಾರ ನಡೆದರೆ ಮಾತ್ರ ನಾವು ಹಾಕಿರುವ ಬಂಡವಾಳಕ್ಕೂ ಒಂದು ಬೆಲೆ ಬರುತ್ತದೆ, ದೇಶದ ಜನರಿಗೂ ಅದರಿಂದ ಹಿತವಾಗುತ್ತದೆ ಎಂದು ತಿಳಿಸುತ್ತೇನೆ.

Sri Mulka GOVINDA REDDY (Chitaldrug).—Mr. Speaker, Sir, I oppose the Demand. The State Government has invested about 26 crores of rupees according to the latest figures. This is the biggest industry that the Government has undertaken. Some years back when this electrical industry was undertaken by the Government, it was within the easy reach of the Chief Electrical Engineer to manage this department and supervised by a non-technical Minister. But, to-day, it has grown into such a big industry where some 12,000 workers are employed and where crores of rupees are spent annually that it has rather

become difficult for a department to manage this huge industry.

4-30 P.M.

The Government of India in 1948 passed the Electricity Act where it was obligatory on the State Governments to constitute State Electricity Boards. According to Section 5 regarding the constitution and composition of the State Electricity Board,

> "The State Government shall as soon as may be after the issue of the notification under sub-section (4) of section 1, constitute by notification in the official Gazette a State Electricity Board under such name as shall be specified in the notification.
>
> The Board shall consist of not less than three and not more than seven members appointed by the State Government.
>
> All members of the Board shall be full time members.
>
> Of the members, one shall be a person of proved administrative ability and commercial experience; one shall be an electrical engineer with wide experience; and one shall be an accountant with experience of the electricity supply industry or other public utility.
>
> One of the members possessing any of the qualifications specified in sub-section (4) shall be appointed by the State Government to be the Chairman of the Board.
>
> A person shall be disqualified from being appointed or being a member of the Board if he is, or within the twelve months last preceding was, a member of the Central or of any State Legislature or any local authority.
>
> No act done by the Board shall be called in question on the ground only of the existence of any vacancy in, or any defect in the constitution of the Board."

